ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ


ಸಂಪುಟ 26 ಸಂಚಿಕೆ 9-10 ಮಾರ್ಚ್ 07, 2004 ಬೆಲೆ ರೂ. 3.00



ಫೆಬ್ರವರಿ 24,
ಯಶಸ್ವಿ ಮಹಾಮುಷ್ಕರ - ಎಚ್ಚರಿಕೆಯ ಘಂಟೆ

ಪಕ್ಷಾಂತರ ಪ್ರಹಸನಗಳು
ಕಾಂಗ್ರೆಸ್‌ಗೆ ಸೋಲುವ ಭಯ





ಡಿ.ಪಿ.ಯಾದವ್ ಪ್ರಕರಣ
ಎಲ್ಲಿದೆ ಬಿಜೆಪಿಗೆ ನೈತಿಕತೆ?

ಇರಾಕ್ : ಅಮೆರಿಕಾಕ್ಕೆ ಕಾದಿದೆ ಭೀಕರ ಭವಿಷ್ಯ

- ಯಾರ ಭಾರತ ಪ್ರಕಾಶಿಸುತ್ತಿದೆ ?
- ಹೊಸ ಪಕ್ಷ : 'ಫೀಲ್ ಗುಡ್ ಪಾರ್ಟಿ'
- ಬೂಟಾಟಿಕೆಯ ಭರಾಟೆ
- ಬಂದ ದಾರಿಗೆ ಸುಂಕ ಕೊಡಲೇಬೇಕು

ಫಿಲಂ ಉತ್ಸವಕ್ಕೆ ಬಡಿದ ಕೇಸರೀಕರಣ





ಪ್ರಕಾಶಕರು
ಕನ್ನಡ ಅಭಿವೃದ್ಧಿ ಪ್ರಾಧಿಕಾರ
ಕನ್ನಡ ಭವನ, ರವೀಂದ್ರ ಕಲಾಕ್ಷೇತ್ರ,
ಬೆಂಗಳೂರು
ಬೆಲೆ ರೂ. 50/-

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಅನೇಕ ಮಹತ್ವದ ಘಟನೆಗಳು ಹಾಗೂ ವ್ಯಕ್ತಿಗಳನ್ನು ಅತ್ಯಂತ ಸನಿಹದಿಂದ ಕಂಡ ಪತ್ರಕರ್ತೆ ಬರ್ಕ್‌ವೈಟ್‌ರವರು ಪತ್ರಿಕೆಯೊಂದನ್ನು ಆಳವಾಗಿ ವಿಭಿನ್ನವಾದ ದೃಷ್ಟಿಯಿಂದ ವಿಶ್ಲೇಷಿಸಿದವರು. ಗಾಂಧೀಜಿಯವರೊಂದಿಗೆ ನಿಕಟ ಸಂಬಂಧವಿರಿಸಿಕೊಂಡಿದ್ದ ಬಿರ್ಲಾ, ಟಾಟಾನಂತಹ ಹಲವಾರು ಭಾರತೀಯ ಬಂಡವಾಳಗಾರರ ನಿಜವಾದ ಹಿತಾಸಕ್ತಿಗಳನ್ನು, ಗಾಂಧಿಯವರ ಚಿಂತನೆಗಳು ವರ್ಗ-ಸ್ವರೂಪವನ್ನು ಅತ್ಯಂತ ಸೂಕ್ಷ್ಮವಾಗಿ ಗ್ರಹಿಸಿರುವ ಬರ್ಕ್‌ವೈಟ್‌ರವರ ಬರಹವನ್ನಿಲ್ಲಿ ನೀಡಲಾಗಿದೆ.

ಅನುವಾದಕ್ಕೆ ಒತ್ತಾಸೆ
ಪಿ.ಲಂಕೇಶ್
ಕನ್ನಡಕ್ಕೆ ಅನುವಾದ
ಖ್ಯಾತ ಜಾನಪದ ತಜ್ಞೆ, ಲೇಖಕಿ
ಡಾ. ಕೆ.ಆರ್.ಸಂಧ್ಯಾರೆಡ್ಡಿಯವರು

ಕೈಗಾರಿಕಾ ನೇತಾರರು

ಘನಶ್ಯಾಮದಾಸ್‌ಜಿ ಬಿರ್ಲಾ ಅವರ ಹೆಸರು ಬಹುವಾಗಿ ಜವಳಿ ಉದ್ಯಮದೊಂದಿಗೇ ಕೇಳಿಬರುತ್ತಿದ್ದರೂ ಅವರು ಇನ್ನೂ ಹಲವಾರು ಉದ್ಯಮಗಳಿಗೆ ಪ್ರಸಿದ್ಧರಾಗಿದ್ದರು. ಅದರಲ್ಲಿ ಮುಖ್ಯವಾದುದು ಸಕ್ಕರೆಯ ಉದ್ಯಮ. ಸಕ್ಕರೆಯ ಮೇಲಿನ ನಿಯಂತ್ರಣ ತೆಗೆಯಬೇಕು ಎಂಬ ಹೋರಾಟ ನಡೆಯುತ್ತಿದ್ದ ಕಾರಣ ಈ ಉದ್ಯಮ ಬಹಳ ಸುದ್ದಿಯಲ್ಲಿತ್ತು. ಬಿರ್ಲಾ ನಡೆಸುತ್ತಿದ್ದ ಇನ್ನಿತರ ಉದ್ಯಮಗಳೆಂದರೆ ಮೋಟಾರು ಕಾರುಗಳು, ಬೈಸಿಕಲ್‌ಗಳು, ಬಾಯ್ಲರ್‌ಗಳು, ಕ್ಯಾಲ್ಸಿಯಂ ಕಾರ್ಬೈಡ್‌ಗಳು, ಕೈಗಾರಿಕಾ ಆಲ್ಕೋಹಾಲ್, ಲಿನೋಲಿಯಂ, ವುಲನ್, ಫ್ಲಾಕ್ಸ್, ತುಪ್ಪ, ಮಾರ್ಗರೀನ್, ಸ್ಟಾರ್ಚ್, ಕನ್‌ಫೆಕ್ಷನರಿ, ಬ್ಯಾಂಕಿಂಗ್ ಹಾಗೂ ಇನ್‌ಶೂರೆನ್ಸ್... ಇಷ್ಟೆಲ್ಲವರ ಜೊತೆಗೆ ಅವರು ಅನೇಕ ವೃತ್ತಪತ್ರಿಕೆಗಳ ಮಾಲೀಕರಾಗಿದ್ದರು. ಮತ್ತು ರೇಡಿಯೋ ಬಗ್ಗೆಯೂ ಬಹಳ ಆಸಕ್ತಿವಹಿಸಿದ್ದರು. ಅವರು ಕೆಲವು ಕಾಲ ಅಮೆರಿಕದಲ್ಲಿದ್ದರು. ಇಂಗ್ಲೆಂಡಿನೊಂದಿಗೆ ವ್ಯಾಪಾರವಹಿವಾಟು ಹೊಂದಿದ್ದರು. ಬಿರ್ಲಾ ಅವರನ್ನು ಇಂಡಿಯಾದ ನಂಬರ್ 1 ಕೈಗಾರಿಕೋದ್ಯಮಿ ಎಂದು ಭಾವಿಸಲಾಗಿತ್ತು. ಅವರ ಬಗ್ಗೆ ನನಗೆ ತುಂಬ ಆಸಕ್ತಿ ಇದ್ದುದೇಕೆಂದರೆ ಸರ್ಕಾರದ ಉನ್ನತ ನಾಯಕರೊಂದಿಗೆ ಅವರಿಗೆ ನಿಕಟ ಸಂಬಂಧವಿತ್ತು. ಅದರಲ್ಲಿಯೂ ಗಾಂಧಿಯವರೊಂದಿಗೆ ಅವರ ಸಂಬಂಧ ವಿಶೇಷ ತೆರನಾದದ್ದು. ಗಾಂಧೀ ವಿಚಾರಗಳಿಂದ ಹೊಮ್ಮಿದ Trusteeship ಎಂಬ ಪರಿಕಲ್ಪನೆಯ ಬಗ್ಗೆ ಬಿರ್ಲಾ ದೃಷ್ಟಿ ಏನು ಎಂಬುದನ್ನು ತಿಳಿಯುವುದು ನನ್ನ ಉದ್ದೇಶವಾಗಿತ್ತು. ಗಾಂಧಿಯವರ ಸೆಕ್ರೆಟರಿಯಾಗಿದ್ದ ಪ್ಯಾರೇಲಾಲ್ ಈ ಟ್ರಸ್ಟೀಶಿಪ್‌ನ್ನು ನನಗೆ ಹೀಗೆ ವಿವರಿಸಿದ್ದರು: **ಸಂಪತ್ತು ಮತ್ತು ಆಸ್ತಿಯನ್ನು ಹಾಗೇ ಲಿಕ್ವಿಡೇಟ್ ಮಾಡುವುದಕ್ಕೆ ಬದಲಾಗಿ ಅವುಗಳ ಧರ್ಮದರ್ಶಿಗಳಾಗಿ ರೂಪುಗೊಳ್ಳಲು ಬಂಡವಾಳಗಾರರು ಮತ್ತು ಸಂಪತ್ತಿನ ಮಾಲೀಕರಿಗೆ ನೀಡುವ ಅವಕಾಶವೇ ಟ್ರಸ್ಟೀಶಿಪ್.** ಸಂಪತ್ತಿರುವುದು ಸ್ವಾರ್ಥಪರ ಉದ್ದೇಶಗಳಿಗೆ ಬಳಸುವುದಕ್ಕಾಗಿ ಅಲ್ಲ. ಅದು ಇಡೀ ಸಮಾಜದ ಒಳಿತಿಗಾಗಿ ಇರುವಂಥದ್ದು. ಸಂಪತ್ತಿನ ಮಾಲೀಕನಿಗೆ ಇದರಲ್ಲಿ ಕಮಿಷನ್ ಪಡೆಯುವ ಹಕ್ಕಿದೆ. ಮತ್ತು ಈ ಕಮಿಷನ್ ಮೊತ್ತ ಎಷ್ಟಿರಬೇಕು ಎಂಬುದನ್ನು ಜನರೇ ನಿರ್ಧರಿಸಬೇಕು. ಇದು ಗಾಂಧೀ ವಿಚಾರ.

ಬಿರ್ಲಾ ಅವರ ದತ್ತಿಗಳ ಬಗ್ಗೆ ಪ್ಯಾರೆಲಾಲ್ ಹೇಳಿದ್ದರು. ಅದೊಂದು ಸುದೀರ್ಘ ಪಟ್ಟಿ. ಬಿರ್ಲಾ ಕಾರ್ಮಿಕರನ್ನು ಹೇಗೆಂದರೆ ಹಾಗೆ ಹೀನಾಯವಾಗಿ ನಡೆಸಿಕೊಳ್ಳಲು ಬರುವುದಿಲ್ಲ. ಗಾಂಧೀಜಿಯ ಮುಂದೆ ಅದನ್ನು ಸಮರ್ಥಿಸಿಕೊಳ್ಳಲಾಗುವುದಿಲ್ಲ ಎಂದು ಪ್ಯಾರೇಲಾಲ್ ಹೇಳಿದರು.

ನಾನೀಗ ಭವ್ಯವಾದ ಗಾಜುಗಳಿಂದಲೇ ಸಿದ್ದಗೊಂಡಂತಿದ್ದ ಒಂದು ದೊಡ್ಡ ಡ್ರಾಯಿಂಗ್ ರೂಂನಲ್ಲಿದ್ದೆ. ಅದರ ಭವ್ಯತೆ ಲಂಡನ್, ಲುಕ್ಸಂಬರ್ಗ್ ಮೊದಲಾದ ಯಾವುದೇ ಅಂತಾರಾಷ್ಟ್ರೀಯ ಮಟ್ಟಕ್ಕೆ ಅದು ಸರಿಸಾಟಿ ಎನ್ನುವಂತಿತ್ತು. ನನ್ನನ್ನು ನೋಡಿದ ತಕ್ಷಣ ಸೋಫಾದಿಂದ ಎದ್ದುಬಂದು ನನ್ನನ್ನು ಸ್ವಾಗತಿಸಿದರು ಬಿರ್ಲಾ. ಈತ ನೇರಮಾತಿನ ಮನುಷ್ಯ ಎಂದು ನನಗೆ ಗೊತ್ತಿತ್ತು. ಹೀಗಾಗಿ ನಾನು ಬೇರೆ ಸುತ್ತು ಬಳಸಿಲ್ಲದೆ, ಟ್ರಸ್ಟಿಶಿಪ್ ಕುರಿತು ವಿಷಯವನ್ನೇ ನೇರವಾಗಿ ಪ್ರಸ್ತಾಪಿಸಿದೆ.

ಅವರ ಉತ್ತರ ನಾನು ನಿರೀಕ್ಷಿಸಿದಷ್ಟೇ ನೆಟ್ಟನೇರವಾಗಿತ್ತು. "ಗಾಂಧೀಜಿಯವರ ತತ್ವಾನುಷ್ಠಾನ ಸುಲಭವಲ್ಲ. ಅದಕ್ಕೆ ತುಂಬ ದೃಢವಾದ ಸಂಕಲ್ಪ ಬೇಕಾಗುತ್ತದೆ". ಈ ಉತ್ತರದಲ್ಲಿ ಅವರು ಏನು ಹೇಳಿದ್ದರು ಮತ್ತು ಏನನ್ನು ಹೇಳದೆ ಬಿಟ್ಟಿದ್ದರು ಎಂಬುವೆರಡನ್ನೂ ನಾನು ಗಮನಿಸಿದೆ. ಅವರು ಏನು ಹೇಳಲಿಲ್ಲವೋ ಅದನ್ನು ಅವರದೇ ಗಿರಣಿಗಳ ಕಾರ್ಮಿಕರು ಹೇಳಿದ್ದರು. ಈ ಒಂದು ಸಂಕ್ಷಿಪ್ತ ವಾಕ್ಯದ ಮೂಲಕ ಈ ಯೋಜನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಮಾನವನ ಮಿತಿಗಳೇನು ಎಂಬುದನ್ನು ಬಿರ್ಲಾ ಸೂಚಿಸಿದ್ದಾರೆ ಎಂದು ನನಗನ್ನಿಸಿತು. ಬಿರ್ಲಾ ಮಾತು ಮುಂದುವರಿಸಿದರು. "ಟ್ರಸ್ಟಿಶಿಪ್‌ನಂತಹ ವಿಚಾರದ ಬಗ್ಗೆ ಯಾರಾದರೂ ಒಪ್ಪಿಕೊಳ್ಳಲೇ ಬೇಕು. ಅದರ ಬಗ್ಗೆ ಭಿನ್ನಾಭಿಪ್ರಾಯಕ್ಕೆ ಅವಕಾಶವೇ ಇಲ್ಲ. ಆತ ಶ್ರೀಮಂತ ವ್ಯಾಪಾರೋದ್ಯಮಿಯಾಗಿರಲಿ, ರಾಜಕಾರಣಿಯಾಗಿರಲಿ ಅಥವಾ ಡಾಕ್ಟರಾಗಿರಲಿ... ಇದು ನಮ್ಮ ಹಿಂದೂ ತತ್ವಸಿದ್ಧಾಂತಕ್ಕೆ ಸಂಪೂರ್ಣ ಅನುಗುಣವಾಗಿಯೇ ಇದೆ. ನಾವು ಇಲ್ಲಿ ಬದುಕಬೇಕಾದ್ದು ಮಾನವರ ಸೇವೆಗಾಗಿ. ಒಬ್ಬ ವ್ಯಕ್ತಿ ಎಷ್ಟರಮಟ್ಟಿಗೆ ಧರ್ಮದರ್ಶಿಯಾಗಿರಬಲ್ಲ ಎಂಬುದು ಆತನ ಆತ್ಮಬಲವನ್ನು ಅವಲಂಬಿಸಿದೆ".

ಗಾಂಧಿಯವರ ವಿಚಾರ ನಿಮ್ಮ ಮೇಲೆ ಎಷ್ಟು ಪ್ರಭಾವ ಬೀರಿದೆ ಎಂದು ಕೇಳಿದೆ. ಬಿರ್ಲಾ ಹೇಳಿದರು "ನನ್ನ ಮೇಲೆ ಅದರ ಪ್ರಭಾವ ಅಸಾಧಾರಣ. ಒಬ್ಬ ವ್ಯಾಪಾರೋದ್ಯಮಿಯಾಗಿ ನನ್ನ ಜವಾಬ್ದಾರಿಗಳೇನು ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನನ್ನ ಬದುಕು ಸೇವೆಗೆ ಮೀಸಲಾಗಿದೆಯೇ ಹೊರತು ಸಂಪತ್ತನ್ನು ಸಂಚಯಿಸುವುದಕ್ಕಲ್ಲ..." ಈ ಸಾಲನ್ನು ತಟ್ಟಕ್ಕನೆ ನಿಲ್ಲಿಸಿದ ಅವರು ಇದು ಇನ್ನು ಸಾಕು ಎಂಬಂತೆ "ಈ ವಿಷಯ ತೀರ ವೈಯಕ್ತಿಕ ಮಟ್ಟಕ್ಕೆ ತಲುಪುತ್ತಿದೆ ಅನ್ನಿಸುತ್ತಿದೆ" ಎಂದರು.

ಹೀಗಾಗಿ ನಾನು 'ಸುರಕ್ಷಿತ ಪ್ರಶ್ನಾವಲಯ' ಪ್ರವೇಶಿಸಿದೆ. ಬಿರ್ಲಾ ಅವರು ಎಷ್ಟು ದೇವಸ್ಥಾನಗಳನ್ನು ಕಟ್ಟಿಸಿದ್ದಾರೆ ಎಂದು ಕೇಳಿದೆ. ಅದಕ್ಕೆ ಅವರು "ಇದು ಮುಖ್ಯವಾಗಿ ತಮ್ಮ ಅಣ್ಣನ ಆಸಕ್ತಿಯಿಂದ ನಡೆಯುತ್ತಿರುವ ಕೆಲಸ. ಆತ ತುಂಬ ಧರ್ಮಬೀರು. ನಿಜವಾಗಿ ಹೇಳುವುದಾದರೆ ನಾವು ದೇವಸ್ಥಾನಗಳನ್ನು ಕಟ್ಟಿಸುತ್ತೇವೆ. ಆದರೆ ಅದರಲ್ಲಿ ನಮಗೆ ನಂಬಿಕೆ ಇಲ್ಲ ಎಂದರು" ಈ ವಿಷಯದಲ್ಲಿ ಬಿರ್ಲಾ ಕುಟುಂಬದ ಧೋರಣೆಗೂ, ಬಿರ್ಲಾ ಕಾರ್ಮಿಕರ ಧೋರಣೆಗೂ ಇದ್ದ ಆಶ್ಚರ್ಯಕರ ಸಾಮ್ಯದಿಂದ ನಾನು ಚಕಿತಳಾದೆ. ಈ ಇಬ್ಬರಿಗೂ ದೇವಸ್ಥಾನಗಳಲ್ಲಿ ನಂಬಿಕೆ ಇರಲಿಲ್ಲ. "ನಾವು ದೇವಸ್ಥಾನಗಳನ್ನು ಕಟ್ಟಿಸುವುದು ಜನರಲ್ಲಿ ಧಾರ್ಮಿಕ ಭಾವನೆಯನ್ನು ಹರಡುವುದಕ್ಕಾಗಿ" ಎಂದರು ಬಿರ್ಲಾ.

ನಾನು, ಮಹಾತ್ಮರಿಗೆ ನಿಕಟವಾಗಿದ್ದ ಯಾರನ್ನು ಭೇಟಿಯಾದರೂ ಗಾಂಧಿಯನ್ನು ನೋಡಿದ ಕೂಡಲೇ ಅವರ ಮೇಲೆ ಯಾವ ರೀತಿಯ ಪ್ರಭಾವವಾಯಿತು ಎಂಬುದನ್ನು ಮರೆಯದೆ



ಕೇಳುತ್ತಿದ್ದೆ. ಯಾಕೆಂದರೆ ತೀರಾ ವಿಭಿನ್ನ ಕ್ಷೇತ್ರಗಳ ಜನರನ್ನು ಸೂಜಿಗಲ್ಲಿನಂತೆ ಸೆಳೆದುಕೊಂಡಿದ್ದೇ ಗಾಂಧಿ ವ್ಯಕ್ತಿತ್ವದ ತುಂಬ ಮುಖ್ಯವಾದ ವೈಶಿಷ್ಟ್ಯ. ಗಾಂಧಿಯವರೊಂದಿಗೆ ಪ್ರಥಮ ಭೇಟಿಯ ಬಗ್ಗೆ ಹೇಳಿ ಎಂದು ಬಿರ್ಲಾ ಅವರನ್ನು ಕೇಳಿದೆ. ಬಿರ್ಲಾ ಹೇಳಿದರು.

ಇಷ್ಟೊಂದು ಶ್ರೀಮಂತ ಕುಟುಂಬದಿಂದ ಬಂದಿರುವ ಹಾಗೂ ಆದಾಗಲೇ ಉದ್ಯಮ ರಂಗದಲ್ಲಿ ಯಶಸ್ಸಿನ ಹಾದಿಯಲ್ಲಿದ್ದ ನಿಮಗೆ ಗಾಂಧಿ ಹೇಗೆ ಕಾಣಿಸಿದರು ಎಂದು ಕೇಳಿದೆ. ಬಿರ್ಲಾ ಹೇಳಿದರು "ಮೊದಲ ಬಾರಿ ನೋಡಿದಾಗ ತುಂಬ ವಿಲಕ್ಷಣ ವ್ಯಕ್ತಿ ಅನ್ನಿಸಿತು. ಅವರ ಉಡುಪು ಮತ್ತು ಮಾತಿನ ಶೈಲಿ ವಿಚಿತ್ರವಾಗಿತ್ತು. ನನಗೆ ಒಂದು ರೀತಿ ಗಲಿಬಿಲಿಯಾಯಿತು. ಆದರೆ ಕ್ರಮೇಣ ಅವರ ಬಗ್ಗೆ ನನಗೆ ಅರ್ಥವಾಗುತ್ತಬಂತು. ಅವರು ಸಂಪೂರ್ಣ ಪ್ರಾಮಾಣಿಕತೆಯ, ನೇರ ನಡವಳಿಕೆಯ ವ್ಯಕ್ತಿ ಎಂಬುದನ್ನು ಅರ್ಥಮಾಡಿಕೊಂಡೆ. ರಾಜಕೀಯದ ಬಗ್ಗೆ ಅವರು ಹೊಸದೊಂದೇ ಕಲ್ಪನೆಯನ್ನು ಕೊಟ್ಟರು. ಅವರು ಒಬ್ಬ ಸಂತನೂ ಹೌದು ರಾಜಕಾರಣಿಯೂ ಹೌದು ಅನ್ನಿಸಿತು. ಅವರ ವಿಲಕ್ಷಣ ವ್ಯಕ್ತಿತ್ವಕ್ಕೆ ನಾವು ಹೊಂದಿಕೊಂಡೆವು. ಇಡೀ ಭಾರತವೇ ಅವರ ವಿಲಕ್ಷಣ ಶೈಲಿಯನ್ನು ಅನುಸರಿಸಲು ಪ್ರಾರಂಭಿಸಿತು ಎಂದು ನನಗನ್ನಿಸುತ್ತದೆ. ಇದಾಗಿ 32 ವರ್ಷಗಳಾದವು. ಆಗಿನಿಂದ ನಾನು ಅವರನ್ನು ಅನುಸರಿಸುತ್ತಿದ್ದೇನೆ. ನನ್ನಿಂದ ಅವರಿಗೆ ಯಾವ ಸೇವೆ ಸಾಧ್ಯವೋ ಅದನ್ನು ನೀಡುತ್ತಿದ್ದೇನೆ"

ನಂತರ ನಾನು ಆರ್‌ಎಸ್‌ಎಸ್‌ನ ಫೆನೆಟಿಕ್ ಹಾಗೂ ಫ್ಯಾಸಿಸ್ಟ್ ಮನೋಭಾವದ ಬಗ್ಗೆ ಮಾತನಾಡಿದೆವು. ಹೀಗೆ ಮಾತನಾಡುವಾಗ ಮುಂದೆ ಇನ್ನು ಕೆಲವೇ ದಿನಗಳಲ್ಲಿ ಇದೇ ಬಿರ್ಲಾ ಅವರ ತೋಟದ ಹಾದಿಯಲ್ಲಿ ಗಾಂಧಿಯವರು ಆರ್‌ಎಸ್‌ಎಸ್‌ನವರ ಗುಂಡಿಗೆ ಬಲಿಯಾಗುತ್ತಾರೆ ಎಂದು ನಾನಾಗಲೀ ಬಿರ್ಲಾ ಅವರಾಗಲೀ ಊಹಿಸಿರಲಿಲ್ಲ. ಆರ್‌ಎಸ್‌ಎಸ್ ಕುರಿತು ಬಿರ್ಲಾ ಹೇಳಿದರು "ಈ ಸಂಘಟನೆಯನ್ನು ಅಷ್ಟು ಗಂಭೀರವಾಗಿ ನಾನು ಪರಿಗಣಿಸುವುದಿಲ್ಲ. ಅದಕ್ಕೆ ಯಾವ ರಾಜಕೀಯ ಪ್ರಭಾವವೂ ಇಲ್ಲ. ದ್ವೇಷದ ಹೊರತಾಗಿ ಅದರಲ್ಲಿ ಯಾವ ತತ್ವವೂ ಇಲ್ಲ. ದೇಶ ಒಂದು ನೆಮ್ಮದಿಯ ಸ್ಥಿತಿಗೆ ಬಂದ ಮೇಲೆ ಯಾರಲ್ಲಿಯೂ ಇಂತಹ ದ್ವೇಷ ಉಳಿಯುವುದಿಲ್ಲ. ದ್ವೇಷದ ಮೇಲೆ ಯಾರೂ ಬದುಕುವುದು ಸಾಧ್ಯವಿಲ್ಲ". ಹಿಂದೂ ಮಹಾಸಭಾ ಬಗ್ಗೆ ಹೇಳುತ್ತಾ - "ಆರ್‌ಎಸ್‌ಎಸ್ ನಂತೆಯೇ ಮಹಾಸಭಾ ಕೂಡಾ ತಾನಾಗಿಯೇ ಅಳಿದು ಹೋಗುತ್ತದೆ. ಭವಿಷ್ಯದ ರಾಜಕೀಯ ಪಕ್ಷಗಳು ಆರ್ಥಿಕ ನೀತಿಯನ್ನು ಆಧರಿಸಿರಬೇಕು."ಸದ್ಯ, ಮಹಾಸಭಾ ಕುರಿತ ನನ್ನ ಪ್ರಶ್ನೆಗಳನ್ನು ಅವರು ತೀರ ವೈಯಕ್ತಿಕ ಎಂದು ಹಾರಿಸಲಿಲ್ಲವಲ್ಲ ಎಂದು ನನಗೆ ಸಮಾಧಾನವಾಯಿತು.

ಬಿರ್ಲಾ ಮನೆಯಲ್ಲಿ ಎರಡು ಪಕ್ಷಗಳಿದ್ದವು. ಈ ಕುಟುಂಬದ ಕಿರಿಯ ಸಹೋದರ ಗಾಂಧಿಯನ್ನು ಬೆಂಬಲಿಸಿದ್ದ ಹಿರಿಯ ಸೋದರ ಹಿಂದೂ ಮಹಾಸಭಾಗೆ ಬಹಳ ನಿಕಟವಾಗಿದ್ದರು. ಆ ನಿಕಟತೆ ಯಾವ ಮಟ್ಟದ್ದು ಎಂಬ ಗುಟ್ಟು ಎಂದಿಗೂ ಬಹಿರಂಗವಾಗಲಿಲ್ಲ. ಸಂಪ್ರದಾಯ ನಿಷ್ಠರಾದ ಬಿರ್ಲಾ ಅವರ ಅಣ್ಣನವರು ಬೆಳಕಿಗೆ ಬಾರದೆ ತಮ್ಮಷ್ಟಕ್ಕೇ ಉಳಿದ ವ್ಯಕ್ತಿಯಾಗಿದ್ದರು. ಪ್ರಾಚೀನ ಹಿಂದೂ ಕಾನೂನಿನ ಪ್ರಕಾರ ಇವರಿಬ್ಬರೂ ಕುಟುಂಬದ ಆಸ್ತಿಗೆ ಜಂಟಿ ಪಾಲುದಾರರಾದ್ದರಿಂದ, ಅಹಿಂಸಾತತ್ವ ಹಾಗೂ ಧಾರ್ಮಿಕ ಸಹಿಷ್ಣುತೆಯ ಮೇಲೆ ಗಾಂಧಿ ಹಾಗೂ ಕಾಂಗ್ರೆಸ್ಸಿಗೆ ಬೆಂಬಲ ನೀಡುತ್ತಿದ್ದ ಮನೆಯೇ ಸಹಿಷ್ಣುತೆಯೊಂದನ್ನು ಬಿಟ್ಟು ಬೇರೇನನ್ನೂ ಮಾಡಬಲ್ಲ ಹಾಗೂ ಬಹಳಷ್ಟು ಹಿಂಸಾತ್ಮಕ ಘಟನೆಗಳಿಗೆ ಕಾರಣವಾದ ಧರ್ಮಾಂಧ ಹಿಂದೂ ಮಹಾಸಭಾವನ್ನು ಪ್ರೋತ್ಸಾಹಿಸುತ್ತಿದ್ದ ಮನೆಯೂ ಆಗಿತ್ತು.

ಮುಂದುವರಿಯುವುದು

ನಾನು ಬೇರೆ ಸುತ್ತು ಬಳಸಿಲ್ಲದೆ, ಟ್ರಸ್ಟಿಶಿಪ್ ಕುರಿತು ವಿಷಯವನ್ನೇ ನೇರವಾಗಿ ಪ್ರಸ್ತಾಪಿಸಿದೆ.
ಅವರ ಉತ್ತರ ನಾನು ನಿರೀಕ್ಷಿಸಿದಷ್ಟೇ ನೆಟ್ಟನೇರವಾಗಿತ್ತು. "ಗಾಂಧೀಜಿಯವರ ತತ್ವಾನುಷ್ಠಾನ ಸುಲಭವಲ್ಲ. ಅದಕ್ಕೆ ತುಂಬ ದೃಢವಾದ ಸಂಕಲ್ಪ ಬೇಕಾಗುತ್ತದೆ". ಈ ಉತ್ತರದಲ್ಲಿ ಅವರು ಏನು ಹೇಳಿದ್ದರು ಮತ್ತು ಏನನ್ನು ಹೇಳದೆ ಬಿಟ್ಟಿದ್ದರು ಎಂಬುವೆರಡನ್ನೂ ನಾನು ಗಮನಿಸಿದೆ. ಅವರು ಏನು ಹೇಳಲಿಲ್ಲವೋ ಅದನ್ನು ಅವರದೇ ಗಿರಣಿಗಳ ಕಾರ್ಮಿಕರು ಹೇಳಿದ್ದರು.

ಪಕ್ಷಾಂತರ ಪ್ರಾವಿಣ್ಯತೆ : ಕಾಂಗ್ರೆಸ್‌ಗೆ ಸೋಲುವ ಭಯ !

ಈಚೆಗೆ ಕಾಂಗ್ರೆಸ್ ಸೇರಿಕೊಂಡ ಅ.ಭಾ. ಪ್ರಗತಿಪರ ಜನತಾದಳದ 11 ಶಾಸಕರ ಇತರೆ ಮುಖಂಡರ ಸೇರ್ಪಡೆಯನ್ನು ಕೋಮುವಾದಿಗಳ ವಿರುದ್ಧದ ಧೃವೀಕರಣದ ಪ್ರಕ್ರಿಯೆಯೆಂದು ಮುಖ್ಯಮಂತ್ರಿ ಕೃಷ್ಣ ವ್ಯಾಖ್ಯಾನಿಸಿದ್ದಾರೆ. ಪ್ರಾಯೋಗಿಕವಾಗಿ ಕೋಮುವಾದಿ ವಿರೋಧಿ ಸೆಕ್ಯುಲರ್ ಶಕ್ತಿಗಳನ್ನು ದುರ್ಬಲಗೊಳಿಸಿ, ಕೋಮುವಾದಿ ಶಕ್ತಿಗಳನ್ನು ಬಲಗೊಳಿಸುವ ಅಪಾಯವಿದೆ. ಕಾಂಗ್ರೆಸ್ ಬಿಜೆಪಿಗಳನ್ನು ತಿರಸ್ಕರಿಸಿ, ಜಾತ್ಯಾತೀತ ಪರ್ಯಾಯವೆಂದು ಜನತಾ ಪರಿವಾರಕ್ಕೆ ಮತನೀಡಿದ ಜನತೆಗೆ ಬಗೆದ ದ್ರೋಹವಾಗಿದೆ. ಇಂತಹ ಪಕ್ಷಾಂತರಗಳನ್ನು ಸಮರ್ಥಿಸಿಕೊಳ್ಳುವ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಸೋಲುವ ಭಯ ಆವರಿಸಿದೆಯೇ?

ಈ ವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಕೃಷ್ಣರವರನ್ನು ಆತಂಕ ಕಾಡದೆ ಬಿಟ್ಟಿಲ್ಲ. ಈಚೆಗೆ ನವದೆಹಲಿಯಲ್ಲಿ ಸೋನಿಯಾ ಸಮಕ್ಷಮದಲ್ಲಿ ಕರ್ನಾಟಕದ ಹನ್ನೊಂದು ಅಖಿಲ ಭಾರತ ಪ್ರಗತಿಪರ ಜನತೆ ದೇಶದ ಶಾಸಕರು. ಕಾಂಗ್ರೆಸ್ ಪಕ್ಷವನ್ನು ಸೇರಿಕೊಂಡದ್ದು ಒಂದು ಪ್ರಮುಖ ಘಟನೆ. ಈ ವಾರದಲ್ಲಿ ಮಾಜಿ ಸಭಾಧ್ಯಕ್ಷ ರಮೇಶ್‌ಕುಮಾರ್, ಮಾಜಿ ಸಚಿವ, ಶಾಸಕ ಎಸ್.ಎಸ್.ಪಾಟೀಲರು ಪ್ರ.ಜ.ದಳ ತೊರೆದು ಕಾಂಗ್ರೆಸ್ ಸೇರಿದ್ದಾರೆ.

ಮಧ್ಯಂತರ ಚುನಾವಣೆಯ ಖಚಿತ ಸುಳಿವು ದೊರೆಯುತ್ತಿರುವಂತೆಯೇ ಆರಂಭಗೊಂಡ 'ಆಯಾರಾಂ-ಗಯಾರಾಂ' ನ ಪಕ್ಷಾಂತರ ಲೋಕಸಭೆ ಜೊತೆಗೆ ವಿಧಾನಸಭೆಗೂ ಚುನಾವನೆಗಳು ನಡೆಯುವುದು ಸ್ಪಷ್ಟಗೊಳಿಸಿದವು. ಈಗ ಬೇರ್ಪಡೆ ಮತ್ತು ಸೇರ್ಪಡೆಗೆ ತುರುಸಿನ ಚಾಲನೆ ಸಿಕ್ಕಿದೆ. ಮುಂಬರುವ ಚುನಾವಣೆಗಳನ್ನು ಏಕಾಂಗಿಯಾಗಿಯೇ ಎದುರಿಸುವುದಾಗಿ ಮುಖ್ಯಮಂತ್ರಿಗಳು ಹಾಗೂ ಕೆಪಿಸಿಸಿ ಅಧ್ಯಕ್ಷ ಪೂಜಾರಿ ಹೇಳುತ್ತಲೇ ಬಂದಿದ್ದರು. ಒಳಗೊಳಗೆ ಎಡ ಮತ್ತು ಸೆಕ್ಯುಲರ್‌ನ, ಮುಖ್ಯವಾಗಿ ಜನತಾದಳ ಮೂರನೇ ಪರ್ಯಾಯ ಪ್ರಬಲವಾಗಿ ರೂಪುಗೊಳ್ಳದಂತೆ ಕೃಷ್ಣಾ - ಅನಂತಕುಮಾರ್-ರಾ. ಹೆಗಡೆಯವರೊಂದಿಗೆ ಸೇರಿ ಮಸಲತ್ತು ನಡೆಸುತ್ತಲೇ ದಳದ ಬಣ್ಣಗಳು ವಿಲೀನವಾಗದಂತೆ ತಂತ್ರ ಮಾಡುತ್ತಾ ಬಂದರು. ಒಂದು ಹಂತದಲ್ಲಿ ಉಳಿದ ಪ್ರ. ಜನತಾದಳದೊಂದಿಗೆ ಮಾತುಕತೆ ನಡೆದು ಮೈತ್ರಿ ಸಾಧ್ಯತೆಯ ಸುದ್ದಿಯು ಹೊರಬಂದಿತ್ತು. ಅಂತೂ ಕಾಂಗ್ರೆಸ್ ತನ್ನ ಗೆಲುವಿನ ಸಾಧ್ಯತೆಗಳನ್ನು ಗಟ್ಟಿಗೊಳಿಸಿಕೊಳ್ಳುವ ಹಲವು ಕಸರತ್ತುಗಾಗಿ ಇಳಿದಿದೆ ಎಂಬುದಾದರೂ ರಾಜ್ಯದಲ್ಲಿ ಸೋಲುವ ಭಯ ಅದಕ್ಕೆ ಕಾಡುತ್ತಿದೆ ಎಂಬುದು ಅಷ್ಟೇ ನಿಜ.

ಎಬಿಪಿಜೆಡಿಯಲ್ಲಿದ್ದ ಬಹುತೇಕರು ಒಂದೊಂದು ತಂಡವಾಗಿ ಜೆಡಿಎಸ್‌ಗೆ ಸೇರುತ್ತಲೇ ಇದ್ದರು. ಉಳಿದವರಲ್ಲಿ ಒಂದು ಗುಂಪು ಇಂತಹ ವಿಲೀನಕ್ಕಾಗಿ ಒತ್ತಡ ಹೇರುತ್ತಲೇ ಇತ್ತು. ಈಗ-ಆಗ ಎಂದು ಹೇಳುತ್ತಲೇ ಬಂದ, ಆದರೆ ನಾಯಕತ್ವ ವಿಲೀನಕ್ಕೆ ಅಂತರಂಗದಲ್ಲಿ ಒಪ್ಪದೇ ಕಾಂಗ್ರೆಸ್ ಅಥವಾ ಬಿಜೆಪಿ ಮೈತ್ರಿಗೆ ಹಾತೊರೆದಿತ್ತು. ಆಗಲೇ ಸಂಭವಿಸಿದ್ದು ಅಧ್ಯಕ್ಷ ನಾಗೇಗೌಡರ ಸಾವು. ಬಳಿಕ ಆತಂಕಿತರಾದವರು ಕೊನೆಗೆ ಸೇರಿದ್ದು ಕಾಂಗ್ರೆಸ್‌ನ್ನು. ಉಳಿದ ಕೆಲವರು ಜಾಗ್ರತೆಯಿಂದ ಹೆಜ್ಜೆ ಹಾಕಿದ್ದರು. ಕಾಂಗ್ರೆಸ್-ಬಿಜೆಪಿಗಳನ್ನು ಸೋಲಿಸುವ ಮೂರನೇ ಪರ್ಯಾಯದ ರಾಜಕಾರಣದತ್ತ ಕಿಂಚಿತ್ತು ಅವರಲ್ಲಿ ಕಾಳಜಿಯಿಲ್ಲ. ಮೇಲಾಗಿ ದೇವೇಗೌಡರ ಕಡು ವಿರೋಧದ ವ್ಯಕ್ತಿನಿಷ್ಠ ರಾಜಕಾರಣ. ಅಂತಹ ಎರಡು ರಾಜಕೀಯ ಶಕ್ತಿಗಳ ವಿರುದ್ಧ ಜನ ಕೊಟ್ಟ ತೀರ್ಪಿನಂತೆ ಆಯ್ಕೆಯಾಗಿದ್ದ ಈ ಜನತಾ ಪರಿವಾರದ ಶಾಸಕರು ಕಾಂಗ್ರೆಸ್ ಸೇರಿ ಅಧಿಕಾರಕ್ಕಾಗಿ ಹಾತೊರೆದು ಜನತೆಯ ತೀರ್ಮಾನಕ್ಕೆ ದ್ರೋಹವೆಸಗಿದರು.

ಈ ಹನ್ನೊಂದು ಶಾಸಕರು ಕೆಲವು ಉನ್ನತ ಮಾಜಿ ಅಧಿಕಾರಿಗಳನ್ನು ಸೇರಿಸಿಕೊಂಡ ಬಳಿಕ ಮುಖ್ಯಮಂತ್ರಿ ಕೃಷ್ಣರವರು 'ಇದು ಕೋಮುವಾದಿ ಶಕ್ತಿಗಳ ವಿರುದ್ಧದ ರಾಜಕೀಯ ಧ್ರುವೀಕರಣದ ಆರಂಭ' ಎಂದು ಹೇಳಿದರು. ಅದ್ಹೇಗೆ ಎಂದು ಕೃಷ್ಣ ಮತ್ತು ಪಕ್ಷಾಂತರಿ ಶಾಸಕರೇ ಹೇಳಬೇಕು. ಕರ್ನಾಟಕದ ಜನತೆ ತೀವ್ರವಾದ ಬರದ ಬವಣೆಗೆ ಸಿಕ್ಕಿದ್ದಾರೆ. ಪರಿಹಾರದಲ್ಲಿ ಕೇಂದ್ರ-ರಾಜ್ಯ ಸರ್ಕಾರಗಳು ತಾರತಮ್ಯದ ನಿರ್ಲಕ್ಷ್ಯತನ-ವಂಚನೆಯ, ಭ್ರಷ್ಟ ರಾಜಕಾರಣ ಮಾಡುತ್ತಲೇ ಬಂದಿವೆ. ರೈತರ ಬೆಳೆಗೆ ಬೆಂಬಲ ಬೆಲೆ ಸಿಗಲಿಲ್ಲ, ಸಾಲದ ಬಾಧೆ ತಡೆಯಲೂ ಆಗಲಿಲ್ಲ. ಕನಿಷ್ಟ ಆತ್ಮವಿಶ್ವಾಸ ಮೂಡಿಸುವಲ್ಲಿಯೂ ವಿಫಲವಾಗಿ ಆತ್ಮಹತ್ಯೆಗೆ ದೂಡಿದರು. ಹಸಿವಿನ ಸಾವು ಸಂಭವಿಸಿದವು. ವಿದ್ಯುತ್ ಖಾಸಗೀಕರಣದ ಪ್ರಕ್ರಿಯೆ ಆರಂಭಗೊಂಡು ದುಬಾರಿಯಾಗಿ ಜನ ತತ್ತರಿಸುತ್ತಿದ್ದಾರೆ. ನೀರು, ರಸ್ತೆ, ಆರೋಗ್ಯ, ಶಿಕ್ಷಣ, ಉದ್ಯೋಗ ಹಾನಿ, ಕೈಗಾರಿಕೆ ಕುಸಿತ-ನಾಶ ಹೀಗೆ ಎಲ್ಲವೂ ಖಾಸಗೀಕರಣ-ದುಬಾರೀಕರಣದ ಬಿಸಿ ಬರೆಯ ಕೊಡುಗೆಗಳೇ. ಹೀಗೆ ಜನತೆ ಸಂಕಟದಲ್ಲಿ ತೊಳಲಾಡುತ್ತಿರುವಾಗ ಕಾಂಗ್ರೆಸ್ ವಿರುದ್ಧ ಆಕ್ರೋಶವೂ ಹೆಚ್ಚುತ್ತಿರುವಾಗ ಜನ ವಿರೋಧಿ ಕಾಂಗ್ರೆಸ್ಸನ್ನು ಸೋಲಿಸಿ ಧೂಳೀಪಟ ಮಾಡುವುದು ಅತ್ಯಂತ ಜರೂರಿನ ಕರ್ತವ್ಯ. ಇಂತಹ ರಾಜಕೀಯ ಹೋರಾಟದಲ್ಲಿ ಕಾಂಗ್ರೆಸ್ಸನ್ನು ರಾಜ್ಯದಲ್ಲಿ ಕಿತ್ತೆಸೆಯಲು ಆ ಶಾಸಕರು ಮುಂದಾಗಬೇಕಿತ್ತು. ಬದಲಾಗಿ ಅಂತಹ ಕಾಂಗ್ರೆಸ್ಸನ್ನೇ ಸೇರುವುದರಿಂದ ಮೂರನೇ ಪರ್ಯಾಯವನ್ನು ಬಲಗೊಳಿಸದೇ ಇರುವುದರಿಂದ ಕೋಮುವಾದಿ ಶಕ್ತಿಗಳನ್ನೇ ಪರಿಣಾಮದಲ್ಲಿ ಬಲಗೊಳಿಸಿದಂತಾಗುತ್ತದೆ. ಸೇರಿದವರಿಗೂ ಸೇರಿಸಿಕೊಂಡವರಿಗೂ ನಿಜದ ಅರ್ಥದಲ್ಲಿ ಅಂತಹ ಯಾವುದೇ ಜನಪರವಾದ ರಾಜಕೀಯ ಕಾಳಜಿಯೆಂಬುದು ಇಲ್ಲವೇ ಇಲ್ಲ. ಭೂಮಾಲಿಕ-ಬಂಡವಾಳಗಾರರ ಪ್ರತಿನಿಧಿಗಳಿಗೆ, ಸಂದರ್ಭಸಾಧಕತನವೇ ವರ ಸಿದ್ಧಾಂತವಾಗಿರುತ್ತದೆ.



ಪಕ್ಷ ಯಾವುದಾದರೇನು ತಮ್ಮ ಹಿಂತಾಸಕ್ತಿ ರಕ್ಷಣೆಯಾಗಬೇಕು ಅಷ್ಟೆ. ಬದಲಾಗಿ ಸಂದರ್ಭ ಸಾಧಕ ರಾಜಕಾರಣ, ಅದಕ್ಕಾಗಿ ಎಂತಹ ಶರಣಾಗತಿಗೂ-ರಾಜಿಗೂ ಸಿದ್ಧ. ಮುಖ್ಯಮಂತ್ರಿ ಕೃಷ್ಣರವರು ಕಾಂಗ್ರೆಸ್‌ಗೆ - ಎಡಪಕ್ಷಗಳು, ಜನತಾದಳ(ಎಸ್) ಹಾಗೂ ಪ್ರಗತಿಪರ ಶಕ್ತಿಗಳು ಪರ್ಯಾಯವಾಗಿರುವುದನ್ನು ಮರೆಸಲು ಈ ಶಕ್ತಿಗಳ ನಡುವೆ ಧೃವೀಕರಣ ಆಗದಂತೆ ತಡೆಯಲು ಬಹಳ ಸೂಕ್ಷ್ಮವಾದ ತಂತ್ರಗಾರಿಕೆಯಿಂದ ಕಾಂಗ್ರೆಸ್‌ಗೆ-ಬಿಜೆಪಿಯೇ ವಿರೋಧಿ ಎಂದು ಹೇಳಹೊರಟಿದ್ದಾರೆ. ಆ ಮೂಲಕ ಕಾಂಗ್ರೆಸ್ ವಿರೋಧಿ ಶಕ್ತಿ ಇನ್ನೊಂದು ಜಾತ್ಯಾತೀತ ಬಣದತ್ತ ಹೋಗದೆ ಕೋಮುವಾದಿಗಳತ್ತ ಸರಿಸುವ ಅಪಾಯವಿದೆ. ಕೋಮುವಾದದ ವಿರೋಧಿ ಶಕ್ತಿಗಳನ್ನು ಒಡೆದು ಸೆಳೆಯುವ ಇರಾದೆ ಇದೆ. ಬಿಜೆಪಿ ಬೇಕಾದರೆ ಬೆಳೆಯಲಿ, ಆ ಭೂತ ತೋರಿಸಿದರೆ ಅಲ್ಪಸಂಖ್ಯಾತರ, ಇತರರ ಓಟು ಸೆಳೆಯಬಹುದು ಎಂಬ ಕೃಷ್ಣ ತಂತ್ರವೇ ಅಪಾಯಕಾರಿ. ಕರ್ನಾಟಕದ ಮತದಾರರು ಕಾಂಗ್ರೆಸ್ ವಿರುದ್ಧ ಸೆಕ್ಯುಲರ್ ಶಕ್ತಿಗಳನ್ನು - ಜನತಾದಳ, ಎಡಪಕ್ಷಗಳನ್ನೇ ಪರ್ಯಾಯವಾಗಿ ಗುರುತಿಸಿರುವುದು, ಒಂದರ್ಥದಲ್ಲಿ ಕೃಷ್ಣ ಈ ವಾಸ್ತವಕ್ಕೆ ಹೆದರಿದ್ದಾರೆ.

ಚುನಾವಣೆಯನ್ನು ಎದುರಿಸುವ ಅವರ ಚಿತ್ರ-ವಿಚಿತ್ರ ತಂತ್ರಗಳು ಹೀಗಿವೆ. ಕಾಂಗ್ರೆಸ್‌ನದು ಈ ರೀತಿಯಾದರೆ, ಜನತಾದಳ(ಎಸ್) ಕೆಲವು ಪ್ರಬಲರನ್ನು ಸೇರಿಸಿಕೊಂಡು ಕದನಕ್ಕಿಳಿಯುವ ತಾಲೀಮಿನಲ್ಲಿದೆ. ಹಲವು ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಿ ಪುನರ್ ಸಂಘಟನೆಗೆ ಇಳಿದಿದೆ. ಇನ್ನು ಬಿಜೆಪಿ ನಾಯಕರು ತಮ್ಮದು 'ಭಾರತೀಯ ಜಾಯಿನಿಂಗ್ ಪಾರ್ಟಿ' 'ಷೋ' ಆರಂಭಗೊಳ್ಳುವ ಮೊದಲೇ ಹೌಸ್‌ಫುಲ್ ಎಂದು ಪಕ್ಷಾಂತರವನ್ನು ಹೀಗೆ ಅರ್ಥೈಸಿಕೊಂಡು ಬೆನ್ನು ಚಪ್ಪರಿಸಿಕೊಳ್ಳುತ್ತಿದ್ದಾರೆ. ಈ ಚುನಾವಣೆಯಲ್ಲಿ ಜನತೆಯ ದೇಶದ-ರಾಜ್ಯದ ಮುಖ್ಯ ಪ್ರಶ್ನೆಗಳನ್ನೇ ಗೌಣವಾಗಿಸಲಾಗುತ್ತಿದೆ, ಮರೆಸಲಾಗುತ್ತಿದೆ. ಆದರೆ ಜನತೆಯ ಮುಖ್ಯಪ್ರಶ್ನೆಗಳೇ ಇಲ್ಲಿ ಪ್ರಧಾನವಾಗುವಂತೆ ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳು ಒತ್ತಡ ಹೇರಬೇಕಿದೆ.

ಜನದ್ರೋಹಿಗಳಿಗೆ ಪಾಠ ಕಲಿಸಲು ಮತ್ತೊಂದು ಅವಕಾಶ ಬರುತ್ತಿದೆ

ಜನರನ್ನು ಗೊಂದರಲ್ಲೇ ಇಟ್ಟುಕೊಂಡೇ ಬಂದ ಕೃಷ್ಣರವರು ಸಚಿವಸಂಪುಟ ನಡೆಸಿ ವಿಧಾನಸಭೆ ವಿಸರ್ಜನೆಗೆ ಶಿಫಾರಸು ಮಾಡಿ ರಾಜ್ಯಪಾಲರಿಗೆ ಪತ್ರಕೊಟ್ಟುಬಿಟ್ಟರು. ಅದರಂತೆ ಫೆಬ್ರವರಿ 23 ರಂದೆ ವಿಧಾನಸಭೆ ವಿಸರ್ಜನೆ. ಏಪ್ರಿಲ್ - ಮೇ ಹಲ್ಲಿ ವಿಧಾನಸಭೆಗೂ - ಲೋಕಸಭೆಗೂ ಏಕಕಾಲದಲ್ಲಿ ಚುನಾವಣೆ ಎಂಬುದು ಖಚಿತವಾಗಿದೆ. ಜನದ್ರೋಹಿಗಳಿಗೆ ಪಾಠ ಕಲಿಸಲು ಮತ್ತೊಂದು ಅವಕಾಶ ಬಂದಿದೆ. ಏಳಿ ಸಿದ್ಧರಾಗಿ....

'ದಾರಿಗಿಳಿದಿರೋ ಸುಂಕ ವಸೂಲಿ ಖಾತರಿ'

'ಆಹಾ ಎಂತಹ ರಸ್ತೆ, ಎಷ್ಟು ವಿಶಾಲ' ಎಂದುಸುರುತ್ತಾರೆ ಕೆಲವರು. 'ಗಾಡಿ ಎಷ್ಟು ಓಡಿದರೂ ಮೈ ಕುಲುಕೋಲ್ಲ' ಎನ್ನುತ್ತಾರೆ ಹಲವರು. 'ಫೀಲ್ ಗುಡ್' ತಂದದ್ದೇ ವಾಜಪೇಯಿ ಎಂದು ಬಾಯಿ ಒಗ್ಗಿಸುತ್ತದೆ ಬಿಜೆಪಿ. ಆದ್ದರಿಂದಲೇ ರಸ್ತೆ ನಡುವೆ ಕಮಾನುಗಳು, ವಾಜಪೇಯಿ ಫೋಟೋ ಕಟೌಟ್‌ಗಳು, ಟಿ.ವಿ.ಯಲ್ಲಿ ಅದೇ ಹಾಡು. ನೋಡಿದವರಿಗೆ ಬಿಜೆಪಿ-ವಾಜಪೇಯಿಯವರೇ ಸ್ವತಃ ಕಿಸೆಯಿಂದ ಖರ್ಚು ಮಾಡಿದವರಂತೆ ಅದರ ಕೀರ್ತಿ ಬಳಿದುಕೊಳ್ಳಲು ಹಾತೊರೆಯುತ್ತಾರೆ. ಇದಕ್ಕಿಂತಲೂ ಹೆಚ್ಚಿನದೆಂದರೆ ವಿಶ್ವಬ್ಯಾಂಕ್‌ನ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಂತಹುಗಳಿಂದ ತಂದ ಯಥೇಚ್ಛ ಸಾಲ- ಅದರ ಶೂಲ, ಅದರಲ್ಲಿ ಹೊಡೆದ ಭ್ರಷ್ಟ ಹಣ-ಹಂಚಿಕೆ ಮರೆಸುವುದು!

ಈಚೆಗೆ ನೆಲಮಂಗಲ - ತುಮಕೂರು ನಡುವೆ 32.5 ಕಿ.ಮಿ. ಸುವರ್ಣ ಚತುಷ್ಕೋನ ರಸ್ತೆ ಉದ್ಘಾಟನೆಯಾಯಿತು. ಇದಕ್ಕೆ ತಗುಲಿದ ವೆಚ್ಚ 155 ಕೋಟಿ. ಇಂತಹ ರಸ್ತೆ ಆಧುನೀಕರಣಕಕೆ 94 ಸಾವಿರಕೋಟಿ ಇಡಲಾಗಿದೆಯಂತೆ. ರಾಜ್ಯದಲ್ಲಿ ಇಂತಹದ್ದಕ್ಕೆ 3200 ಕೋಟಿ ವೆಚ್ಚ ಮಾಡಲಾಗುತ್ತದಂತೆ.

ತುಮಕೂರು-ನೆಲಮಂಗಲ ಹೆದ್ದಾರಿ ನಿರ್ಮಾಣ ಮಾಡಿದ್ದು ಜೆಸ್‌ಟೋಲ್ ಕಂಪನಿ. ನಿರ್ಮಾಣ-ನಿರ್ವಹಣೆ-ವರ್ಗಾವಣೆ ಒಪ್ಪಂದಂತೆ. ಆದ್ದರಿಂದ ಈ ರಸ್ತೆಯಲ್ಲಿ ನಿಮ್ಮ ವಾಹನ ಪ್ರವೇಶಿಸಿದರೆ ಆರಂಭದಲ್ಲೇ ಟೋಲ್‌ಗೇಟ್‌ನಲ್ಲಿ ಕಂಪನಿ ಬಂಟರು ಕೈ ಚಾಚುತ್ತಾರೆ. ನೀವು ಕೊಟ್ಟರೆ ಮುಂದಕ್ಕೆ, ಇಲ್ಲವಾದರೆ ಹಿಂದಕ್ಕೆ. ಬಸ್ಸು, ಲಾರಿಗಳಿಗೆ 61 ರೂಪಾಯಿ, ಲಘು ವಾಹನಗಳಿಗೆ 33 ರೂ. ನಾಲ್ಕು ಗಾಲಿಗಳ, ಇತರ ವಾಹನಗಳಿಗೆ 18 ರೂ ಸುಂಕ ತೆರಲೇಬೇಕೆಂದು ನಿಗದಿಯಾಗಿದೆ. ಈ ವಸೂಲಿ 18 ವರ್ಷಗಳ ವರೆಗೂ ಇರುವ ಒಪ್ಪಂದ. ಆ ಬಳಿಕ ಅದೇ ಕಂಪನಿ ಸರ್ಕಾರಕ್ಕೆ ಸ್ವಾಮ್ಯತ್ವ ವರ್ಗಾಯಿಸುತ್ತದೆ. ನಂತರ ಸುಂಕ ಇರುವುದೇ ಇಲ್ಲವೋ ಎಂದುಕೇಳಬೇಡಿ. ಮಾಲೀಕ ಬದಲಾಗುವ ಎಂಬ ಭರವಸೆ ಮಾತ್ರ ಈಗಿದೆ. ಈ ಸುಂಕ ಕಾಲದಿಂದ ಕಾಲ್ಕಕೆ ಬದಲಾಗಬಲ್ಲದು. ಒಂದು ವೇಳೆ ಆ ಹಾದಿಯಲ್ಲಿ ಹೋಗಿ ಅಂದುಕೊಂಡು ಕಾರ್ಯವಾಗದೇ ಹಿಂದಿರುಗಿದಿರೋ "ಬಂದ ದಾರಿಗೆ ಸುಂಕವಿಲ್ಲ' ಎಂದು ಹೇಳುವಂತಿಲ್ಲ. ಬಂದರೂ - ಹೋದರೂ ಸುಂಕ ತೆರಲೇಬೇಕು. ಇದು ಹೈಟೆಕ್ ಆಡಳಿತ ಸ್ವಾಮಿ. ಹಣ ಕೊಟ್ಟರೆ ಮುಂದಕ್ಕೆ, ಇಲ್ಲವಾದರೆ ಸರಿಯಿರಿ ಹಿಂದಕ್ಕೆ.

ಅಂಬರಕೆ ಹಾರು

ನೀರಿಲ್ಲವಾದರೂ ಉಂಟಲ್ಲಿ ಬೀರು
ಅದರಲ್ಲೇ ಕೈತೊಳೆದು ಅದನ್ನೇ ಹೀರು
ಸೂರಿಲ್ಲವಾದರೂ ತೆರವಿಹವು ಬಾರು
ಬಾರಿನೊಳು ಹೀರುತ್ತ ಅಂಬರಕೆ ಹಾರು

\- ವಿಡಂಬಾರಿ

'ಇನ್ನೊಂದು ಜಗತ್ತು ಸಾಧ್ಯವಿದೆ ಅದು ಸಮಾಜವಾದಿ ಜಗತ್ತು'

ಪಕ್ಕಲಡ್ಕ ಯುವಕ ಮಂಡಳದ ವಾರ್ಷಿಕೋತ್ಸವ

ಜಗತ್ತಿನಲ್ಲಿ ಶೋಷಣೆ, ದಬ್ಬಾಳಿಕೆ, ಮಾನವ ವಿರೋಧಿ ಮನುಷ್ಯರ ನಡವಳಿಕೆ ಕಾಣುತ್ತಿದ್ದರೂ ಅದಕ್ಕೆ ಪರ್ಯಾಯ ಇನ್ನೊಂದು ಜಗತ್ತು ಸಾಧ್ಯವಿದೆ ಎಂದು ಸಿಐಟಿಯು ವಿನ ರಾಜ್ಯ ಅಧ್ಯಕ್ಷರಾದ ಬಿ.ಮಾಧವ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಪಕ್ಕಲಡ್ಕ ಯುವಕ ಮಂಡಲದ 51ನೇ ವಾರ್ಷಿಕೋತ್ಸವದಲ್ಲಿ 'ಬೆವರು' ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡುತ್ತಿದ್ದರು. ಸಮಾಜದಲ್ಲಿ ಅಸಮಾನತೆ ಬೆಳವಣಿಗೆ ಯಾಗುತ್ತಿದ್ದರೂ ಇದರ ವಿರುದ್ಧವಾಗಿ ಹಲವೊಂದು ಪ್ರತಿರೋಧದ ಆಶಾಕಿರಣಗಳು, ನಮಗೆ ಕಂಡು ಬರುತ್ತಿದೆ. ಶೋಷಣೆಯನ್ನು ಕೊನೆಗೊಳಿಸಿ ಹೊಸ ಸುಂದರ ಸಮಾಜ ನಿರ್ಮಾಣ ಆಗಬೇಕೆಂಬ ಸಾಮಾಜಿಕ ಕಲ್ಪನೆಯಿಂದ 51 ವರ್ಷದ ಹಿಂದೆಯೇ ಆಲೋಚಿಸಿ ಸ್ಥಾಪಿಸಲ್ಪಟ್ಟ ಯುವಕ ಮಂಡಲ ಹಿರಿಯರ ಮಾರ್ಗದರ್ಶಕದಲ್ಲಿ ಮಾದರಿಯಾಗಿದೆ. ಇದು ಇನ್ನೂ ವ್ಯಾಪಕವಾಗಿ ಬೆಳೆಯಲಿ ಎಂದು ಹಾರೈಸಿದರು. ಸಭಾ ಅಧ್ಯಕ್ಷತೆಯನ್ನು ಬಿ.ಎಂ. ಮಾಧವ (ಬ್ಯಾಂಕು ನೌಕರರ ಸಂಘದ ಮುಂದಾಳು) ರವರು ವಹಿಸಿದ್ದರು - ವೇದಿಕೆಯಲ್ಲಿ ಸುನಿಲ್ ಕುಮಾರ್ ಬಜಾಲ್ (ಡಿವೈಎಫ್ಐ ಜಿಲ್ಲಾಧ್ಯಕ್ಷರು), ಕಾರ್ಮಿಕ ಮುಂದಾಳು ಕೆ.ಯಾದವ ಶೆಟ್ಟಿ ಸಿಪಿಐ(ಎಂ)ನ ಜಪ್ಪಿನ ಮೊಗ್ರು ಶಾಖಾ ಕಾರ್ಯದರ್ಶಿ ಉದಯಚಂದ್ರ, ಯಶವಂತ ಮರೋಳಿ, ಯುವ ಉದ್ಯಮಿ ಲೋಕನಾಥ, ವಿಜ್ಞಾನ ವಾದಿ ಚಿಂತಕರು, ಸಿ.ಎನ್.ಶೆಟ್ಟಿ, ಜೆಎಂಎಸ್‌ನ ಹೇಮಲತಾ, ಯುವ ಉದ್ಯಮಿ ಮನೋಜ್ ಮಾಣೈ, ಮಂಡಲದ ಅಧ್ಯಕ್ಷರಾದ ಮೋಹನ್ ದಾಸ್ ಕುಡ್ತಡ್ಕ, ಕಾರ್ಯದರ್ಶಿ ಲೋಕೇಶ್ ಎಂ.ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ದೀಪಕ್ ಬಜಾಲ್ ಸ್ವಾಗತಿಸಿ, ಅಶೋಕ್ ಸಾಲ್ಯಾನ್ ಪ್ರಸ್ತಾವಿಕ ಮಾತುಗಳನ್ನಾಡಿ ದರು. ಲೋಕೇಶ್ ಎಂ. ವರದಿ ವಾಚಿಸಿದರು. ಶರತ್ ಕುಮಾರ್ ಹಾಗೂ ನಾಗರಾಜ್ ಬಜಾಲ್ ಕಾರ್ಯಕ್ರಮ ನಿರೂಪಣೆ ಮಾಡಿದರು. ಉದಯ ಕುಂಚಲಗುಡ್ಡೆ ಬಹುಮಾನ ವಿಜೇತರ ಪಟ್ಟಿ ಓದಿ ಹೇಳಿದರು. ನಾಗೇಶ್ ಶೆಟ್ಟಿ ಸಭಾ ಕಾರ್ಯಕ್ರಮದ ಧನ್ಯವಾದ ಸಲ್ಲಿಸಿದರು.

51 ನೇ ವಾರ್ಷಿಕೋತ್ಸವದ ಅವಿಸ್ಮರಣೀಯ, ಆಕರ್ಷಕ ವೇದಿಕೆಯಲ್ಲಿ ಪ್ರತಿಭಾ ಸಮ್ಮಿಲನ-2004, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಸ್ಥಳೀಯ ಪ್ರತಿಭಾ ಪ್ರದರ್ಶನ, ಕಿಶೋರ್ ಕುಮಾರ್ ಉಡುಪಿಯವರಿಂದ ಮಾತನಾಡುವ ಮಂಗ ಹಾಗೂ ಮಿಮಿಕ್ರಿ ವಿನಾಯಕರವರಿಂದ ಮಿಮಿಕ್ರಿ ಕಾರ್ಯಕ್ರಮ ಮತ್ತು ಮಂಡಲದ ಸದಸ್ಯರಿಂದ ವಿನೋದಾವಳಿಗಳು ಜನರನ್ನು ರಂಜಿಸಿದವು.

ಆನೇಕಲ್‌ನಲ್ಲಿ ಸಿಪಿಐ(ಎಂ)ನ ಪ್ರಚಾರಾಂದೋಲನ

ಫೆಬ್ರವರಿ 1 ರಿಂದ 15ರವರೆಗೆ ಇಡೀ ದೇಶವ್ಯಾಪಿ ಸಿಪಿಐ(ಎಂ) ಪ್ರಚಾರಾಂದೋಲನವನ್ನು ಹಮ್ಮಿಕೊಳ್ಳಲಾಗಿದ್ದು, ಈ ಹಿನ್ನೆಲೆಯಲ್ಲಿ ಆನೇಕಲ್ ತಾಲ್ಲೂಕು ಸಿಪಿಐ(ಎಂ) ಸಮಿತಿಯು ಫೆಬ್ರವರಿ 8 ರಂದು ಚನ್ನೇನ ಅಗ್ರಹಾರದಿಂದ 50 ಯುವಜನರ ತಂಡವೊಂದು ಬೆಳಿಗ್ಗೆ 8 ರಿಂದ ಸಂಜೆಯವರೆಗೆ ರೈತ ಕಾರ್ಮಿಕ ವಿರೋಧಿ ನೀತಿಗಳನ್ನು ಅನುಸರಿಸುತ್ತಿರುವ ಬಿಜೆಪಿ ಮತ್ತು ಕಾಂಗ್ರೆಸ್ ಸರ್ಕಾರಗಳ ವಿರುದ್ಧ ಪ್ರಚಾರ ನಡೆಸಿತು. ಅಶೋಕ್‌ಕುಮಾರ್, ಮಹದೇಶ್ ಹಾಗೂ ಮಂಜುನಾಥ್‌ರವರ ನೇತೃತ್ವದಲ್ಲಿ ಸೈಕಲ್ ಮೂಲಕ ಕಸಬಾ ಹೋಬಳಿಯ 20 ಹಳ್ಳಿಗಳಲ್ಲಿ ಮನೆಮನೆಗೆ ಭೇಟಿ ನೀಡಿ ಕರಪತ್ರ ಹಾಗೂ ಘೋಷಣೆಗಳ ಮೂಲಕ ಸರ್ಕಾರಗಳ ವೈಫಲ್ಯಗಳನ್ನು ಜನತೆ ಎದುರು ತೆರೆದಿಟ್ಟಿತು.

ರಾಜ್ಯ ಬಿಜೆಪಿ ಅಧ್ಯಕ್ಷ ಅನಂತಕುಮಾರ್‌ರವರ ಹುಡ್ಕೋ ಹಗರಣದ 14,500 ಕೋಟಿ ರೂ.ಗಳ ದರೋಡೆ ಜನತೆಯ ಮುಂದೆ ತಿಳಿಯಪಡಿಸಿದರು. ಇದಕ್ಕೆ ಜನತೆಯಿಂದ ಕೇಳಿಬಂದ ಧ್ವನಿ ಈ ಬಾರಿ ಬಿಜೆಪಿಗೆ ತಕ್ಕ ಪಾಠ ಕಲಿಸುತ್ತೇವೆ ಎಂದರು. ಗ್ರಾಮ ನೈರ್ಮಲ್ಯಕ್ಕೆ ಸ್ಪಂದಿಸಿದ ವಿದ್ಯಾರ್ಥಿ ಹಾಗೂ ಯುವಜನತೆಗೆ ಉದ್ಯೋಗ ಕೊಡದ ಸರ್ಕಾರಗಳು ಚುನಾವಣೆ ಸಮಯದಲ್ಲಿ ಮಾತ್ರ ಉದ್ಯೋಗ ಕೊಡುವ ನೆಪ ಹೇಳಿ ಓಟು ಕದಿಯಲು ಬರುತ್ತಾರೆ ಎಂದು ಜನತೆ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಕೂಲಿಗಾಗಿ ಕಾಳು ಯೋಜನೆಯಲ್ಲಿ ಶಾಸಕ ನಾರಾಯಣಸ್ವಾಮಿ ನೂರಾರು ಕೆರೆಗಳಲ್ಲಿ ಹೂಳೆತ್ತುವ ಕೆಲಸವನ್ನು ಕೂಲಿಯವರಿಂದ ಮಾಡಿಸದೆ ಯಂತ್ರಗಳಿಂದ ಮಾಡಿಸಿ ಕೋಟ್ಯಾಂತರ ರೂ.ಗಳನ್ನು ನುಂಗಿರುತ್ತಾರೆ ಎಂದು ವಿದ್ಯಾವಂತ ನಿರುದ್ಯೋಗಿಗಳು ಹಾಗೂ ಹಳ್ಳಿಗಾಡಿನ ಕೃಷಿ ಕಾರ್ಮಿಕರು ಆಪಾದಿಸಿದರು. ಕ್ಷೇತ್ರದ ಶಾಸಕ ಯಾವೂದೊಂದು ಕೆಲಸಗಳನ್ನು ಮಾಡಿಸದೆ ಹಣವನ್ನು ಲಪಟಾಯಿಸುವುದರಲ್ಲಿ ನಿಸ್ಸೀಮ ಎಂದು ಜನರು ಕಿಡಿಕಾರಿದರು. ಮುಂದಿನ ಚುನಾವಣೆಯಲ್ಲಿ ನಾರಾಯಣಸ್ವಾಮಿಗೆ ತಕ್ಕ ಪಾಠ ಕಲಿಸುವುದಾಗಿ ಜನತೆ ಆಕ್ರೋಶದಿಂದ ತಿಳಿಸಿದರು.

ಸಂಜೆ ಸಮಂದೂರು ಗ್ರಾಮದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿತ್ತು. ಸಭೆಗೆ ರಾಜ್ಯ ಸಿಪಿಐ(ಎಂ) ಮುಖಂಡ ಮಹಾಂತೇಶ್ ಹಾಜರಿದ್ದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ರೈತ ಕಾರ್ಮಿಕ ವಿರೋಧಿ ನೀತಿಗಳ ಬಗ್ಗೆ ಜನರಿಗೆ ವಿವರಿಸಿದರು. ಮಹದೇಶ್ ಅಶೋಕಕುಮಾರ್, ಬಿ.ಎನ್.ಮಂಜುನಾಥ್, ಮುನಿಸ್ವಾಮಿ, ಬಾಲರಾಜು, ಸುರೇಶ್ ಇನ್ನು ಮುಂತಾದವರು ಮಾತನಾಡಿದರು.

ಬೆಂಗಳೂರಿನ ಮೆಜೆಸ್ಟಿಕ್ ಪ್ರದೇಶದಲ್ಲಿ ನಡೆದ ಪ್ರಚಾರಾಂದೋಲನದ ದೃಶ್ಯ



'ಮುಷ್ಕರದ ಹಕ್ಕು ಮೂಲಭೂತ ಹಕ್ಕು'

- ಹೈಕೋರ್ಟ್ ನ್ಯಾಯಮೂರ್ತಿ ಪಿ.ಎಸ್.ರಾಜಗೋಪಾಲ್

ಕಾರ್ಮಿಕರಿಗೆ ಕೆಲಸ ಮಾಡುವ ಹಕ್ಕು ಯಾವ ರೀತಿ ಇದೆಯೋ ಅದೇ ರೀತಿ ಕೆಲಸ ಮಾಡದೆ ಇರುವಂತಹ ಹಕ್ಕು ಕೂಡಾ ಇದೆ. ಸುಪ್ರೀಂ ಕೋರ್ಟ್ ಸರಕಾರಿ ನೌಕರರಿಗೆ ಸಂವಿಧಾನಾತ್ಮಕವಾಗಿ, ಶಾಸನಾತ್ಮಕವಾಗಿ, ನೈತಿಕವಾಗಿ ಮುಷ್ಕರ ಮಾಡುವ ಹಕ್ಕಿಲ್ಲವೆಂದು ಹೇಳಿದೆ. ನೈತಿಕವಾಗಿಯೂ ಮುಷ್ಕರ ನಡೆಸಲು ಹಕ್ಕಿಲ್ಲವೆನ್ನಲು ಅವರೇನು ಮಠಾಧಿಪತಿಗಳೇ ಎಂದು ಮುಷ್ಕರದ ಹಕ್ಕಿನ ಕುರಿತು ನಡೆದ ವಿಚಾರ ಸಂಕಿರಣದ ಮುಖ್ಯ ಭಾಷಣಗಾರರಾದ ಹೈಕೋರ್ಟಿನ ಪ್ರಸಿದ್ಧ ನ್ಯಾಯವಾದಿ ಪಿ.ಎಸ್.ರಾಜಗೋಪಾಲ್‌ರವರು ಹೇಳಿದರು. ಅವರು ದಕ್ಷಿಣ ಕನ್ನಡ ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ವೇದಿಕೆ ವತಿಯಿಂದ ಫೆಬ್ರವರಿ 14 ರಂದು ಸಿಬಿಓಓ ಸೆಂಟರ್ ಹಾಲ್ ಮಂಗಳೂರಿನಲ್ಲಿ ನಡೆದ ವಿಚಾರಸಂಕಿರಣದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.



"ಮುಷ್ಕರ ಯಾವಾಗ ನಡೆಯುತ್ತದೆ? ಆಡಳಿತ ವರ್ಗದೊಂದಿಗೆ ಕಾರ್ಮಿಕ ವರ್ಗ ಬೇಡಿಕೆ ಪಟ್ಟಿ ನೀಡಿ, ಮಾತುಕತೆ ವಿಫಲವಾದಾಗ ಮಾತ್ರ ಮುಷ್ಕರ ನಡೆಯುತ್ತದೆ. ಮುಷ್ಕರವೆಂಬುದು ಆಡಳಿತ ವರ್ಗ ಮತ್ತು ಕಾರ್ಮಿಕರಿಬ್ಬರಲ್ಲಿ ಒಪ್ಪಂದವೇರ್ಪಡಿಸಲು ಉಪಯೋಗಿಸುವ ಸಾಧನ. ಮುಷ್ಕರದ ಹಕ್ಕನ್ನು ಯಾರೂ ಕೊಟ್ಟದ್ದಲ್ಲ. ಕಾರ್ಮಿಕ ವರ್ಗ ಹೋರಾಟ ಮಾಡಿ ಪಡೆದುಕೊಂಡಿರುವ ಅಸ್ತ್ರ. ಸ್ವಾತಂತ್ರ್ಯ ಪೂರ್ವದಿಂದಲೇ ಪಡೆದುಕೊಂಡಿರುವ ಹಕ್ಕು, ಕಾರ್ಮಿಕ ಸಂಘಟನೆ ಕಾಯಿದೆ, ಕೈಗಾರಿಕಾ ವಿವಾದ ಕಾಯಿದೆಯಲ್ಲಿ ಸಂಘಟನೆ ಕಟ್ಟುವ, ಸಾಮಾಜಿ... ಚೌಕಾಸಿ ನಡೆಸುವ, ಮುಷ್ಕರ ನಡೆಸುವ ಹಕ್ಕುಗಳನ್ನು ಕಾರ್ಮಿಕರಿಗೆ ನೀಡಲಾಗಿದ್ದು, ಸುಪ್ರೀಂ ಕೋರ್ಟ್ ಮುಷ್ಕರ ನಡೆಸುವ ಹಕ್ಕು ಇಲ್ಲವೆಂದರೂ ಕಾರ್ಮಿಕ ವರ್ಗ ಸುಮ್ಮನಿರಲು ಸಾಧ್ಯವಿಲ್ಲವೆಂದು ಅವರು ಹೇಳಿದರು.

ತಮಿಳುನಾಡು ರಾಜ್ಯ ಸರಕಾರಿ ನೌಕರರು ಮತ್ತು ಅಧ್ಯಾಪಕರ ಮುಷ್ಕರದ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟ್ ನೀಡಿರುವ ತೀರ್ಪು ಸುಪ್ರಿಂ ಕೋರ್ಟ್‌ನಲ್ಲಿ ಎತ್ತಿರುವ ಪ್ರಶ್ನೆಗಳಿಗೆ ಉತ್ತರಿಸದೆ, ಎತ್ತದಿರುವ ಪ್ರಶ್ನೆಗಳಿಗೆ ಉತ್ತರಿಸಿ ರುವುದು ಸಮರ್ಥ ನೀಯವಲ್ಲ ಎಂದು ಅವರು ಹೇಳಿದರು. ಮುಷ್ಕರದ ಪ್ರಶ್ನೆ ಸುಪ್ರೀಂ ಕೋರ್ಟ್‌ನಲ್ಲಿ ಇರಲೇ ಇಲ್ಲ. ಆದರೆ ಸುಪ್ರಿಂ ಕೋರ್ಟ್ ಮುಷ್ಕರದ ಬಗ್ಗೆ ತೀರ್ಪು ನೀಡಿರುವುದು ಅಧಿಕಪ್ರಸಂಗಿತನ ಎಂದು ಅವರು ಹೇಳಿದರು.

ವಿಶ್ವಸಂಸ್ಥೆಯು ಅಂಗಸಂಸ್ಥೆಯಾಗಿರುವ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಸಮಾವೇಶ ಮುಷ್ಕರದ ಹಕ್ಕನ್ನು ಎತ್ತಿ ಹಿಡಿದಿದ್ದು ಭಾರತ ಸರಕಾರ ಕೂಡಾ ಅದಕ್ಕೆ ಸಹಿ ಹಾಕಿದೆ. ಆದುದರಿಂದ ಕೇಂದ್ರ ಸರಕಾರ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲವೆಂದು ಅವರು ಹೇಳಿದರು.

ಸಿಐಟಿಯು ಕರ್ನಾಟಕ ರಾಜ್ಯ ಅಧ್ಯಕ್ಷರಾದ ಬಿ.ಮಾಧವ, ಎಐಟಿಯುಸಿಯ ಜಿಲ್ಲಾ ಮುಖಂಡರಾದ ಬಿ.ಕೆ.ಕೃಷ್ಣಪ್ಪ, ಐಎನ್‌ಟಿಯುಸಿನ ಜಿಲ್ಲಾ ಮುಖಂಡರಾದ ಪಿ.ಆರ್.ಪದ್ಮನಾಭ್‌ರವರುಗಳು ವಿಚಾರ ಸಂಕಿರಣದ ಅಧ್ಯಕ್ಷೀಯ ಮಂಡಳಿಯಾಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಿಐಟಿಯುನ ವಸಂತ ಆಚಾರಿಯವರು ಸ್ವಾಗತಿಸಿ, ಎಐಟಿಯುಸಿನ ಚಂದಪ್ಪ ಅಂಚನ್‌ರವರು ಧನ್ಯವಾದವನ್ನರ್ಪಿಸಿದರು.

ಕೈಗಾರಿಕಾ ತರಬೇತಿ ಸಂಸ್ಥೆಗಳ 'ಶುಲ್ಕ ಹೇರಿಕೆ'

ಪರೀಕ್ಷಾ ಶುಲ್ಕ ಏರಿದೆ ಖಂಡನೆ

ರಾಜ್ಯ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ ಇತ್ತೀಚೆಗೆ ದಿಢೀರನೆ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಂದ ಪಡೆಯುತ್ತಿದ್ದ ಭದ್ರತಾ ಠೇವಣಿಮತ್ತು ಎಚ್ಚರಿಕೆ. ಹಣವನ್ನು ಏಕಾ-ಏಕಿಯಾಗಿ ಏರಿಸಿದೆ. ಇದು ಅಲ್ಲದೆ ಹೊಸದಾಗಿ ತರಬೇತಿ ಶುಲ್ಕವಾಗಿ ಪ್ರಥಮ-ದ್ವತೀಯ, ತೃತೀಯ ವರ್ಷದ ವಿದ್ಯಾರ್ಥಿಗಳಿಂದ ಕ್ರಮವಾಗಿ 500-1000-1500/- ರೂ. ಗಳನ್ನು ವಸೂಲಿ ಮಾಡಲು ನಿರ್ಧರಿಸಿರುವ ರಾಜ್ಯ ಸರ್ಕಾರದ ಅತ್ಯಂತ ಅಪಾಯಕಾರಿ ಕ್ರಮವನ್ನು ಭಾರತ ವಿದ್ಯಾರ್ಥಿ ಫೆಡರೇಷನ್ (SFI) ಉಗ್ರವಾಗಿ ಖಂಡಿಸಿದೆ.

ವಿದ್ಯಾರ್ಥಿಗಳು ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಅತ್ಯಂತ ದುರ್ಬಲ ವಿಭಾಗಗಳಿಂದ ಐಟಿಐಗೆ ಬರುವಂತವರಾಗಿದ್ದು ಈ ಪ್ರಮಾಣದ ದುಬಾರಿ ಶುಲ್ಕ ಏರಿಕೆಯನ್ನು ಭರಿಸಲು ಸಾಧ್ಯವಿಲ್ಲ ಅಲ್ಲದೆ ಐಟಿಐ ವಿದ್ಯಾರ್ಥಿಗಳು ಸಾಮಾನ್ಯ ವಿದ್ಯಾರ್ಥಿಗಳಂತಲ್ಲದೇ ಕೈಗಾರಿಕಾ'ಉತ್ಪಾದನಾ' ಪ್ರಕ್ರಿಯೆಯಲ್ಲಿಯೂ ಪಾಲ್ಗೊಂಡು ತಮ್ಮ ಕೊಡುಗೆ ನೀಡುವವರಾಗಿದ್ದಾರೆ.

ಸಾಮಾನ್ಯ ವಿದ್ಯಾರ್ಥಿಗಳಿಗೆ ಮಾತ್ರವಲ್ಲ ಪರಿಶಿಷ್ಟ ಜಾತಿ-ಪಂಗಡದ ವಿದ್ಯಾರ್ಥಿಗಳಿಗೂ ಕ್ರಮವಾಗಿ ಪ್ರಥಮ ವರ್ಷ 250, ದ್ವಿತೀಯ ವರ್ಷದ-500, ತೃತೀಯ ವರ್ಷದ-750/-ರೂ ಗಳನ್ನು ತರಬೇತಿ ಶುಲ್ಕವಾಗಿನಿಗದಿ ಮಾಡಿದೆ. ಇದೇರೀತಿಯಲ್ಲಿ 90ರೂ. ಇದ್ದ ಪರೀಕ್ಷೆ ಶುಲ್ಕವನ್ನು 280 ರೂ. ಗೆ ಏಕಾಏಕಿಯಾಗಿ ಏರಿಕೆ ಮಾಡಲಾಗಿದೆ. ವಿವಿಧ ವಿಭಾಗದ ವಿದ್ಯಾರ್ಥಿಗಳಿಗೆ ವಿವಿಧ ಸ್ವರೂಪದಲ್ಲಿ ತೀವ್ರವಾವಗಿ ಏರಿಸಲಾಗಿದೆ.

ಶಿಕ್ಷಣ ವಿರೋಧಿಯಾದ ಈ ಶುಲ್ಕ ಏರಿಕೆ ಹಗೂ ಈ ಕೂಡಲೇವಾಪಸ್ ಪಡೆಯ ಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್‌ಕರ್ನಾತಕ ರಾಜ್ಯ ಸಮಿತಿ ಸರ್ಕಾರವನ್ನು ಆಗ್ರಹಿಸಿತ್ತು.

ಬೆಂಗಳೂರಿನಲ್ಲಿ ರಾಜ್ಯದ ಪ್ರತಿಸ್ಪರ್ಧಿ ಹೊಸೂರು ರಸ್ತೆ ಸರ್ಕಾರಿ ಕೈಗಾರಿಕ ತರಬೇತಿ ಕೇಂದ್ರ, ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರ ಇತರೆ ಸರ್ಕಾರಿ ಕೈಗಾರಿದ ತರಬೇತಿ ಕೇಂದ್ರದ ವಿದ್ಯಾರ್ಥಿಗಳು ಫೆ-20ರಂದು ಸುಮಾರು 1000ಕ್ಕೂ ಹೆಚ್ಚು ಭಾಗವಹಿಸಿದ್ದು, ಸುಬ್ಬಯ್ಯ ಸರ್ಕಲ್‌ನಲ್ಲಿನ, ರಾಜ್ಯ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದ ಸಹ ನಿರ್ದೇಶಕರಿಗೆ ಹಾಗೂ ರಾಜ್ಯ ಕಾರ್ಮಿಕ ಸಚಿವರಿಗೆ ಭಾರತ ವಿದ್ಯಾರ್ಥಿ ಫೆಡರೇಶನ್ ನೇತೃತ್ವದಲ್ಲಿ ಮನವಿ ಸಲ್ಲಿಸಿದರು.

ರಾಜಕೀಯ ಪ್ರಾಮಾಣಿಕತೆ ಬಿಜೆಪಿಯ ಬೂಟಾಟಿಕೆ

ಹರ್ಕಿಶನ್ ಸಿಂಗ್ ಸುರ್ಜಿತ್

ತಾನಂತಹಾ 'ಮಹಾನ್' ವ್ಯಕ್ತಿ ಎಂಬುದನ್ನು ಪ್ರಧಾನಮಂತ್ರಿಗಳು ಯಾವುದೇ ಸಂದೇಹಕ್ಕೆ ಎಡೆಯಿಲ್ಲದಂತೆ ಸೂಚಿಸಿದ್ದಾರೆ. ಡಿ.ಪಿ.ಯಾದವರನ್ನು ಬಿಜೆಪಿಗೆ ಸೇರಿಸಿಕೊಂಡ ಬಗ್ಗೆ ಫೆಬ್ರವರಿ 23 ರಂದು ಪತ್ರಕರ್ತರು ಸುರಿಮಳೆಗೈದ ಪ್ರಶ್ನೆಗಳನ್ನು ಎದುರಿಸುತ್ತಾ "ವ್ಯಕ್ತಿಗಳನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮೊದಲು ಅವರ ವಿರುದ್ಧ ಕ್ರಿಮಿನಲ್ ಕೇಸ್‌ಗಳಿವೆಯೋ ಎಂಬುದನ್ನು ಖಚಿತಪಡಿಸಿಕೊಳ್ಳಲು ಅವರ ಹಿನ್ನೆಲೆಯನ್ನು ಪಕ್ಷ ಪರಿಶೀಲಿಸುತ್ತದೆ'' ಎಂದಿರುವುದಾಗಿ ವರದಿಯಾಗಿದೆ. ಅದೇ ವರದಿ "ಪ್ರತಿಯೊಬ್ಬರ ಪೂರ್ವಾಪರಗಳನ್ನು ಖಚಿತಪಡಿಸಿಕೊಳ್ಳುವುದು ಕಷ್ಟ" ಎಂದೂ ಅವರು ಹೇಳಿದರು ಎಂದಿದೆ. ಹೀಗೆ ಒಂದೆಡೆ ಬಿಜೆಪಿ ತಾನು ಪ್ರತಿಯೊಬ್ಬ ವ್ಯಕ್ತಿಯ ಪೂರ್ವಾಪರಗಳನ್ನು ಖಚಿತಪಡಿಸಿಕೊಳ್ಳುತ್ತೇವೆ ಎಂದೂ ಹೇಳಿಕೊಳ್ಳುತ್ತದೆ, ಇನ್ನೊಂದೆಡೆ ಪ್ರತಿಯೊಬ್ಬರ ಪೂರ್ವಾಪರಗಳನ್ನು ಖಚಿತಪಡಿಸಿಕೊಳ್ಳುವುದು ಕಷ್ಟ ಎಂದೂ ಹಲುಬುತ್ತದೆ.

ರಾಜಕೀಯ ಸಾಮರ್ಥ್ಯಕ್ಕಿಂತ ಮಾತಿನ ಅಬ್ಬರಕ್ಕೆ ಹೆಸರಾದ ಶ್ರೀಮತಿ ಸುಷ್ಮಾ ಸ್ವರಾಜ್‌ರವರೂ ಹಿಂದೆ ಬೀಳಲು ಇಷ್ಟಪಡದೆ "ಒಬ್ಬ ವ್ಯಕ್ತಿಯನ್ನು ಸೇರಿಸಿಕೊಳ್ಳುವುದರಿಂದ ಪಕ್ಷದ ನೀತಿಗಳ ಮೇಲೆ ಎಂದೂ ಪ್ರಭಾವ ಬೀರುವುದಿಲ್ಲ" ಎಂದಿದ್ದಾರೆ. ಇದು ಚಾಣಕ್ಯ ನೀತಿಯ ಪರ ಬಿಂದು. ಇದು ಯಾದವ್‌ರನ್ನು ಸೇರಿಸಿಕೊಂಡದಕ್ಕೆ ಬಂದ ವ್ಯಾಪಕ ಖಂಡನೆಯಿಂದಾಗಿ ಫೆಬ್ರವರಿ 24 ರಂದು ಬಿಜೆಪಿ ಆತನ ಸದಸ್ಯತ್ವವನ್ನು ರದ್ದು ಮಾಡಬೇಕಾಗಿ ಬಂದುದರ ಮೊದಲಿನ ಹೇಳಿಕೆಗಳು. ಇವು ಖಂಡಿತವಾಗಿಯೂ ಬಿಜೆಪಿ ತನ್ನ ಕೊನೆಯಿಲ್ಲದ ಬೂಟಾಟಿಕೆಯಿಂದ ಎಂತಹ ಇಕ್ಕಟ್ಟಿಗೆ ಸಿಲುಕಿಕೊಂಡಿದೆ ಎಂಬುದನ್ನು ತೋರಿಸುತ್ತದೆ. ತಾನು ಒಂದು ಭಿನ್ನರೀತಿಯ ಪಕ್ಷ, ನೀತಿಗಳ ಪಕ್ಷ, ರಾಜಕೀಯ ನೈತಿಕತೆಯನ್ನು ಆಧರಿಸಿರಬೇಕು ಎಂದು ನಂಬಿರುವ ಪಕ್ಷ ಎಂದು ಬೊಬ್ಬೆ ಹಾಕುವ ಈ ಪಕ್ಷದ ಮಾತು ಮತ್ತು ಕೃತಿಗಳಲ್ಲಿ ಅಗಾಧ ಅಂತರವಿರುವುದು ವಾಸ್ತವ ಸಂಗತಿ. 'ಉಪದೇಶ ಹೇಳಲು, ಬದನೆಕಾಯಿ ತಿನ್ನಲು' ಎಂಬ ಗಾದೆ ಮಾತು ಬಹುಶಃ ಇವರಂತವರನ್ನು ನೋಡಿಯೇ ಬಂದಿರಬೇಕು.

ಬೂಟಾಟಿಕೆ, ವಂಚನೆಗೆ ಸಾಕ್ಷಿ - ಡಿ.ಪಿ. ಯಾದವ್ ಪ್ರಕರಣ

ಉದಾಹರಣೆಗೆ ವಾಜಪೇಯಿ ಮತ್ತು ಅಡ್ವಾಣಿ ಉತ್ತರ ಪ್ರದೇಶ ಮುಖ್ಯಮಂತ್ರಿಗೆ ಶಾಲೆಗಳಲ್ಲಿ ಪ್ರತಿ ಶುಕ್ರವಾರ ಅರ್ಧ ದಿನ ರಜಾ ಕೊಡುವ ಅವಿವೇಕದ ನಿರ್ಣಯದ ಬಗ್ಗೆ ಮುಖ್ಯಮಂತ್ರಿಗೆ ನೀಡಿದ ಉಪದೇಶವನ್ನೇ ತಗೊಳ್ಳಿ, ಭಾರತ ಮಂತ್ರಿಯ ಪ್ರಭುತ್ವವಲ್ಲ, ಧರ್ಮವನ್ನಾಧರಿತ ರಾಜಕೀಯಕ್ಕೆ ಇಲ್ಲಿ ಸ್ಥಾನವಿಲ್ಲ ಎಂದು ಇವರಿಬ್ಬರೂ ಮುಲಾಯಂ ಸಿಂಗ್ ಹೇಳಿದ್ದಾರೆ. ಅವರು ಹೇಳಿದ್ದೇನೋ ನಿಜ. ಆದರೆ ಬಿಜೆಪಿ ದಶಕಗಳಿಂದ ನಡೆಸಿಕೊಂಡು ಬಂದದ್ದು ಧರ್ಮವನ್ನು ಆಧರಿಸಿದ ರಾಜಕೀಯವನ್ನೇ ಅಲ್ಲವೇ?

ಡಿ.ಪಿ.ಯಾದವ್ ಪ್ರಕರಣ ಅವರ ಬೂಟಾಟಿಕೆ, ವಂಚನೆಯ ಸ್ವಭಾವವನ್ನು ಚೆನ್ನಾಗಿ ತೋರಿಸಿಕೊಟ್ಟಿದೆ. ಫೆಬ್ರವರಿ 21 ರಂದು ಶನಿವಾರ ಉತ್ತರ ಪ್ರದೇಶದ ಪಶ್ಚಿಮ ಭಾಗದ ಈ ಕುಪ್ರಸಿದ್ಧ ಮಾಫಿಯಾ ದೊರೆಯನ್ನು ನವದೆಹಲಿಯಲ್ಲಿರುವ ಬಿಜೆಪಿಯ ಮುಖ್ಯ ಕಛೇರಿಯಲ್ಲಿ ಅದ್ದೂರಿಯಿಂದ ಎಲ್ಲಾ ಟಿ.ವಿ. ಕ್ಯಾಮರಾಗಳ ಎದುರು ಬಿಜೆಪಿಗೆ ಸೇರಿಸಿಕೊಳ್ಳಲಾಯಿತು. ಆಗ ಬಿಜೆಪಿಯ ಅಧ್ಯಕ್ಷ ವೆಂಕಯ್ಯನಾಯ್ಡು ಮತ್ತು ಪ್ರಧಾನ ಕಾರ್ಯದರ್ಶಿ ಈ ವಂಚಕ, ಕಳ್ಳಭಟ್ಟಿ ದೊರೆಯ ಪ್ರಭೆಯಲ್ಲಿ ಬೆಳಗುತ್ತಿದ್ದರು. ಅದೇ ವೇಳೆಗೆ ಡಿ.ಪಿ.ಯಾದವ್‌ರವರ ಮಗ ವಿಕಾಸ್ ಯಾದವ್ ಪತ್ರಕರ್ತರಿಗೆ ತನ್ನ ತಂದೆಯ ಬಗ್ಗೆ ವಿವರಗಳುಳ್ಳ ಕರಪತ್ರ ಹಂಚುತ್ತಿದ್ದ, ಅದರಲ್ಲಿರುವ ವಾಸ್ತವ ಸಂಗತಿಗಳು ಮತ್ತು ಬಿಜೆಪಿಯ ಘಟಾನುಘಟಿಗಳು ತಮ್ಮ ಈ ಹೊಚ್ಚಹೊಸ ಸಕ್ರಿಯ ಬಗ್ಗೆ 'ಹಮ್ಮ'ಯಿಂದ ಮಂಡಿಸುತ್ತಿದ್ದ 'ಸಂಗತಿ'ಗಳು ಒಂದೇ ಆಗಿದ್ದವು. ಉದಾಹರಣೆಗೆ ಡಿ.ಪಿ.ಯಾದವ್ ಈಗಾಗಲೇ ಜವಹರಲಾಲ್ ನೆಹರೂರವರ 'ವಿಶ್ವ ಇತಿಹಾಸದ ನೋಟಗಳು' ಪ್ರೇಮಚಂದ್ರರ 'ಗೋದಾನ' ಮತ್ತು ರವೀಂದ್ರನಾಥ್ ಠಾಗೋರರ 'ಗೀತಾಂಜಲಿ' ಓದಿದ್ದಾರಂತೆ. ಹೌದು, ಬಾಬಾ ಸಾಹೇಬ್ ಭೀಮರಾವ್ ಅಂಬೇಡ್ಕರ್‌ರವರ ಭಾಷಣಗಳನ್ನೂ ಓದಿದ್ದಾರಂತೆ. ಇಲ್ಲಿರುವ ಸಂದೇಶ ಸ್ಪಷ್ಟ - ಇಂತಹ ಅಮರಕೃತಿಗಳನ್ನು ಓದಿರುವಾತ ಅನೈತಿಕ ಕೆಲಸ ಮಾಡಬಲ್ಲನೇ? (ಫೆಬ್ರವರಿ 22 ರ 'ಏಶ್ಯನ್ ಏಜ್' ಪತ್ರಿಕೆ ಇನ್ನಷ್ಟು ರಸಮಯ ವಿವರಣೆಗಳನ್ನು ನೀಡಿದೆ)

ಮರುದಿನ ಫೆಬ್ರವರಿ 22 ರಂದು ಪ್ರಮೋದ್ ಮಹಾಜನ್ ಬಿಜೆಪಿಯ ತೆರೆದ ಬಾಗಿಲಿನ ಧೋರಣೆಯನ್ನು ಪ್ರಕಟಿಸಿದರು ಕೂಡಾ - ಏನೆಂದರೆ ಹಣ ಮತ್ತು ಖ್ಯಾತಿಯಿದ್ದವರಿಗೆಲ್ಲಾ ಬಿಜೆಪಿಯೊಳಗೆ ಸ್ವಾಗತ!

ಇನ್ನು ವಿಕಾಸ್ ಯಾದವ್ ಪ್ರಭಾವಳಿ ತನ್ನ ತಂದೆಗಿಂತ ಕಮ್ಮಿಯೇನಲ್ಲ. ಈ ಸಣ್ಣ ವಯಸ್ಸಿನಲ್ಲಿಯೇ ಎರಡು ಕೊಲೆ ಮೊಕದ್ದಮೆಗಳಲ್ಲಿ ಆತನ ಹೆಸರಿದೆ - ಜೆಸ್ಸಿಕಾ ಲಾಲ್ ಮತ್ತು ನಿತಿಶ್ ಕಟಾರಾ ಕೊಲೆಗಳಲ್ಲಿ. ಕ್ರೈಂ ಜಗತ್ತಿನಲ್ಲಿ ಆತನ ಭವಿಷ್ಯ ಉಜ್ವಲವಾಗಿರುವಂತಿದೆ.

ಈ ಪ್ರಕರಣ ಸಹಜವಾಗಿಯೇ ಬಹಳಷ್ಟು ಸಾರ್ವಜನಿಕ ಆಕ್ರೋಶಕ್ಕೆ ಹಾಗೂ ಮಾಧ್ಯಮಗಳಲ್ಲಿ ಟೀಕೆಗೆ ಒಳಗಾಯಿತು.

ಈಗ ಈ ಹೊಸದಾಗಿ ಸೇರಿಸಿಕೊಂಡ ಶಿಷ್ಯನನ್ನು ಬಿಜೆಪಿ ಹೊರಗೆ ಹಾಕಿದೆ ಎಂದ ಮಾತ್ರಕ್ಕೆ ಆ ಪಕ್ಷದ ರಾಜಕೀಯ ಶಿಸುನಿಕೇತನ ಮುಚ್ಚಿದೆ



ಎಂದರ್ಥವಲ್ಲ. ಈ ಹಿಂದೆ ಇಂತಹಎಷ್ಟೋ ಶಿಷ್ಯರು ಆ ಶಿಶುನಿಕೇತನದಲ್ಲಿದ್ದರು, ಈಗಲೂ ಅದರ ಆವರಣದಲ್ಲಿ ಇಂತಹ ಹಲವರಿದ್ದಾರೆ.

ಕಲ್ಯಾಣಸಿಂಗರ 'ಚಮತ್ಕಾರ'ಗಳು!

ಕಲ್ಯಾಣಸಿಂಗರ ಅವಾಂತರಗಳನ್ನೇ ನೋಡಿ. ಅವರು ವಾಜಪೇಯಿಯವರ ಕೃಪೆಯಿಂದ ಅಜ್ಞಾತವಾಸ ಅನುಭವಿಸಿ ಇತ್ತೀಚೆಗೆ ಮತ್ತೆ ಬಿಜೆಪಿ ಸೇರಿದವರು. 1997 ರಲ್ಲಿ ಉತ್ತರಾರ್ಧದಲ್ಲಿ ತನ್ನ ಎರಡನೇ ಮಂತ್ರಿಮಂಡಳ ರಚಿಸಿದಾಗ ಆತ ಕುಪ್ರಸಿದ್ಧನಾದದ್ದು ಬಿಎಸ್‌ಪಿ, ಕಾಂಗ್ರೆಸ್ ಮತ್ತಿತರ ಸಣ್ಣ ಪಕ್ಷಗಳಲ್ಲೂ ಒಡಕು ತಂದದ್ದಕ್ಕೆ ಮಾತ್ರವಲ್ಲ, ಸ್ವತಂತ್ರ ಭಾರತದಲ್ಲಿ ಮೊದಲ ಗಜಗಾತ್ರದ ಮಂತ್ರಿಮಂಡಲ (ಸುಮಾರು 8 ಡಝನ್ ಮಂತ್ರಿಗಳು) ರಚಿಸಿದ್ದಕ್ಕೆ ಮಾತ್ರವಲ್ಲ, ತನಗೆ ಬೆಂಬಲ ನೀಡಿದ ಪ್ರತಿಯೊಬ್ಬ ವಂಕ, ಸಿದ್ಧ, ನಾಣಿಯನ್ನೂ ಮಂತ್ರಿಯಾಗಿ ಮಾಡಲಾಯಿತು. ಹೀಗೆ ಮಂತ್ರಿಗಾದಿಯೇರಿದವರಲ್ಲಿ ಹಲವು ಭಯಾನಕ ಕ್ರಿಮಿನಲ್‌ಗಳೂ ಇದ್ದರು. ಅವರಲ್ಲೊಬ್ಬ 'ರಾಜಾ ಭಯ್ಯಾ'. ಆತ ಮಾಯಾವತಿ ಆಡಳಿತಕ್ಕೆ ಬೆದರಿಕೆ ತರುವಂತೆ ಕಂಡಾಗ ಆತನನ್ನು ಆಕೆ ಪೋಟಾದಡಿ ಜೈಲಿಗೆ ಹಾಕಿದರು.

1997 ರಲ್ಲಿ ಕಲ್ಯಾಣ ಸಿಂಗ್ ಎರಡು ಚಮತ್ಕಾರಗಳನ್ನು ಮಾಡಿದರು. ಮೊದಲನೆಯದು, ಕುಖ್ಯಾತ ಕ್ರಿಮಿನಲ್‌ಗಳನ್ನು ಮಂತ್ರಿಗಳಾಗಿ ಮಾಡಿ ಅವರಿಗೆ ಕಾನೂನುಬದ್ಧತೆ ಒದಗಿಸಿದ್ದು. ಏಷ್ಟೆಂದರೆ ಕೆಲವೇ ದಿನಗಳ ಹಿಂದಿನವರೆಗೂ ಅವರನ್ನು ಹಿಡಿದು ಹಾಕಿ, ಜೈಲಿಗೆ ಹಾಕಲು ಓಡಾಡುತ್ತಿದ್ದ ಪೋಲೀಸರು ಈಗ ಅವರಿಗೆ ಸೆಲ್ಯೂಟ್ ಹೊಡೆಯಬೇಕಾಗಿ ಬಂದಿತ್ತು. ಎರಡನೆಯದಾಗಿ, ಈ ಬೆಳವಣಿಗೆ ಹಲವಾರು ಕ್ರಿಮಿನಲ್‌ಗಳ ಆಕಾಂಕ್ಷೆಗಳನ್ನು ಹೆಚ್ಚಿಸಿತು. ತಮ್ಮ ಭುಜಬಲ ಪ್ರಯೋಗಿಸಿ ಅಸೆಂಬ್ಲಿ ಸೀಟು ಗೆದ್ದರೆಂದರೆ ಮಂತ್ರಿಗಾದಿ ಕಷ್ಟವೇನಲ್ಲ ಎಂಬ ಆಸೆ ಅವರಲ್ಲಿ ಚಿಗುರಿತು. ಯು.ಪಿ.ಯ ಒಬ್ಬ ಯುವಕ ಅಸೆಂಬ್ಲಿ ಪ್ರವೇಶಿಸಲು ಎರಡು ಕೋಟಿ ರೂಪಾಯಿಗಳನ್ನು ಗಳಿಸಲೆಂದೇ ಅಪರಾಧ ಜಗತ್ತು ಪ್ರವೇಶಿಸಿದ ನಿಜ ಕಥೆಯೊಂದಿದೆ.

ರಾಜ್ಯದಲ್ಲಿ ರಾಜಕೀಯದ ಅಪರಾಧೀಕರಣ ಶೀಘ್ರಗೊಂಡದ್ದು ಹೀಗೆ - ಬಿಜೆಪಿಯ ಮತ್ತು ನೈತಿಕತೆಯ ಬಗ್ಗೆ ಅಲ್ಲಿರುವ ಉಪದೇಶಕರ ಕೃಪೆಯಿಂದ.

ಅಷ್ಟೇ ಅಲ್ಲ, ಆ ದಿನಗಳಲ್ಲಿ ಕಲ್ಯಾಣ್ ಸಿಂಗ್ ಸರ್ಕಾರ ಕ್ರಿಮಿನಲ್ ಹಿನ್ನೆಲೆಯ ಮಂತ್ರಿಗಳೂ ಸೇರಿ ಎಲ್ಲಾ ಮಂತ್ರಿಗಳ ಭದ್ರತೆಯ ಹೆಸರಿನಲ್ಲಿ, ಅವರ ಐಷಾರಾಮದ ಜೀವನ ಶೈಲಿಗೆ ಹಣವನ್ನು ನೀರಿನಂತೆ ಖರ್ಚು ಮಾಡಿತು. ಈ ಭದ್ರತೆ ಅಥವಾ ರಕ್ಷಣೆ ಯಾರಿಂದ? ಪೋಲೀಸರಿಂದಲೇ ಅಥವಾ ಪ್ರತಿಸ್ಪರ್ಧಿ ಕ್ರಿಮಿನಲ್‌ಗಳಿಂದಲೇ? ಅಥವಾ ಇಬ್ಬರಿಂದರೂ ಇರಬಹುದೇ? ಇದಕ್ಕೆ ಅಲ್ಲಿ ಎಷ್ಟೊಂದು ಹಣ ಚೆಲ್ಲಲಾಯಿತೆಂದರೆ ಅಭಿವೃದ್ಧಿ ಚಟುವಟಿಕೆಗಳೆಲ್ಲಾ ಸ್ಥಗಿತಗೊಂಡವು.

ಈ ಬೆಳವಣಿಗೆ ಜನಸಾಮಾನ್ಯರಲ್ಲಿ ಭಯದ ಭಾವನೆ ಹೆಚ್ಚಿಸಿದ್ದು ಸಹಜವೇ. ಕಾನೂನು ಮುರುಕರಿಗೆ ಕಾನೂನೇ ರಕ್ಷಣೆ ನೀಡುವಾಗ ಜನಸಾಮಾನ್ಯರ ಗೋಳನ್ನು ಕೇಳುವರಾರು? ಎಷ್ಟೆಂದರೆ ಕುಂದಾದ ಕುಖ್ಯಾತ ಕ್ರಿಮಿನಲ್ ರಾಜಾ ಭಯ್ಯಾ ಒಬ್ಬ ವ್ಯಕ್ತಿಯನ್ನು ಮೊಸಳೆಗೆ ತಿನ್ನಿಸುವ ಭಂಡತನ ಪ್ರದರ್ಶಿಸಿದ. ಆ ದುರ್ದೈವಿಯ 'ಅಪರಾಧ'ವೆಂದರೆ ಈ ಅಪರಾಧಿಯ ವಿರುದ್ಧ ಸಾಕ್ಷ್ಯ ನೀಡಿದ್ದು!

ಈಗ ಈ 'ಕುಂದಾದ ಭಯಂಕರ ವ್ಯಕ್ತಿ'ಯನ್ನು ಜೈಲಿನಿಂದ ಬಿಡಿಸಲು ಕೈಲಾದ ಪ್ರಯತ್ನ ಮಾಡುವವರಲ್ಲಿ ಬಿಜೆಪಿಯ ಮುಖಂಡರು, ಅದರಲ್ಲೂ ಬಿಜೆಪಿ ಠಾಕುರ್ ಮುಖಂಡ, ಮಾಜಿ ಮುಖ್ಯಮಂತ್ರಿ ಹಾಗೂ ಪ್ರಸಕ್ತ ಕೇಂದ್ರ ಮಂತ್ರಿ ರಾಜನಾಥ್ ಸಿಂಗ್‌ರವರೂ ಇದ್ದಾರೆ.



ಭಯದಿಂದ ಮುಕ್ತಿ ಹೇಗೆ?

ಇದೇ ಐದು ವರ್ಷಗಳ ಹಿಂದೆ ಬಿಜೆಪಿ ಸಿದ್ಧಪಡಿಸಿದ ಎನ್‌ಡಿಎ ಪ್ರಣಾಳಿಕೆಯಲ್ಲಿ ನೀಡಿದ ಭರವಸೆಗಳ ನಿಜವಾದ ಅರ್ಥ. ಆ ದಸ್ತಾವೇಜು ಜನಗಳನ್ನು ಭಯ, ಭೂಖ್(ಹಸಿವು) ಮತ್ತು ಭ್ರಷ್ಟಾಚಾರದಿಂದ ಮುಕ್ತಗೊಳಿಸುವುದಾಗಿ ಭರವಸೆ ನೀಡಿದ್ದು ನಮಗೆ ಗೊತ್ತು. ಹಸಿವು, ಭ್ರಷ್ಟಾಚಾರಗಳಿಂದ ಹೇಗೆ ಜನಗಳಿಗೆ ಮುಕ್ತಿ ದೊರೆತಿದೆ ಎಂದೂ ನಮಗೀಗ ತಿಳಿದಿದೆ. ಭಯದ ಶಾಪದಿಂದ ಮುಕ್ತಿಗೆ ಅವರು ಅನುಸರಿಸಿದ ಮಾರ್ಗಗಳೇನು ನೋಡೋಣ. ಇದರರ್ಥ ಇತರ ಬಂಡವಾಳಶಾಹಿ-ಭೂಮಾಲಿಕ ಶಕ್ತಿಗಳು ಕ್ರಿಮಿನಲ್‌ಗಳಿಗೆ ಆಶ್ರಯ ನೀಡಿ ಅವರ ಭುಜಬಲವನ್ನು ಬಳಸಿಲ್ಲ ಎಂದೇನಲ್ಲ. ಒಂದಿಲ್ಲೊಂದು ಮಟ್ಟದವರೆಗೆ ಅವೆರಲ್ಲಾ ಅದನ್ನು ಮಾಡುತ್ತಲೇ ಬಂದಿದ್ದಾರೆ. ಆದರೆ ಬೇರೆ ಬಂಡವಾಳಶಾಹಿ - ಭೂಮಾಲಕ ಪಕ್ಷಗಳು ಮತ್ತು ಬಿಜೆಪಿ ನಡುವಿನ ವ್ಯತ್ಯಾಸವೆಂದರೆ ಬಿಜೆಪಿ ಇದನ್ನು ನೀತಿಗಳು, ರಾಜಕೀಯ ನೈತಿಕತೆಯ ಹೆಸರಲ್ಲಿ ಮಾಡುತ್ತಿದೆ. ರಾಜಕೀಯದ ಅಪರಾಧೀಕರಣದ ಬಗ್ಗೆ ವೋರಾ ಸಮಿತಿಯ ವರದಿ ಮತ್ತು ಶಿಫಾರಸ್ಸುಗಳು ಮಾಧ್ಯಮಗಳಲ್ಲಿ ಕಾಣಿಸಿಕೊಂಡಿದ್ದು ಆ ಬಗ್ಗೆ ದೇಶದ ಉದ್ದಗಲಕ್ಕೂ ಬಿಸಿಬಿಸಿ ಚರ್ಚೆ ನಡೆಯುತ್ತಿದ್ದಾಗಲೇ ಉತ್ತರ ಪ್ರದೇಶದಲ್ಲಿ ಬಿಜೆಪಿಯ ಸಂಕೇತವಾದ ಕಲ್ಯಾಣ್ ಸಿಂಗ್ ಕ್ರಿಮಿನಲ್‌ಗಳನ್ನು ಮಂತ್ರಿಪೀಠಗಳಲ್ಲಿ ಕೂರಿಸುತ್ತಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಆದರೆ ಇತ್ತ ರಾಜಕೀಯದ ಅಪರಾಧೀಕರಣದ ವಿರುದ್ಧ ಬಿಜೆಪಿ ಮುಖಂಡರು ಅಬ್ಬರಿಸುತ್ತಿದ್ದರು. ಹಾಗೆ ಮಾತಾಡಲು ಅವರಿಗೆ ಅಧಿಕಾರವಿಲ್ಲವೆಂದೇನಲ್ಲ. ಆದರೆ ಕಳ್ಳನೇ "ಕಳ್ಳ ಕಳ್ಳ ಕಳ್ಳ' ಎಂದು ಕೂಗಿಕೊಂಡಾಗ ಮಾತೇ ಬೇರೆ. ಇಂತಹ ಕಳ್ಳರನ್ನು ಏನು ಮಾಡಬೇಕು ಎಂದು ಜನ ಯೋಚಿಸಲೇಬೇಕಾಗುತ್ತದೆ.

ಅವರ ಬೂಟಾಟಿಕೆಯ ಮಟ್ಟ ಎಲ್ಲಿಯವರೆಗೆ ಹೋಗಿದೆಯೆಂದರೆ ತಾವು ಎಲ್ಲವನ್ನು ಶುದ್ಧೀಕರಿಸುವ ಗಂಗಾಜಲದಂತೆ ಎಂದೂ ಅವರು ಹೇಳಿಕೊಳ್ಳುತ್ತಾರೆ. (ಗಂಗಾನದಿ ಈಗ ಎಷ್ಟೊಂದು ಕಲುಷಿತವಾಗಿದೆ ಎಂದು ಈ ಬಡಪಾಯಿಗಳಿಗೆ ತಿಳಿದಂತಿಲ್ಲ). ಅವರು ಕೊಡುವ ಇನ್ನೊಂದು ಉಪಮೆಯೆಂದರೆ ಸಮುದ್ರದ್ದು. ನದಿ ಸಮುದ್ರ ಸೇರಿದಾಗ ಅದು ಸಮುದ್ರವೇ ಆಗಿಬಿಡುತ್ತದೆ ಎಂದು. ಬಿಜೆಪಿಯ ಇಂತಹ ಮಾತಿನ ಕಸರತ್ತುಗಳ ಬಗ್ಗೆ ಯಾರಿಗೆ ಗೊತ್ತಿಲ್ಲ?

ಭ್ರಷ್ಟಾಚಾರದ ವಿಷಯದಲ್ಲಿ ಬಿಜೆಪಿಯ ಗೋಸುಂಬೆತನ ಪೂರ್ಣವಾಗಿ ಬಯಲಾಗಿರುವಂತೆ ರಾಜಕೀಯದ ಅಪರಾಧೀಕರಣದಲ್ಲೂ ಬಯಲಾಗಿದೆ. ಪೂರ್ವ ಯುಪಿಯ ಭೃಜಭೂಷಣಸಿಂಗನಿಂದ ಹಿಡಿದು ಪಶ್ಚಿಮ ಯು.ಪಿ.ಯ ಡಿ.ಪಿ.ಯಾದವ್ ವರೆಗೆ ಇರುವ ಹಲವಾರು ಅಪರಾಧ ಜಗತ್ತಿನ ಘಟಾನುಘಟಿಗಳನ್ನು ಬಿಜೆಪಿ ಚುನಾವಣೆಗಳನ್ನು ಗೆಲ್ಲಲು ಬಳಸಿಕೊಂಡಿದೆ ಅಥವಾ ಬಳಸಿಕೊಳ್ಳಲು ಪ್ರಯತ್ನಿಸಿದೆ. ಬೇರೆ ರಾಜ್ಯಗಳಲ್ಲಿ ಇಂತಹ ಎಷ್ಟು ವ್ಯಕ್ತಿಗಳನ್ನು ಬಿಜೆಪಿಯ ನಾಯಕಮಣಿಗಳು ಬಳಸಿಕೊಂಡಿದ್ದಾರೋ? ಆ ಬಗ್ಗೆ ಸ್ವಾಭಾವದಿಂದಾಗಿ ಚರ್ಚಿಸುತ್ತಿಲ್ಲ.

ಬಿಜೆಪಿಗೇಕೆ ಇಂತಹ ಇಕ್ಕಟ್ಟು?

ಪಕ್ಷದ ಮೇಲಿನ ಇಂತಹ ಒತ್ತಡವನ್ನು ಅರ್ಥಮಾಡಿಕೊಳ್ಳಬಹುದು. ಜನಗಳಿಗೆ ತಮ್ಮ

ಪುಟ 12 ಕ್ಕೆ

ಈ ಮಹಾ ಮುಷ್ಕರ ಎಚ್ಚ

ಮುಷ್ಕರದ ಹಕ್ಕಿಗಾಗಿ ಫೆಬ್ರವರಿ 24 ರಂದು ನಡೆದ ಅಖಿಲ ಭಾರತ ಮಹಾಮುಷ್ ಆಳುವವರು ಅದೆಷ್ಟೇ ಕುತಂತ್ರದ ಆಟ ಆಡಿದರೂ, ದಬ್ಬಾಳಿಕೆ, ಬೆದರಿಕೆಗಳನ್ನು ಮಹಾ ಸಂಗ್ರಾಮದಲ್ಲಿ ಧುಮುಕಿ ದುಡಿವವರ್ಗದ ಈ ಮಹಾನ್ ಕಾರ್ಯಾಚರಣೆ ನೌಕರರು, ಮಹಿಳೆಯರು, ಬುದ್ಧಿಜೀವಿಗಳು ದನಿಗೂಡಿಸಿ ಬೆಂಬಲವಾಗಿ ನಿಂತರು. ಸ್ವಯಂಘೋಷಿತ ಬಂದ್ ಆಗಿ ಪರಿವರ್ತನೆಯಾಗಿದೆ. ಇದು ಬಿಜೆಪಿ ನೇತೃತ್ವದ ಜನದ್ರೋಹಿ ನೀತಿಗಳಿಗೆ ನೀಡಿದ ಪ್ರಹಾರ. ಮುಂದೆ ಅಧಿಕಾರಕ್ಕೆ ಬರಬೇಕೆಂಬ ಶ ಇದು ಏಳನೇ ಚಾರಿತ್ರಿಕ ಸಾರ್ವತ್ರಿಕ ಮುಷ್ಕರ. ಈ ಮುಷ್ಕರದ ಪ್ರಮುಖ ಪರಿಣಾವ ಸಿಐಟಿಯು ರಾಷ್ಟ್ರ ಮುಖಂಡರಾದ ತಪನ್ ಸೇನ್, ಹಾಗೆ ಕರ್ನಾಟಕದಲ್ಲಿನ ಯ

ಫೆ.24 ರಂದು ಮುಷ್ಕರದ ಹಕ್ಕಿನ ರಕ್ಷಣೆಗಾಗಿ-ಸುಳ್ಳು ಪ್ರಚಾರವನ್ನು ಬಯಲಿಗೆಳೆದ ಸಾರ್ವತ್ರಿಕ ಮುಷ್ಕರ

ವಿನಾಶಕಾರಿ ಉದಾರೀಕೃತ ಆರ್ಥಿಕ ನೀತಿಗಳನ್ನು ಆರಂಭಿಸಿದ ನಂತರ ದೇಶವು 9ನೇ ಸಾರ್ವತ್ರಿಕ ಮುಷ್ಕರವನ್ನು ಫೆ. 24, 20004 ರಂದು ದೇಶವು ಕಂಡಿತು. ಜನವರಿ 5 ರಂದು INTUC ಕೇಂದ್ರ ಕಚೇರಿಯಲ್ಲಿ ನಡೆದ ಪ್ರಮುಖ ಕೇಂದ್ರ ಕಾರ್ಮಿಕ ಸಂಘಟನೆಗಳ ಸಭೆಯಲ್ಲಿ ಈ ದಿನಾಂಕವನ್ನು ನಿಗದಿಗೊಳಿಸಲಾಗಿತ್ತು.

ಈ ಸಾರ್ವತ್ರಿಕ ಮುಷ್ಕರ ಕಾರ್ಮಿಕರ ಯಾವುದೇ ಆರ್ಥಿಕ ಬೇಡಿಕೆಯನ್ನು ಮುಂದಿಟ್ಟಿಲ್ಲ. ಸುಪ್ರೀಂಕೋರ್ಟ್‌ನ ಮುಷ್ಕರದ ಕುರಿತಾದ ತೀರ್ಪಿನಿಂದ ಮುಷ್ಕರದ ಹಕ್ಕನ್ನು ರಕ್ಷಿಸಿಕೊಳ್ಳಲು ಈ ಮುಷ್ಕರ ನಡೆಯುತ್ತಿದೆ. ಬಡತನವನ್ನು ಆಳಗೊಳಿಸುತ್ತಿರುವ, ನಿರುದ್ಯೋಗವನ್ನು ಹೆಚ್ಚಿಸುತ್ತಿರುವ, ಖಾಸಗೀಕರಣಕ್ಕೆ ಚಾಲನೆ ನೀಡಿರುವ ಹಾಗೂ ಕೈಗಾರಿಕೆಗಳನ್ನು ಮುಚ್ಚಲು ಕಾರಣವಾಗಿರುವ ಎನ್‌ಡಿಎ ಸರ್ಕಾರ ಅನುಸರಿಸುತ್ತಿರುವ ವಿನಾಶಕಾರಿ ಆರ್ಥಿಕ ನೀತಿಗಳ ವಿರುದ್ಧವೂ ಈ ಮುಷ್ಕರ ನಡೆಯುತ್ತಿದೆ. ಈ ಆರ್ಥಿಕ ನೀತಿಗಳು ಇಡೀ ಆರ್ಥಿಕತೆಗೆ ಅದರಲ್ಲೂ ಮುಖ್ಯವಾಗಿ ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾಗಿವೆ.

ಯೋಜಿತ ಧಾಳಿಗಳು

ಸಾರ್ವತ್ರಿಕ ಮುಷ್ಕರದ ಸಂದರ್ಭದಲ್ಲಿ ಎತ್ತಿರುವ ಎರಡೂ ವಿಷಯಗಳೂ ಅಂತರಸಂಬಂಧ ಪಟ್ಟವು. ಕಾರ್ಮಿಕರ ಹಕ್ಕುಗಳ ಮೇಲೆ ನಡೆಯುತ್ತಿರುವ ಎಲ್ಲಾ ಧಾಳಿಗಳೂ ಸಹ ಎನ್‌ಡಿಎ ಸರ್ಕಾರ ಅನುಸರಿಸುತ್ತಿರುವ ಐಎಂಎಫ್-ವಿಶ್ವಬ್ಯಾಂಕ್ ನಿರ್ದೇಶಿತ ನೀತಿಗಳ ನೇರ ಪ್ರತಿಫಲ. ಆ ನೀತಿಗಳನ್ನು ಜಾರಿಗೊಳಿಸಲು ಆರಂಭಿಸಿದ ದಿನದಿಂದಲೂ ದೇಶಾದ್ಯಂತ ಪ್ರತಿರೋಧವನ್ನು ಬೆಳೆಸಲು ಕಾರ್ಮಿಕವರ್ಗ ನಿರಂತರವಾಗಿ ಪ್ರಯತ್ನಿಸುತ್ತಿದೆ. ಈ ಪ್ರತಿರೋಧವು ಈಗ ಕಾರ್ಮಿಕ ಚಳುವಳಿಯ ಗಡಿಯಾಚೆಯಿಂದಲೂ ಜನತೆಯ ಬೆಂಬಲವನ್ನು ತನ್ನತ್ತ ಸೆಳೆದುಕೊಳ್ಳಲು ಯಶಸ್ವಿಯಾಗುತ್ತಿದೆ. 'ಈ ಪ್ರತಿರೋಧವನ್ನು ಹತ್ತಿಕ್ಕಲು ಕ್ರಮಗಳನ್ನು ಕೈಗೊಳ್ಳುವುದೇ ಎರಡನೇ ಹಂತದ ಸುಧಾರಣೆಗಳ ಉದ್ದೇಶವಾಗಿದ್ದು ದುಡಿಯುವ ವರ್ಗವನ್ನು ಗುಲಾಮಗಿರಿಗೆ ನೂಕುವ ಮತ್ತು ಅವರ ಪ್ರತಿಭಟನೆ ಮತ್ತು ಅಭಿವ್ಯಕ್ತಿಯ ಹಕ್ಕನ್ನು ಕಸಿದುಕೊಳ್ಳಲು ಮುಂದಾಗಿವೆ. ಈ ಪ್ರಯತ್ನದ ಭಾಗವಾಗೇ ಕೈಗಾರಿಕಾ ವಿವಾದಗಳ ಕಾಯ್ದೆ ಮತ್ತು ಗುತ್ತಿಗೆ ಕಾರ್ಮಿಕರ ಕಾನೂನುಗಳನ್ನು ತಿದ್ದಲು ಎನ್‌ಡಿಎ ಸರ್ಕಾರ ಮಸೂದೆಯನ್ನು ಅಂತಿಮಗೊಳಿಸಿ ಹಸಿರು ನಿಶಾನೆ ತೋರಿದೆ. ಬಹುಶಃ ಚುನಾವಣೆ ಭಯದಿಂದ 13ನೇ ಲೋಕಸಭೆಯ ಮುಂದೆ ಈ ಮಸೂದೆಯನ್ನು ಎನ್‌ಡಿಎ ಸರ್ಕಾರ ಸಂಸತ್ತಿನ ಮುಂದೆ ತಂದಿಲ್ಲ.

ಆದರೆ ಕಾರ್ಮಿಕವರ್ಗವನ್ನು ದುರ್ಬಲಗೊಳಿಸಲು ಮತ್ತು ಅನಿಶ್ಚಿತಗೊಳಿಸಲು ಶಾಸನಾತ್ಮಕ ಪ್ರಯತ್ನಗಳನ್ನು ಮಾಡುತ್ತಿರುವಾಗಲೇ ರಾಜ್ಯ ಯಂತ್ರವು ಆಡಳಿತಾತ್ಮಕ ಕ್ರಮಗಳ ಮೂಲಕ ಇಡೀ ಸಂಘಟಿತ ಕಾರ್ಮಿಕ ವರ್ಗದ ಹಕ್ಕುಗಳನ್ನೇ ಕಸಿದುಕೊಳ್ಳಲು ಸರ್ವ ಪ್ರಯತ್ನಗಳನ್ನು ನಡೆಸುತ್ತಿದೆ. ನ್ಯಾಯಾಂಗವೂ ಸಹ ಈ ಕ್ರಮಗಳೊಡನೆ ಕೈಜೋಡಿಸಲು ಮತ್ತು ಅವುಗಳನ್ನು ಕಾನೂನುಬದ್ಧಗೊಳಿಸಲು, ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಲು ಪ್ರಭುತ್ವ ಕೈಗೊಳ್ಳುತ್ತಿರುವ ಕ್ರಮಗಳನ್ನು ಬೆಂಬಲಿಸುವುದರಲ್ಲಿ ಹಾಗೂ ಮಾಲೀಕರೊಡನೆ ಕ್ರಿಯಾಶೀಲವಾಗಿದೆ. ಉದಾರೀಕರಣ ನೀತಿಗಳ ಆರಂಭದ ನಂತರ ಮಾಲೀಕರು ತೋರುತ್ತಿರುವ ಧೈರ್ಯವೇ ಇದನ್ನೂ ಹೇಳುತ್ತದೆ. ಮುಷ್ಕರಗಳು ವಿರಳವಾಗಿದ್ದರು ಮಾಲಕರು ಕೈಗಾರಿಕೆಗಳ ಬೀಗಮುದ್ರೆ ನಡೆಸುವುದು, ಮುಚ್ಚುವುದು ನಡೆದೇ ಇದೆ. 1991-2000 ದಲ್ಲಿ ಒಟ್ಟು ನಷ್ಟವಾದ ಮಾನವ ದಿನಗಳಲ್ಲಿ ಶೇ 60 ರಷ್ಟು ನಷ್ಟವಾಗಿದೆ. **1999 ರಲ್ಲಿ ಕಾರ್ಮಿಕರ ಮುಷ್ಕರದಿಂದ ಉಂಟಾದ ಮಾನವ ದಿನಗಳ ನಷ್ಟಕ್ಕಿಂತ ಬೀಗಮುದ್ರೆಯಿಂದುಂಟಾದುದು 8 ಪಟ್ಟು ಹೆಚ್ಚು. 2001 ರಲ್ಲಿ ಮೂರು ಪಟ್ಟು ಹಾಗೂ 2002 ರಲ್ಲಿ ನಾಲ್ಕು ಪಟ್ಟು ಹೆಚ್ಚು.** ಬೀಗಮುದ್ರೆ ಮತ್ತು ಅನಧಿಕೃತ ಮುಚ್ಚುವಿಕೆಯನ್ನು ಸೇರಿದಂತೆ ನಷ್ಟವಾಗಿರುವ ಶೇ 90 ರಷ್ಟು ಮಾನವ ದಿನಗಳು ಮಾಲೀಕರಿಂದಲೇ ಎಂದು ದೂರಬಹುದು. ಆದರೆ **ಆಗಸ್ಟ್ 6 ರಂದು ನೀಡಿದ ತೀರ್ಪಿನಲ್ಲಿ 'ಮುಷ್ಕರ' ಎಂಬುದು 'ಕಾರ್ಮಿಕರಿಂದ ಅತಿ ಹೆಚ್ಚು ದುರ್ಬಳಕೆಯಾದ ಪದ' ಎಂದು ಹೇಳಲು ಸರ್ವೋಚ್ಚ ನ್ಯಾಯಾಲಯ ಹೇಸಲಿಲ್ಲ.**


ನಗ್ನ ಉಲ್ಲಂಘನೆ

ಬೀಗಮುದ್ರೆ ಮತ್ತು ಮುಚ್ಚುವಿಕೆಯ ಜೊತೆಯಲ್ಲೇ ಅದರಲ್ಲೂ ಮುಖ್ಯವಾಗಿ ಕನಿಷ್ಟ ಕೂಲಿಯನ್ನು ನೀಡುವಲ್ಲಿ ಕಾರ್ಮಿಕ ಕಾನೂನುಗಳ ನಗ್ನ ಉಲ್ಲಂಘನೆ. ಇವುಗಳು ಅತ್ಯಂತ ಸಾಮಾನ್ಯ ಘಟನೆಗಳಾಗಿವೆ. ಕಾರ್ಮಿಕರು ದೂರು ನೀಡಿ, ನೀಡಿ ಸುಸ್ತಾಗಿಹೋಗಿದ್ದಾರೆ. 'ಹೂಡಿಕೆದಾರರ ಮಿತ್ರ'ನ ಹೆಸರಿನಲ್ಲಿ ಸರ್ಕಾರ ಈ ಎಲ್ಲಾ ನೀತಿಗಳನ್ನು ಜಾರಿಗೊಳಿಸುತ್ತಿದೆ. ಉದಾಹರಣೆಗೆ ಕನಿಷ್ಟ ಕೂಲಿಯ ಉಲ್ಲಂಘನೆಯ ವಿಚಾರದಲ್ಲಿ 2002-003 ರಲ್ಲಿ ನೋಂದಾಯಿಸಿದ ದೂರುಗಳಲ್ಲಿ ಕಾರ್ಮಿಕ ಸಚಿವಾಲಯದ ವಾರ್ಷಿಕ ವರದಿಯಂತೆ ಕೇವಲ ಮೂರನೇ ಒಂದರಷ್ಟು ಪ್ರಕರಣಗಳನ್ನು ಮಾತ್ರ ಪರಿಶೀಲಿಸಿ ವಿಲೇವಾರಿ ಮಾಡಲಾಗಿದೆ.

ಹಿನ್ನೆಲೆ :


ವಿಮಾ ನೌಕರರ ಪ್ರತಿಭಟನೆ

ದೇಶದ ಸಂಪತ್ತನ್ನು ಸೃಷ್ಟಿಸುವ ದುಡಿಯುವ ಜನತೆಯನ್ನು ಮಾಲಿಕ ವರ್ಗವು ನಿರ್ದಯವಾಗಿ ಧಾಳಿ ನಡೆಸಿದೆ. ಮುಚ್ಚುವಿಕೆ, ಬೀಗ್ರಮುದ್ರೆ ಹಾಗೂ ಕಾನೂನು ಬಾಹಿರ ಮುಚ್ಚುವಿಕೆಯಿಂದ ಕಾರ್ಮಿಕರ ಸಾವಿರಾರು ಸಂಖ್ಯೆಯಲ್ಲಿ ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ. ಬಹುತೇಕ ಪ್ರಕರಣಗಳಲ್ಲಿ ಅವರಿಗೆ ಕನಿಷ್ಟ ಪರಿಹಾರಗಳೂ ಸಿಗಲಿಲ್ಲ. ಇದರ ವಿರುದ್ಧದ **ಯಾವುದೇ ಸಂಘಟಿತ ಪ್ರತಿರೋಧವನ್ನು ಸದಾ ಮಾಲಿಕರ ಸೇವೆಗೆ ಸಿದ್ಧರಾಗುವ ಸ್ಥಳೀಯ ಪೋಲೀಸರು ಮತ್ತು ಆಡಳಿತದ ಸಹಾಯದಿಂದ ನಿರ್ದಯವಾಗಿ ಬಗ್ಗುಬಡಿಯಲಾಗಿದೆ.** ರಾಜಸ್ತಾನ, ಹರ್ಯಾಣ, ಪಂಜಾಬ್, ಉತ್ತರ ಪ್ರದೇಶ ಹಾಗೂ ಇನ್ನೂ ಅನೇಕ ರಾಜ್ಯಗಳಲ್ಲಿ ಪ್ರತಿಯೊಂದು ಪ್ರತಿಭಟನೆಯ ಸಂದರ್ಭದಲ್ಲೂ ಇದನ್ನು ಕಂಡಿದ್ದೇವೆ. ತಮಿಳುನಾಡಿನ ಮುಷ್ಕರ ನಿರತ



ನೌಕರರನ್ನು ನಡೆಸಿಕೊಳ್ಳುತ್ತಿರುವ ರೀತಿಯನ್ನು ದೇಶದ ಇತಿಹಾಸದಲ್ಲಿ ಇನ್ನೆಲ್ಲೂ ಕಂಡಿಲ್ಲ. ಹೊಸ ನೀತಿಗಳು ಹಾಗೂ ಆಳುವ ರಾಜಕೀಯದ ಈ ಹಠಮಾರಿತನವು ದುಡಿಯುವ ಜನರ ಯಾವುದೇ ಸಂಘಟಿತ ಪ್ರತಿರೋಧವನ್ನು ಮಟ್ಟಹಾಕಲು ಪ್ರಯತ್ನಿಸುತ್ತಿದೆ. ಹಾಗಾಗಿ ಯಾವುದೇ ಕಾರಣವನ್ನು ನೀಡದೇ ಉನ್ನತ ನ್ಯಾಯಾಲಯವು ಜಯಲಲಿತಾ ಸರ್ಕಾರದ ಕ್ರಮವನ್ನು ಸಮರ್ಥಿಸುತ್ತಾ ದೇಶದಲ್ಲಿ ಎಲ್ಲಾ ರೀತಿಯ ಮುಷ್ಕರಗಳನ್ನು ರದ್ದುಗೊಳಿಸಿದೆ. ಅದೇ ಸಮಯದಲ್ಲಿ ಮುಷ್ಕರಕ್ಕೆ ಕಾರಣವಾದ ರಾಜ್ಯ ಸರ್ಕಾರದ ಏಕಪಕ್ಷೀಯ ಕ್ರಮದ ಬಗ್ಗೆ ಉನ್ನತ ನ್ಯಾಯಾಲಯವು ಯಾವ ಚಕಾರವನ್ನು ಎತ್ತಲಿಲ್ಲ. ಆಸಕ್ತಿದಾಯಕ ವಿಚಾರವೆಂದರೆ ಕಾರ್ಮಿಕರ ಮುಷ್ಕರದ ಹಕ್ಕನ್ನು ನಿಷೇಧಿಸಿದ ಉನ್ನತ ನ್ಯಾಯಾಲಯವು ಇದೇ ಸಮಯದಲ್ಲಿ ಡಿಸೆಂಬರ್ 2003 ರಲ್ಲಿ ನೀಡಿದ ತೀರ್ಪಿನಲ್ಲಿ ಮಾಲೀಕರಿಗೆ 'ಕೊಲ್ಲುವ ಹಕ್ಕನ್ನು' ದಯಪಾಲಿಸಿದೆ. ಮೇಲಿನ ತೀರ್ಪಿನಲ್ಲಿ ಕೇರಳ ಮೂಲದ ಕಾರ್ಖಾನೆಯ ಮಾಲಿಕನೊಬ್ಬ ಮುಷ್ಕರ ನಿರತ ಕಾರ್ಮಿಕರಲ್ಲಿ ಇಬ್ಬರನ್ನು ಕಾರ್ಖಾನೆಯ ಗೇಟಿನಲ್ಲಿ ಗುಂಡು ಹಾರಿಸಿ ಕೊಂದ. ಆತ್ಮರಕ್ಷಣೆಗಾಗಿ ಈ ಕೃತ್ಯ ಮಾಡಿದ್ದು ಎಂದು ತೀರ್ಪು ನೀಡಿ ಕೆಳ ನ್ಯಾಯಾಲಯದ ತೀರ್ಪನ್ನು ವಜಾಗೊಳಿಸಿದೆ. ಸಿಐಟಿಯು, ಐಎಲ್‌ಓ ಇತರೆ ಸಂಘಟನೆಗಳು ಜಯಲಲಿತಾ ಸರ್ಕಾರದ ಕ್ರಮಗಳ ಬಗ್ಗೆ ದೂರು ದಾಖಲಿಸಿದಾಗ ವಾಜಪೇಯಿ ಸರ್ಕಾರವು ಜಯಲಲಿತಾರ ಕ್ರಮವನ್ನು ಸಂಪೂರ್ಣವಾಗಿ ಬೆಂಬಲಿಸಿತು. ಕಾರ್ಮಿಕವರ್ಗದ ವಿರುದ್ಧದ ಆಳುವ ವರ್ಗದ ನಿಲುವುಗಳು ಸಂಪೂರ್ಣ ಬಯಲಾದವು.

ಫೆ. 24 ರ ಸಾರ್ವತ್ರಿಕ ಮುಷ್ಕರವನ್ನು ಯಶಸ್ವಿಗೊಳಿಸಲು ಈಗಾಗಲೇ ವ್ಯಾಪಕ ತಯಾರಿಗಳು ನಡೆದಿವೆ. ಕೇರಳ, ಪ.ಬಂಗಾಳ, ಆಂಧ್ರಪ್ರದೇಶ, ಅಸ್ಸಾಂ, ಕರ್ನಾಟಕವನ್ನು ಒಳಗೊಂಡಂತೆ ಜಂಟಿ ಸಮಾವೇಶಗಳು ನಡೆದು ಮುಷ್ಕರಕ್ಕೆ ತಯಾರಿ ನಡೆಸಲಾಗಿದೆ. ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರು, ಬ್ಯಾಂಕ್ ನೌಕರರು, ಅಧಿಕಾರಿಗಳು, ಜೀವವಿಮಾ ನೌಕರರು, ಅಸಂಘಟಿತ ವಲಯದ ಕಾರ್ಮಿಕರು ಉತ್ಸಾಹ ತೋರಿದ್ದಾರೆ. ಆದ್ದರಿಂದ ಮುಷ್ಕರ ದೇಶಾದ್ಯಂತ ಅಮೋಘ ಯಶಸ್ಸು ಕಾಣಲಿದೆ.

ಉಸ್ತುವಾರಿ ಸರ್ಕಾರವಿರುವಾಗ, ದೇಶ ಲೋಕಸಭೆ ಚುನಾವಣೆಯ ಬಾಗಿಲಲ್ಲಿರುವಾಗ ಮುಷ್ಕರಕ್ಕಿಳಿಯಲಾಗುತ್ತಿದೆ ಎಂದು ಸರ್ಕಾರ ಹಾಗೂ ಮುಷ್ಕರ ವಿರೋಧಿ ಶಕ್ತಿಗಳು ಗೊಂದಲ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಆದರೆ ವಿಷಯ ಸ್ಪಟಿಕದಷ್ಟೇ ಸ್ಪಷ್ಟ. ಮುಷ್ಕರ ನಡೆಸುತ್ತಿರುವುದು ಅತ್ಯಂತ ಮೂಲಭೂತ, ಪ್ರಜಾಸತ್ತಾತ್ಮಕ ಹಕ್ಕಾದ ಕಾರ್ಮಿಕರ ಮುಷ್ಕರ ಹಾಗೂ ಸಂಘಟನೆಯ ಹಕ್ಕಿನ ಕುರಿತಾದದ್ದು. ಫೆ. 24 ರ ಮುಷ್ಕರದಲ್ಲಿ ಎನ್‌ಡಿಎ ಸರ್ಕಾರದ ದುಡಿಯುವ ವರ್ಗದ ನೀತಿಗಳ ಖಂಡನೆ ಮತ್ತು ಬಿಚ್ಚಿಡುವ ಕೆಲಸ ನಡೆಯಿತು. ಮತ್ತು ಅಧಿಕಾರಕ್ಕೆ ಬರಬೇಕು ಎನ್ನುವ ಬೇರೆ ಶಕ್ತಿಗಳಿಗೂ ಎಚ್ಚರಿಕೆ ನೀಡುವುದು ಉದ್ದೇಶವಾಗಿದೆ. ಹಾಗಾಗಿ ಮುಂಬರುವ ಚುನಾವಣೆ 24 ರ ಮುಷ್ಕರದ ಮಹತ್ವವನ್ನು ಮತ್ತಷ್ಟು ಹೆಚ್ಚಿಸಿದೆ.


ಬೆಂಗಳೂರಿನಲ್ಲಿ ಆಟೋ ಮುಷ್ಕರ

...ಕೆಯ ಗಂಟೆಯಾಯಿತು

...ಶಾದ್ಯಂತ ಭಾರಿ ಯಶಸ್ವಿಯಾಗಿದೆ. ...ಲೆಕ್ಕಿಸದೇ ದುಡಿವ ಜನಕೋಟಿ ಈ ...ಲಿಕಾರರ, ವಿದ್ಯಾರ್ಥಿ-ಯುವಜನ, ...ಮ ಮುಷ್ಕರವೆಂಬುದು ಅನೇಕಕಡೆ ...ು ಸರ್ಕಾರದ ದುಡಿವ ವರ್ಗದ ...ಎಚ್ಚರಿಕೆ. ಸ್ವಾತಂತ್ರ್ಯ ನಂತರದಲ್ಲಿ ...ಗೆ ಮೊದಲ ನೋಟವನ್ನು ನೀಡಿದ್ದಾರೆ ...ರೆದಿಡುವ ವರದಿಗಳೂ ಇಲ್ಲಿವೆ.

ಸರ್ಕಾರಿ ಕಛೇರಿಗಳು, ಸಾರಿಗೆ, ಬ್ಯಾಂಕ್ ಮತ್ತು ವಿಮಾ ಕಂಪನಿಗಳ ಕಛೇರಿಗಳು ಮುಚ್ಚಲ್ಪಟ್ಟಿದ್ದವು. ಇದು ಮುಷ್ಕರದೊಂದಿಗೆ ಬಂದ್ ಆಗಿ ಪರಿವರ್ತನೆಯಾಗಿದೆ. ರಾಯಚೂರು ನಗರವು ಸಹ ಬಂದ್ ಆಗಿತ್ತು. ಹಟ್ಟಿ ಚಿನ್ನದ ಗಣಿ ಸಂಪೂರ್ಣವಾಗಿ ಮುಚ್ಚಿ ಆ ಪ್ರದೇಶ ಬಂದ್ ಆಗಿತ್ತು. ಮುಷ್ಕರವು ಬಳ್ಳಾರಿಯಲ್ಲಿ 500ಕ್ಕೂ ಹೆಚ್ಚು ನೌಕರರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಹೊಸಪೇಟೆಯಲ್ಲಿ 800ಕ್ಕೂ ಹೆಚ್ಚು ನೌಕರರು, ಬ್ಯಾಂಕ್, ವಿಮಾ, ಅಂಗನವಾಡಿ, ಬೆಳಗಾಂ ನೌಕರರು ಮೆರವಣಿಗೆಯಲ್ಲಿ ಭಾಗವಹಿಸುವುದರೊಂದಿಗೆ ಮುಷ್ಕರವು ಸಂಪೂರ್ಣವಾಗಿತ್ತು.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬ್ಯಾಂಕ್ ಮತ್ತು ವಿಮಾ ನೌಕರರು ಹಾಗೂ ತೋಟಗಾರಿಕೆ ನೌಕರರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಕೋಲಾರ ಜಿಲ್ಲೆಯ ಕೆಜಿಎಫ್, ಕೋಲಾರ, ಶ್ರೀನಿವಾಸಪುರ, ಬಾಗೇಪಲ್ಲಿ, ಗುಡಿಬಂಡೆ, ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ಪ್ರತಿಭಟನೆಯಾಗಿದೆ.

ತುಮಕೂರು ಜಿಲ್ಲೆಯಲ್ಲಿ 1500ಕ್ಕೂ ಹೆಚ್ಚು ನೌಕರರು ಬ್ಯಾಂಕ್, ವಿಮಾ ಮತ್ತು ಇತರ ಸರ್ಕಾರಿ


ಬೆಂಗಳೂರು

ಫೆಬ್ರವರಿ 24, ಮುಷ್ಕರದ ಹಕ್ಕಿಗಾಗಿ ರಾಜ್ಯದಲ್ಲಿ ಯಶಸ್ವಿ ಮುಷ್ಕರ

ಬೆಂಗಳೂರಿನಲ್ಲಿ ಮುಷ್ಕರದ ಅಲೆ

ಬೆಂಗಳೂರು ನಗರದಲ್ಲಿ 5000ಕ್ಕೂ ಮೇಲ್ಪಟ್ಟು ನೌಕರರು ಬ್ಯಾಂಕ್, ವಿಮಾ, ರಾಜ್ಯ ಮತ್ತು ಕೇಂದ್ರ ನೌಕರರು, ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು, ಅಸಂಘಟಿತ ಕ್ಷೇತ್ರದ ನೌಕರರು ಮೈಸೂರು ಬ್ಯಾಂಕ್ ಸರ್ಕಲ್‌ನಿಂದ ಸೆಂಟ್ರಲ್ ಜೈಲ್ ಆವರಣದವರೆಗೂ ಮೆರವಣಿಗೆ ನಡೆಸಿ ಬಹಿರಂಗ ಸಭೆ ನಡೆಸಿದರು. ಸಭೆಯನ್ನು ಉದ್ದೇಶಿಸಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಮಾತನಾಡಿದರು.

ಬೆಂಗಳೂರಿನಲ್ಲಿ ಸಾರ್ವಜನಿಕ ಕ್ಷೇತ್ರದ ಎಲ್ಲಾ ಕಾರ್ಮಿಕ ಸಂಘಟನೆಗಳು ಮುಷ್ಕರದಲ್ಲಿ ಭಾಗಿಯಾಗಿದ್ದವು. ಬಿಇಎಲ್ ಕಾರ್ಖಾನೆಯಲ್ಲಿ ಮುಷ್ಕರವು ಅಧಿಕಾರಿಗನ್ನೊಳಗೊಂಡಂತೆ ಸಂಪೂರ್ಣವಾಗಿತ್ತು. ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಬಹುತೇಕ ಎಲ್ಲಾ ಕೈಗಾರಿಕೆಗಳು ಮುಚ್ಚಲ್ಪಟ್ಟಿದ್ದವು. ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ ಹಾಗೂ ಕುಂಬಳಗೂಡು ಕೈಗಾರಿಕಾ ಪ್ರದೇಶ, ಕೆ.ಆರ್.ಪುರಂ ಕೈಗಾರಿಕಾ ಪ್ರದೇಶದಲ್ಲಿ ಎಲ್ಲಾ ಕಾರ್ಖಾನೆಗಳೂ ಮುಚ್ಚಲ್ಪಟ್ಟು ಮುಷ್ಕರದಲ್ಲಿ ಭಾಗಿಯಾಗಿದ್ದವು. ಈ ಪ್ರದೇಶದಲ್ಲಿ ನೌಕರರು ಮೆರವಣಿಗೆ ನಡೆಸಿ ಪ್ರತಿಭಟನೆಗಳನ್ನು ವ್ಯಕ್ತಪಡಿಸಿದ್ದರು.

ಹೆಚ್‌ಎಎಲ್, ಬಿಇಎಂಎಲ್, ರೈಲ್ ಕೋಚ್ ಕಾರ್ಖಾನೆಯಲ್ಲಿ ಮುಷ್ಕರ ಸಂಪೂರ್ಣವಾಗಿತ್ತು. ಐಟಿಐ ಕಾರ್ಖಾನೆಯನ್ನು ಮುಚ್ಚಿದ್ದಾರೆ. ಎಲ್ಲಾ ಕೈಗಾರಿಕಾ ನಗರಗಳು ಬೆಂಗಳೂರಿನ ಸುತ್ತ ಮುತ್ತ ಸಣ್ಣ ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳು ಮುಚ್ಚಲ್ಪಟ್ಟಿದ್ದವು. ಹಣಕಾಸು ವಲಯದಲ್ಲಿ ಮುಷ್ಕರವು ಸಂಪೂರ್ಣವಾಗಿತ್ತು. ಆಟೋ ರಿಕ್ಷಾ ಚಾಲಕರ ಮುಷ್ಕರವು ಬೆಂಗಳೂರಿನಲ್ಲಿ ಸಂಪೂರ್ಣವಾಗಿತ್ತು. ಬೆಂಗಳೂರು ನಗರದಲ್ಲಿ ಮುಷ್ಕರದಿಂದಾಗಿ ವಾಹನ ದಟ್ಟಣೆ ಶೇ.50 ರಷ್ಟು ಕಡಿಮೆಗೊಂಡಿತ್ತು. ಕಾಂಗ್ರೆಸ್ ಸರ್ಕಾರವು ರಾಜ್ಯ ಸರ್ಕಾರಿ ನೌಕರರನ್ನು ಮುಷ್ಕರದಲ್ಲಿ ಪಾಲ್ಗೊಳ್ಳದಂತೆ ಬೆದರಿಕೆ ಒಡ್ಡಿತ್ತು. ಕರ್ನಾಟಕ ರಾಜ್ಯ ಸರ್ಕಾರದ ಮುಷ್ಕರ ವಿರೋಧಿ ಧೋರಣೆಯಿಂದಾಗಿ ಸಿಪ್ಪೆಗೌಡ ನೇತೃತ್ವದ ನೌಕರರ ಸಂಘಟನೆಯ ಸುಮಾರು ನೌಕರರು ಕೆಲಸಕ್ಕೆ ಹಾಜರಾಗದೆ ಹೊರ ಉಳಿದಿದ್ದರು. ಮುಷ್ಕರವು ಕೇಂದ್ರ ಸರ್ಕಾರಿ ಕಛೇರಿಗಳಾದ ಅಕೌಂಟೆಂಟ್ ಜನರಲ್ ಆಫೀಸ್, ವರಮಾನ ತೆರಿಗೆ ಇಲಾಖೆ, ಅಂಚೆ ಮತ್ತು ತಂತಿ ಇಲಾಖೆಗಳಲ್ಲೂ ಬಹುತೇಕ ಯಶಸ್ವಿಯಾಯಿತು.

ದೊಡ್ಡಬಳ್ಳಾಪುರದಲ್ಲಿ ನೂರಾರು ಅಂಗನವಾಡಿ ಕಾರ್ಯಕರ್ತೆಯರು, ರೈತರು, ರೈತ ಕಾರ್ಮಿಕರು, ಮೆರವಣಿಗೆ ಮಾಡಿ ರಸ್ತೆ ನಡೆಸಿದರು. ಬಿಇಎಂಎಲ್ ಕೆಜಿಎಫ್ ಘಟಕದಲ್ಲಿ ಎಲ್ಲಾ ಕಾರ್ಮಿಕರು ಕೆಲಸಕ್ಕೆ ಹಾಜರಾಗದಿದ್ದರೂ ಹಾಗೂ ಆಡಳಿತ ವರ್ಗವು ಅವರಿಗೆ 8 ದಿನಗಳ ವೇತನವನ್ನು ಕಡಿತಗೊಳಿಸುವುದಾಗಿ ಹೆದರಿಸಿದ್ದರೂ, ನೌಕರರು ಮುಷ್ಕರದಲ್ಲಿ ಭಾಗಿಯಾಗಿದ್ದರು.

ಗುಲ್ಬರ್ಗಾ ಬಂದ್

ಗುಲ್ಬರ್ಗಾದಲ್ಲಿ ಎಲ್ಲಾ ಅಂಗಡಿ ಮುಗ್ಗಟ್ಟುಗಳು, ನಗರದಲ್ಲಿ ಸಾರ್ವಜನಿಕ ಕ್ಷೇತ್ರದ ಹಿಂದೂಸ್ತಾನ ಲೇಟೆಕ್ಸ್ ಕಾರ್ಖಾನೆ, ಗ್ರಾಮಪಂಚಾಯತ್, ಹಮಾಲಿ, ಅಂಗನವಾಡಿ ನೌಕರನ್ನೊಳಗೊಂಡಂತೆ ದೊಡ್ಡ ಮೆರವಣಿಗೆ ಆಯೋಜಿಸಲಾಗಿತ್ತು. ಗ್ರಾಮ ಪಂಚಾಯತ್, ಹಮಾಲಿ ನೌಕರರನ್ನು ಒಳಗೊಂಡಂತೆ ದೊಡ್ಡ ಮೆರವಣಿಗೆ ಆಯೋಜಿಸಲಾಗಿತ್ತು. ಉಡುಪಿ ಟೈಲ್ ಮತ್ತು ಬೀಡಿ ನೌಕರರು ಮುಷ್ಕರದಲ್ಲಿದ್ದರು. ಮಂಗಳೂರಿನ ಬೀಡಿ ನೌಕರರು ಮುಷ್ಕರದೊಂದಿಗೆ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಉಡುಪಿ ನಗರದಲ್ಲಿ 600ಕ್ಕೂ ಹೆಚ್ಚು ನೌಕರರು, ಬ್ಯಾಂಕ್ ಮತ್ತು ವಿಮಾನೌಕರರು ಮುಷ್ಕರದಲ್ಲಿ ಪಾಲ್ಗೊಂಡು ಬಂದ್ ನಡೆಸಿದ್ದರು. ಸರ್ಕಾರಿ ನೌಕರರು ಈ ಪ್ರದೇಶಗಳಲ್ಲಿ ಕಪ್ಪು ಬ್ಯಾಡ್ಜ್‌ಗಳನ್ನು ಧರಿಸಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು.

ಮೈಸೂರು ವಿಕ್ರಾಂತ್ ಟೈರ್ಸ್ ಕಾರ್ಖಾನೆಯಲ್ಲಿ ಮುಷ್ಕರವು ಯಶಸ್ವಿಯಾಗಿತ್ತು. ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ಬಂದ್ ಆಚರಿಸಲಾಯಿತು. ಸುಮಾರು 2000ಕ್ಕೂ ಹೆಚ್ಚು ನೌಕರರು


ಬೆಂಗಳೂರು

ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಉತ್ತರ ಕನ್ನಡ - ಕಾರವಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ನೌಕರರು ಮೆರವಣಿಗೆಯಲ್ಲಿ ಭಾಗವಹಿಸಿದರು. ಗ್ರಾಮ ಪಂಚಾಯತ್ ನೌಕರರು, ಅಂಗನವಾಡಿ, ಬ್ಯಾಂಕ್ ಮತ್ತು ವಿಮಾ ನೌಕರರು, ಟೈಲ್ಸ್ ಕಾರ್ಖಾನೆಯ ನೌಕರರು, ಮುಷ್ಕರದಲ್ಲಿ ಭಾಗವಹಿಸಿದರು. ಸರ್ಕಾರಿ ನೌಕರರು ಕಪ್ಪು ಬ್ಯಾಡ್ಜ್ ಧರಿಸಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಶಿರಸಿ ಪಟ್ಟಣದಲ್ಲಿ ಮುಷ್ಕರವು ಸಂಪೂರ್ಣವಾಗಿತ್ತು. ಎಲ್‌ಐಸಿ ಮತ್ತು ಬ್ಯಾಂಕ್ ನೌಕರರು ಮುಷ್ಕರದಲ್ಲಿ ಭಾಗವಹಿಸಿದ್ದರು.

ಹಾಸನ ಜಿಲ್ಲೆಯಲ್ಲಿ 2000 ನೌಕರರು ರ್‍ಯಾಲಿಯಲ್ಲಿ ಭಾಗವಹಿಸಿದ್ದೂ ಅಲ್ಲದೆ ಜಿಲ್ಲಾಧಿಕಾರಿಗಳ ಕಛೇರಿಯ ಮುಂದೆ ಮತಪ್ರದರ್ಶನ ನಡೆಸಿದ್ದರು. ತೋಟ ಕಾರ್ಮಿಕರು, ಗ್ರಾಮ ಪಂಚಾಯತ್ ನೌಕರರು, ಔಷಧ ಮಾರಾಟ ಪ್ರತಿನಿಧಿಗಳು, ವಿಮಾ ಮತ್ತು ಬ್ಯಾಂಕ್ ನೌಕರರು, ಸರ್ಕಾರಿ ನೌಕರರು, ಸರ್ಕಾರಿ ನೌಕರರು ಮುಷ್ಕರದಲ್ಲಿ ಸಂಪೂರ್ಣವಾಗಿ ಭಾಗವಹಿಸಿದ್ದರು. ಸಕಲೇಶಪುರದಲ್ಲಿ 500ಕ್ಕೂ ಹೆಚ್ಚು ತೋಟಗಾರಿಕೆ ನೌಕರರು, ಬ್ಯಾಂಕ್, ವಿಮಾ ಮತ್ತು ರಾಜ್ಯಸರ್ಕಾರಿ

ಸಂಸ್ಥೆಗಳ ನೌಕರರು, ಅಂಗನವಾಡಿ ನೌಕರರು ಹಾಗೂ ಪಂಚಾಯತ್ ನೌಕರರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಬೀದರ್ ಜಿಲ್ಲೆಯಲ್ಲಿ 2000ಕ್ಕೂ ಹೆಚ್ಚು ನೌಕರರು ಬ್ಯಾಂಕ್ ಮತ್ತು ವಿಮಾ, ಹಾಗೂ ಅಂಗನವಾಡಿ, ಪಂಚಾಯತ್ ನೌಕರರು, ಅಂಚೆ ಮತ್ತು ತಂತಿ ಇಲಾಖೆ, ರಾಜ್ಯ-ಕೇಂದ್ರ ಸರ್ಕಾರಿ ನೌಕರರು ಮುಷ್ಕರದಲ್ಲಿ ಭಾಗವಹಿಸಿ ಮೆರವಣಿಗೆ ನಡೆಸಿದರು.

ಉತ್ತರಕನ್ನಡದ ಇತರೆ ಪಟ್ಟಣಗಳಲ್ಲಿ ಮುಷ್ಕರವು ಯಶಸ್ವಿಯಾಗಿದೆ ಎಂಬ ವರದಿಗಳು ಬಂದಿವೆ. ಬಹುತೇಕ ಎಲ್ಲಾ ಕೈಗಾರಿಕೆಗಳು ಹಾಗೂ ಹಣಕಾಸು ಸಂಸ್ಥೆಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟಿದ್ದವು.

ಮಂಗಳೂರು ಮುಷ್ಕರ ಯಶಸ್ವಿಯಾಗಿ ಸಾವಿರಾರು ಜನರ ಒಂದೇ ರ್‍ಯಾಲಿ ನಡೆಯಿತು. ಬೆಳ್ತಂಗಡಿಯಲ್ಲಿ ನೂರಾರು ಜನರು ರಸ್ತೆ ತಡೆ ನಡೆಸಿದರು.

ಒಟ್ಟಾರೆ ಈ ಮುಷ್ಕರ ನಿರೀಕ್ಷೆಗೆ ಮೀರಿ ಯಶಸ್ಸು ಕಂಡಿದೆ.

ಬೆಂಗಳೂರು ನಗರದಲ್ಲಿ 7ಸಾವಿರಕ್ಕೂ ಹೆಚ್ಚು ಆಟೋ ಚಾಲಕರು ಮುಷ್ಕರ ನಡೆಸಿದರು.

ಉಡುಪಿ ನಗರದಲ್ಲಿ ಯಶಸ್ವಿ ಮುಷ್ಕರ ಮತ್ತು ಮೆರವಣಿಗೆ

ಮುಷ್ಕರದ ಭಾಗವಾಗಿ ನೂರಾರು ಸಂಖ್ಯೆಯಲ್ಲಿ ಕಾರ್ಮಿಕರು, ನೌಕರರು ಉಡುಪಿ ಜಿಲ್ಲಾ ಕಾರ್ಮಿಕ ಸಂಘಗಳ ಜಂಟಿ ಸಮಿತಿ ನೇತೃತ್ವದಲ್ಲಿ ಉಡುಪಿಯ ಅಜ್ಜರ ಕಾಡಿನ ಜೀವವಿಮಾ ನಿಗಮದ ಕಛೇರಿಯಿಂದ ಮೆರವಣಿಗೆ ಹೊರಟು ಕೆ.ಎಂ.ರಸ್ತೆಯಲ್ಲಿ ಸಾಗಿ, ಕಾರ್ಪೊರೇಷನ್ ಬ್ಯಾಂಕ್ ಕಚೇರಿ ಆವರಣದಲ್ಲಿ ಸಭೆ ನಡೆಸಿ ಕಾರ್ಯಕ್ರಮ ಸಮಾಪನ ಗೊಳಿಸಿದರು.

ಬೃಹತ್ ಮೆರವಣಿಗೆಯ ಆರಂಭದಲ್ಲಿ ಸಂಚಾಲಕ ಪಿ.ವಿಶ್ವನಾಥ ರೈ ಮಾತಾಡಿ, ಕಳೆದ ಶತಮಾನದಿಂದೀಚೆಗೆ ದೇಶದ ಕಾರ್ಮಿಕ ವರ್ಗ ನಿರಂತರ ಹೋರಾಟ ನಡೆಸಿ, ಬಲಿದಾನ ಮಾಡಿ, ಮುಷ್ಕರದ ಹಕ್ಕನ್ನು ಪಡೆದಿರುತ್ತಾರೆ. ಇಂದು ಜಾಗತೀಕರಣದ ಹಿನ್ನೆಲೆಯಲ್ಲಿ ಆಳುವವರ್ಗ ನ್ಯಾಯಾಂಗ, ಕಾರ್ಯಾಂಗ ಶಾಸಕಾಂಗಳನ್ನು ಉಪಯೋಗಿಸಿ, ನಿರಂತರ ಹೋರಾಟ ಬಲಿದಾನಗಳಿಂದ ಪಡೆದಿರುವ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸುತ್ತಾ ಮುಷ್ಕರದ ಹಕ್ಕನ್ನು ಕಾರ್ಮಿಕರಿಂದ ಕಸಿಯುವತ್ತ ಸಾಗುತ್ತಿದೆ. ಮುಷ್ಕರದ ಹಕ್ಕನ್ನು ನಮ್ಮ ಹಿರಿಯರು ಗಳಿಸಿಕೊಟ್ಟಿದ್ದು, ಅದನ್ನು ಉಳಿಸುವಲ್ಲಿ ನಾವು ಎಲ್ಲ ರೀತಿಯ ಬಲಿದಾನಕ್ಕೂ ತಯಾರಾಗಬೇಕು ಎಂದು ಕರೆ ನೀಡಿದರು.

ಮೆರವಣಿಗೆಯಲ್ಲಿ ನೌಕರ, ಕಾರ್ಮಿಕರು ಜೀವ ವಿಮಾ, ಕೆನರಾ ಬ್ಯಾಂಕ್, ಸಿಂಡಿಕೇಟ್ ಬ್ಯಾಂಕ್, ಪ್ರಧಾನ ಅಂಚೆ ಕಚೇರಿ, ದೂರವಾಣಿ, ಸ್ಟೇಟ್ ಬ್ಯಾಂಕ್, ಕಾರ್ಪೋರೇಷನ್ ಬ್ಯಾಂಕ್ ಕಚೇರಿಗಳ ಎದುರು ಘೋಷಣೆಗಳೊಂದಿಗೆ ಮತಪ್ರದರ್ಶನ ನಡೆಸಿದರು.

ಸಮಾಪನ ಕಾರ್ಯಕ್ರಮದಲ್ಲಿ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಎಸ್.ಎ. ಹಿರೇಮಠ, ಸ್ಟೇಟ್ ಬ್ಯಾಂಕ್ ನೌಕರರ ಮುಂದಾಳು ವೈ.ಎನ್.ರಾವ್, ಎಐಟಿಯುಸಿ ಮೋನಪ್ಪ ಸಾಲಿಯಾನ್, ವಿಮಾ ನೌಕರರ ಮುಂದಾಳು

ಪುಟ 8 ಕ್ಕೆ

ಮುಷ್ಕರದ ಹಕ್ಕಿಗಾಗಿನ ಮುಷ್ಕರ ಯಶಸ್ವಿ - ಅಭಿನಂದನೆ

ಮುಷ್ಕರದ ಹಕ್ಕಿಗಾಗಿ ನಡೆದ ಅಖಿಲಭಾರತ ಸಾರ್ವತ್ರಿಕ ಮುಷ್ಕರವನ್ನು ಅಭೂತಪೂರ್ವವಾಗಿ ಯಶಸ್ವಿಗೊಳಿಸಿದ ದುಡಿಯುವ ವರ್ಗಕ್ಕೆ ಹಾಗೂ ಸಂಘಟನೆಗಳನ್ನು, ವಿವಿಧ ವಿಭಾಗಗಳ ಜನತೆಯನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯು ಅಭಿನಂದಿಸಿದೆ.

ವಿಶೇಷವಾಗಿ - ಈ ಮುಷ್ಕರದಲ್ಲಿ ಪಾಲ್ಗೊಂಡರೆ ಶಿಸ್ತುಕ್ರಮ ಜರುಗಿಸುವುದಾಗಿ ಕೃಷ್ಣರವರ ಕಾಂಗ್ರೆಸ್ ಸರ್ಕಾರ ಸರ್ಕಾರಿ ನೌಕರರ ಮೇಲೆ ಬೆದರಿಕೆ ಒಡ್ಡಿದ್ದರೂ ಲೆಕ್ಕಿಸದೇ ಸಾರ್ವತ್ರಿಕ ಮುಷ್ಕರದಲ್ಲಿ ಭಾಗಿಯಾಗಿದ್ದಾರೆ. ಹಾಗೆಯೇ ಆಟೋ, ಬೀಡಿ, ಬ್ಯಾಂಕ್, ವಿಮೆ, ಕೇಂದ್ರ ಸರ್ಕಾರಿ ನೌಕರರು, ಸಾರ್ವಜನಿಕ ವಲಯದ ಕಾರ್ಮಿಕರು, ವಿವಿಧ ಕಾರ್ಮಿಕ ಸಂಘಟನೆಗಳು, ಅಂಗನವಾಡಿ, ಪಂಚಾಯತ್ ನೌಕರರು ಬಹಳ ದೊಡ್ಡ ರೀತಿಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದ್ದಾರೆ. ರೈತ-ಕೂಲಿಕಾರ, ವಿದ್ಯಾರ್ಥಿ-ಯುವಜನ, ಮಹಿಳಾ ಸಂಘಟನೆಗಳು ರಸ್ತೆ ತಡೆ, ಮೆರವಣಿಗೆ ಮೂಲಕ ಸೌಹಾರ್ದ ಬೆಂಬಲಕ್ಕೆ ನಿಂತದ್ದು ಅತ್ಯಂತ ಶ್ಲಾಘನೀಯ ವಿಷಯವಾಗಿದೆ.

ಬದ್ಧತೆ ಸಾರಬೇಕು

ದೇಶದಾದ್ಯಂತ ನಡೆದ ಈ ಮುಷ್ಕರದ ಪ್ರತಿಕ್ರಿಯೆಯನ್ನು ಪರಿಗಣಿಸಿ ಕೇಂದ್ರ ಸರ್ಕಾರವು ಮುಷ್ಕರದ ಹಕ್ಕನ್ನು ಕಾನೂನುಬದ್ಧಗೊಳಿಸುವಂತಹ ಕ್ರಮಗಳನ್ನು ಕೈಗೊಳ್ಳಬೇಕು. ಮಾತ್ರವಲ್ಲ, ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಇದನ್ನು ಪ್ರಮುಖ ಅಂಶವಾಗಿ ಒಳಗೊಂಡು ಬದ್ಧತೆ ಸಾರಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

24ರ ಮುಷ್ಕರ, ಮುಷ್ಕರದ ಹಕ್ಕಿಗೋಸ್ಕರ....

ಪುಟ 7 ರಿಂದ

ಡೆರಿಕ್ ರೆಬೆಲ್ಲೊ, ದೂರವಾಣಿ (ಬಿ.ಎಸ್.ಎನ್.ಎಲ್) ನೌಕರರ ಮುಂದಾಳು ಯು.ದೇಜಪ್ಪ, ಅಂಚೆ ನೌಕರರ ಮುಂದಾಳು ಲಕ್ಷ್ಮಣ ಮೆರವಣಿಗೆಯಲ್ಲಿ ಭಾಗವಹಿಸಿದ ಕಾರ್ಮಿಕ ನೌಕರರನ್ನು ಉದ್ದೇಶಿಸಿ ಮಾತನಾಡಿದರು.

ಮೆರವಣಿಗೆಯ ನೇತೃತ್ವವನ್ನು ಸಿಐಟಿಯು ನ ಸಾಧು ಅಮೀನ್, ದೋಗು ಸುವರ್ಣ, ರಮೇಶ್ ಮೆಂಡನ್, ಎ.ಎಸ್.ಆಚಾರ್ಯ, ಬ್ಯಾಂಕ್ ನೌಕರರ ಸಂಘಗಳ ನಾರಾಯಣ ಭಟ್, ಪುಟ್ಟರಾಜ, ಬ್ಯಾಂಕ್‌ಅಧಿಕಾರಿಗಳ ಸಂಘದ ಶಶಿಧರನ್, ಕೆ.ಆರ್.ಶೆಣೈ, ದೂರವಾಣಿ ನೌಕರರ ಸಂಘದ ದಾಮೋದರ ಪೈ, ಬಿ.ಶಶಿಧರ, ತಂತಿ ವಿಭಾಗದ ನೌಕರರ ಸಂಘದ ಶೇಖರ ನಾಯ್ಕ, ರಾಮಚಂದ್ರ ಐತಾಳ, ಅಂಚೆ ನೌಕರರ ಸಂಘದ ಲಕ್ಷ್ಮಣನ್, ವಿಮಾ ನೌಕರರ ಸಂಘದ ಪ್ರಭಾಕರ ಕುಂದರ್ ಮೊದಲಾದವರು ವಹಿಸಿದ್ದರು.

ತುಮಕೂರು: ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರ ಕಾರ್ಮಿಕ ಸಂಘಟನೆಗಳು, ಬ್ಯಾಂಕ್-ವಿಮಾ ನೌಕರರು ಮತ್ತಿತರ ಸಂಘ-ಸಂಸ್ಥೆಗಳು ಮುಷ್ಕರದಲ್ಲಿ ಪಾಲ್ಗೊಂಡಿವು.

ನಗರದ ಹಾಗೂ ಜಿಲ್ಲೆಯ ಬಹುತೇಕ ಬ್ಯಾಂಕುಗಳು ಹಾಗೂ ವಿಮಾ ಸಂಸ್ಥೆಯ ನೌಕರರು ಮುಷ್ಕರದಲ್ಲಿ ಪಾಲ್ಗೊಂಡರು. ಇದರಿಂದ ಬ್ಯಾಂಕುಗಳು ಬಾಗಿಲು ತೆರೆದುಕೊಂಡಿದ್ದರೂ ಯಾವುದೇ ವಹಿವಾಟು ನಡೆಯದೆ ಬಿಕೋ ಎನ್ನುತ್ತಿದ್ದವು.

ಸರ್ಕಾರಿ ನೌಕರರ ವಿರುದ್ಧ ತೀವ್ರಕ್ರಮದ ಎಚ್ಚರಿಕೆಯನ್ನು ಸರ್ಕಾರ ಹೇರಿದ್ದರಿಂದ ಪ್ರತಿಭಟನಾ ಸಂಕೇತವಾಗಿ 'ಕಪ್ಪು ಬ್ಯಾಡ್ಜ್' ಧರಿಸಿ ಸರ್ಕಾರಿ ನೌಕರರು ಕಛೇರಿಗೆ ಹಾಜರಾಗಿದ್ದರು.

ಮೆರವಣಿ: ಸಿಐಟಿಯು ಮತ್ತಿತರ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ನಗರಸಭೆ ವೃತ್ತದಿಂದ ಅಶೋಕ ರಸ್ತೆ, ಎಸ್‌ಬಿಎಂ ರಸ್ತೆ, ಗುಂಚಿ ಚೌಕ, ಎಂ.ಜಿ.ರಸ್ತೆ, ಬಿ.ಹೆಚ್.ರಸ್ತೆಗಳಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಪ್ರತಿಕೃತಿ ದಹನ: ಮೆರವಣಿಗೆ ಮುಂಚೆ, ನಗರಸಭಾ ವೃತ್ತದಲ್ಲಿ ಬಂದು ಸೇರಿದ ಕಾರ್ಮಿಕರು - ನೌಕರರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರತಿಕೃತಿಯನ್ನು ದಹಿಸಿ, ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರು.



ಪ್ರತಿಭಟನೆಯಲ್ಲಿ ಗಣನೀಯ ಪ್ರಮಾಣದ ಮಹಿಳೆಯರು ಸೇರಿದಂತೆ ಸುಮಾರು ಎರಡು ಸಾವಿರ ಕಾರ್ಮಿಕರು-ನೌಕರರು ಭಾಗವಹಿಸಿದ್ದರು. ಪ್ರತಿಭಟನೆ ಹಾಗೂ ಮೆರವಣಿಗೆ ಸಂದರ್ಭದಲ್ಲಿ ರಸ್ತೆಯ ಎರಡೂ ಬದಿಯ ಅಂಗಡಿಗಳು ಬಾಗಿಲುಗಳನ್ನು ಮುಚ್ಚಿ ವಹಿವಾಟು ಸ್ಥಗಿತಗೊಳಿಸಿದರು.

ಬಹುತೇಕ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರಿಂದ ಕೈಗಾರಿಕಾ ಪ್ರದೇಶಗಳು ಭಣಗುಡುತ್ತಿದ್ದವು.

ಸಿಬ್ಬಂದಿಯ ಕೊರತೆಯಿಂದ ಅಂಚೆ ಕಚೇರಿಗಳು ಬಾಗಿಲು ತೆರೆದಿದ್ದರೂ ಕಾರ್ಯ ನಿರ್ವಹಿಸುವಲ್ಲಿ ವಿಫಲವಾದವು.

ಶಾಲೆಗಳಿಗೆ ರಜೆ

ಮುಷ್ಕರದ ಹಿನ್ನೆಲೆಯಲ್ಲಿ ನಗರದ ಕೆಲವು ಶಿಕ್ಷಣ ಸಂಸ್ಥೆಗಳು ಶಾಲೆಗಳಿಗೆ ರಜೆ ಘೋಷಿಸಿದ್ದವು.

ಮುಷ್ಕರದ ಹಕ್ಕಿನ ಉಳಿವಿಗಾಗಿ ನಡೆದ ಪ್ರತಿಭಟನಾ ಸಭೆಯಲ್ಲಿ ಸಿಐಟಿಯು ರಾಜ್ಯಕಾರ್ಯದರ್ಶಿ ಸೈಯದ್ ಮುಜೀಬ್, ಎಐಟಿಯುಸಿ ರಾಜ್ಯ ಉಪಾಧ್ಯಕ್ಷ ಎಸ್.ಶಿವಣ್ಣ ಪ್ರತಿಭಟನಾಕಾರನ್ನುದ್ದೇಶಿಸಿ ಮಾತನಾಡಿದರು.

ಎಲ್‌ಐಸಿ ಮುಖಂಡ ಗಂಗಾದರ್, ಆರ್‌ಎಂಎಸ್ ಮುಖಂಡ ಶ್ರೀರಂಗಪ್ಪ, ಬ್ಯಾಂಕ್ ನೌಕರರ ಸಂಘದ ಗಂಗಾಧರ್, ಗಂಗಯ್ಯ, ಪೋಸ್ಟಲ್ ಎಂಪ್ಲಾಯಿಸ್ ಯೂನಿಯನ್‌ನ ಬೆಟ್ಟಯ್ಯ, ಎಐಟಿಯುಸಿಯ ವಿರೂಪಾಕ್ಷಚಾರ್, ಕಂಬೇಗೌಡರು, ಅರುಣ್ ಕುಮಾರ್, ಹೆಂಜಾರಪ್ಪ, ಗೌಡರಂಗಪ್ಪ, ಸಿಐಟಿಯು ನ ನಾಗರಾಜ್, ವೆಂಕಟೇಶ್, ಶಣ್ಮುಖಪ್ಪ, ನಟರಾಜ್, ಅಂಗನವಾಡಿ ನೌಕರರ ಸಂಘದ ಅಲ್ಲಬಕಾಷ್, ಎಲ್‌ಐಸಿ ಗಂಗಾಧರ್, ಆನಂದಮೂರ್ತಿ, ನಾಗಭೂಷಣ್, ಲಕ್ಷ್ಮಿನಾರಾಯಣ, ಪದ್ಮಾವತಿ, ಡಿವೈಎಫ್‌ಐನ ಎನ್.ಕೆ.ಸುಬ್ರಹ್ಮಣ್ಯ, ಸುಧೀಂದ್ರ, ರಾಜು, ಎಸ್‌ಎಫ್‌ಐನ ಎಸ್.ರಾಘವೇಂದ್ರ, ವಿ.ರಮೇಶ್, ಶೋಭ, ಕೊಳಗೇರಿ ನಿವಾಸಿಗಳ ಸಂಘದ ಎ.ನರಸಿಂಹ ಮೂರ್ತಿ, ಅಲ್ತಾಫ್ ಮುಷ್ಕರದನೇತೃತ್ವ ವಹಿಸಿದ್ದರು.

ಅಮ್ಮಸಂದ್ರ ಸಿಮೆಂಟ್ ಫ್ಯಾಕ್ಟರಿ ಸಂಪೂರ್ಣ ಬಂದ್ ಆಚರಿಸಲಾಯಿತು. ಕುಣಿಗಲ್‌ನ ಅಂಗನವಾಡಿ ನೌಕರು, ಸಿಐಟಿಯು, ಎಐಟಿಯುಸಿ ಕಾರ್ಮಿಕರು, ಎಲ್‌ಐಸಿ, ಬ್ಯಾಂಕ್ ನೌಕರರು ಪ್ರತಿಭಟನೆ ನಡೆಸಿದರು. ಸಿಐಟಿಯು ಮುನಾಫ್, ಎಐಟಿಯುಸಿ ಶಿವಕುಮಾರ್, ಎಲ್.ಐಸಿ. ರಾಜಣ್ಣ, ಶಾಂತಕುಮಾರಿ ಮುಂತಾದವರು ನೇತೃತ್ವ ವಹಿಸಿದ್ದರು.

ತಿಪಟೂರು: ಸಿಐಟಿಯುನ ಕಾರ್ಮಿಕರು ಎಲ್‌ಐಸಿ ಬ್ಯಾಂಕ್ ನೌಕರರು, ರೈತರು,ಬೀಡಿ ಕಾರ್ಮಿಕರು ಸೇರಿ ಮೆರವಣಿಗೆ ಮಾಡಿ ರಸ್ತೆ ಚಳುವಳಿ ಮಾಡಿದರು. ಇದರ ನೇತೃತ್ವವವನ್ನು ಸಿಐಟಿಯು ಕೋದಂಡರಾಂ, ಪ್ರಾಂತ ರೈತ ಸಂಘದ ಚನ್ನಬಸಣ್ಣ ಮತ್ತು ಅಂಗನವಾಡಿ ನೌಕರರ ಮುಖಂಡರಾದ ಶಾಂತ ಕುಮಾರಿ, ಎಲ್‌ಐಸಿ ಬ್ಯಾಂಕ್ ಮುಖಂಡರಾದ ಗಾಯತ್ರಿ ಭಾಗವಹಿಸಿದ್ದರು.

ಚಿ.ನಾ.ಹಳ್ಳಿ : ಸಿಐಟಿಯುನ ಕಾರ್ಮಿಕರು ಪ್ರತಿಭಟನಾ ಮೆರವಣಿಗೆ ಮಾಡಿ ರಸ್ತೆ ತಡೆ ಚಳುವಳಿ ನಡೆಸಿದರು. ನೇತೃತ್ವವನ್ನು ನಿರುಪ್ ರಾವತ್, ಸಾಜಿದಾ ಹಸಿನಾ, ಫಾಮಿದಾ ಮುಂತಾದವರು ವಹಿಸಿದ್ದರು.

ಗುಬ್ಬಿ: ಅಂಗನವಾಡಿ ನೌಕರರ ಸಂಘ, ಸಿಐಟಿಯು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಸುಮಾರು 200 ಕ್ಕೂ ಹೆಚ್ಚು ಜನ ಪ್ರತಿಭಟನಾ ಮೆರವಣಿಗೆ ನಡೆಸಿ ರಸ್ತೆ ತಡೆ ನಡೆಸಿದರು. ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಬಿ.ಉಮೇಶ್, ಸಾವಿತ್ರಮ್ಮ ಗಂಗಾ ಮತ್ತಿತರರು ಭಾಗವಹಿಸಿದ್ದರು.

ಮೈಸೂರು : ಸರ್ಕಾರಿ ನೌಕರರು ಮತ್ತು ಕಾರ್ಮಿಕರು ತಂಡೋಪತಂಡವಾಗಿ ಬಂದು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರಿಂದ ನಗರದ ಬ್ಯಾಂಕ್‌ಗಳು, ಅಂಚೆ ಕಛೇರಿ, ಜೀವವಿಮಾ ನಿಗಮಗಳ ಕಛೇರಿಗಳು ಮುಂತಾದವುಗಳಲ್ಲಿ ಕೆಲಸ ಕಾರ್ಯಗಳು ಸ್ಥಗಿತಗೊಂಡಿದ್ದವು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮುಷ್ಕರಕ್ಕೆ ಸ್ಪಂದಿಸಿದ ಕಾರ್ಮಿಕರು ಪುರಭವನದ ಆವರಣದಲ್ಲಿ ಸಮಾವೇಶಗೊಂಡು ಅಲ್ಲಿಂದ ಕೆ.ಆರ್.ವೃತ್ತ, ದೇವರಾಜ ಅರಸು ರಸ್ತೆಯ ಮೂಲಕ ಹಾದು ಜಿಲ್ಲಾಧಿಕಾರಿಗಳ ಕಛೇರಿಯನ್ನು ತಲುಪಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಆವರಣದಲ್ಲೆಡೆ ಪ್ರತಿಭಟನಾಕಾರರು ಹಿಡಿದಿದ್ದ ಕೆಂಪು ಬಾವುಟಗಳು ಹಾಗೂ ಬ್ಯಾನರ್‌ಗಳು ರಾರಾಜಿಸ ತೊಡಗಿದ್ದವು. ಕಾರ್ಮಿಕರ ಘೋಷಣೆಗಳು ಅಲ್ಲೆಲ್ಲ ಮಾರ್ದನಿಸುತ್ತಿತ್ತು.



ಭಾರತೀಯ ಜೀವವಿಮಾ ನಿಗಮ, ಬ್ಯಾಂಕ್ ನೌಕರರು, ಅಂಚೆ, ರೈಲ್ವೆ ಇಲಾಖೆಗಳು, ಭಾರತ್ ಸಂಚಾರ ನಿಗಮ್ ಲಿಮಿಟೆಡ್, ಬೆಮೆಲ್, ವಿಕ್ರಾಂತ್ ಟೈರ್ಸ್, ಫಾಲ್ಕನ್ ಟೈರ್ಸ್, ಆಟೋ ಮೋಟಿವ್ ಆಕ್ಸೆಲ್ಸ್, ಮೈಸೂರ್ ಪಾಲಿಮರ್ಸ್, ಆರ್.ಪಿ.ಟಿ. ಟೆಲಿಕೇಬಲ್ಸ್ ಮುಂತಾದ ಉದ್ದಿಮೆಗಳ ನೂರಾರು ಕಾರ್ಮಿಕರು ಇಂದಿನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹಾಸನ: ಹಾಸನ ನಗರದ ಜನತೆ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಬೃಹತ್ ರ್‍ಯಾಲಿಯನ್ನು ವೀಕ್ಷಿಸಿದರು. ಸುಮಾರು 1500 ಪ್ರತಿಭಟನೆಗಾರರು ಒಂದೂವರೆ ಗಂಟೆ ಜರುಗಿದ ಮೆರವಣಿಗೆಯಲ್ಲಿ ಪಾಲ್ಗೊಂಡರು. ಘೋಷಣೆಗಳು ಉರಿವ ಬಿಸಿಲಿನಲ್ಲೂ ಮುಗಿಲು ಮುಟ್ಟಿದವು. ಕೆಂಪು ಬಣ್ಣ ಮೆರವಣಿಗೆಯಲ್ಲಿ ರಾರಾಜಿಸಿತು. ಪ್ರತಿಭಟನಾಗಾರರ ಉತ್ಸಾಹಕ್ಕೆ ಈ ಜಗತ್ತಿನಲ್ಲಿ ಯಾವುದೂ ಅಡ್ಡಿಬರುವಂತಿರಲಿಲ್ಲ. ಸಹಸ್ರಾರು ಮಂದಿ ಕೊಂಡೊಯ್ದ ಮನವಿ ಪತ್ರ ಪುಟ್ಟದಾಗಿದ್ದರೂ ಮುಷ್ಕರದ ಹಕ್ಕಿನ ಮಹತ್ವವನ್ನು ತಿಳಿಸುವುದಕ್ಕಾಗಿ ಜಿಲ್ಲಾಧಿಕಾರಿಯ ಮೂಲಕ ರಾಷ್ಟ್ರಪತಿಗಳಿಗೆ ತಲುಪಿಸಲು ಅವರು ಕೋರಿದರು.

ಮನವಿ ಈ ರೀತಿ ಇದೆ -

"ಸುಪ್ರೀಂ ಕೋರ್ಟ್ ಸರ್ಕಾರಿ ನೌಕರರಿಗೆ ಮುಷ್ಕರದ ಹಕ್ಕಿಲ್ಲ ಎಂದು ತೀರ್ಪು ನೀಡಿರುವುದು ವಿಷಾದಕರ ಪ್ರಜಾಪ್ರಭುತ್ವದಲ್ಲಿ ಜನವರ್ಗಗಳಿಗೆ ಭಾವನಾತ್ಮಕವಾಗಿ ನೈಸರ್ಗಿಕವಾಗಿ ತಾನೇತಾನಾಗಿ ಅನೇಕ ಹಕ್ಕುಗಳು ಒದಗಿ ಬರುತ್ತವೆ. ಅವುಗಳಲ್ಲಿ ಮುಷ್ಕರ ಹೂಡುವ ಹಕ್ಕೂ ಒಂದು.

ಕಾರ್ಮಿಕರು ನೂರಾರು ವರ್ಷಗಳ ಹೋರಾಟ, ತ್ಯಾಗ, ಬಲಿದಾನಗಳ ಮೂಲಕ ಮುಷ್ಕರದ ಹಕ್ಕನ್ನು ದುಡಿಯುವ ವರ್ಗಕ್ಕೆ ತಂದುಕೊಟ್ಟಿದ್ದಾರೆ.

ಹಕ್ಕುಗಳನ್ನು ನಿರಾಕರಿಸುವ ಕಾಲಘಟ್ಟ ಚರಿತ್ರೆಯಲ್ಲಿ ಎಂದೋ ಮುಗಿದುಹೋಗಿದೆ. ಭಾರತದ ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮುಷ್ಕರ, ಹರತಾಳ, ಧರಣಿ, ಮತಪ್ರದರ್ಶನ, ಸತ್ಯಾಗ್ರಹ ಮುಂತಾದ ಪ್ರತಿಭಟನೆಯ ವಿಧಾನಗಳು ಬಹಳ ನಿರ್ಣಾಯಕ ಪಾತ್ರವಹಿಸಿದ್ದವು.

ಸರ್ವೋಚ್ಚ ನ್ಯಾಯಾಲಯ ಅಸ್ತಿತ್ವಕ್ಕೆ ಮೊದಲೇ ಈ ದೇಶದಲ್ಲಿ ನೌಕರರು ಮತ್ತು ಕಾರ್ಮಿಕರು ಮುಷ್ಕರ, ಸತ್ಯಾಗ್ರಹಗಳಲ್ಲಿ ಪಾಲ್ಗೊಂಡಿದ್ದರೆಂದು ಸುಪ್ರೀಮ್ ಕೋರ್ಟಿಗೆ ನೆನಪಿಸಲು ಬಯಸುತ್ತೇವೆ.

ಮುಷ್ಕರದ ಹಕ್ಕು ಮಾನವಕುಲದ ಜನ್ಮಸಿದ್ಧ ಹಕ್ಕು. ನಾಗರೀಕ ಸಮಾಜದ ಮೂಲಭೂತ ಹಕ್ಕು ಎಂದು ಪ್ರತಿಪಾದಿಸಲಾಗಿದೆ.

ಈ ಮನವಿಗೆ ಜೀವ ವಿಮಾ ನೌಕರರ ಸಂಘಗಳು, ರಾಜ್ಯ ಸರ್ಕಾರಿ ನೌಕರರ ಸಂಘ, ಅಂಗನವಾಡಿ ಕಾರ್ಯಕರ್ತೆಯರ ಸಂಘ, ಗ್ರಾಮ ಪಂಚಾಯತ್ ನೌಕರರ ಸಂಘ, ಎಸ್ಸೆಫೈ, ಡಿ.ವೈ.ಎಫ್.ಐ., ಔಷಧಿ ಮಾರಾಟ ಪ್ರತಿನಿಧಿಗಳ ಸಂಘ ಹಾಗೂ ಸಿಐಟಿಯು ಮುಖಂಡರು ಸಹಿ ಹಾಕಿದರು.

ಮೆರವಣಿಗೆಯ ಉದ್ದಕ್ಕೂ 'ಮುಷ್ಕರದ ಹಕ್ಕು ಮೂಲಭೂತ ಹಕ್ಕು', 'ಮುಷ್ಕರದ ಹಕ್ಕಿನ ರಕ್ಷಣೆಗೆ ಮುಂದಾಗದ ಕೇಂದ್ರ ಸರ್ಕಾರಕ್ಕೆ ಧಿಕ್ಕಾರ', ಮುಂತಾದ ಘೋಷಣೆಗಳು ಮೊಳಗಿದವು. ಪಂಚಾಯತ್ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರಿಂದ ಸ್ಥಳದಲ್ಲೆ ಘೋಷಣೆಯೊಂದು ತಯಾರಾಯಿತು. ಅದು "ಪಂಚಾಯಿತಿಯಿಂದ ಪಾರ್ಲಿಮೆಂಟ್‌ವರೆಗೆ ಮುಷ್ಕರದ ಹಕ್ಕು ಮೂಲಭೂತ ಹಕ್ಕು" ಎಂಬಂತಾಗಿದೆ. ಮುಷ್ಕರದ ಹಕ್ಕು ಮಗುವಿನಿಂದ ಮುದುಕರವರೆಗೆ ಎಲ್ಲರಿಗೂ ಇದೆ.

ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸುವ ವೇಳೆ ಗ್ರಾಮ ಪಂಚಾಯತ್ ನೌಕರರ ಸಂಘದ ಜಿಲ್ಲಾ ಅಧ್ಯಕ್ಷರಾದ ಕೆ.ಸಿ.ರಂಗಸ್ವಾಮಿ, ಸಿಐಟಿಯು ರಾಜ್ಯ ಉಪಾಧ್ಯಕ್ಷರಾದ ಸುಕುಮಾರ್, ಅಂಗನವಾಡಿ ಕಾರ್ಯಕರ್ತೆಯರ ಪರವಾಗಿ ಸುನೀತ್‌ಹೆಬ್ಬಾರ್, ಔಷಧ ಮಾರಾಟ ಪ್ರತಿನಿಧಿಗಳ ವತಿಯಿಂದ ವೀರಣ್ಣ ಹಳ್ಳಿ ಮುಂತಾದವರು ಮುಷ್ಕರದ ಹಕ್ಕಿನ ಪರವಾಗಿ ಮಾತನಾಡಿದರು.

ವಿಜಾಪುರ ಮೆರವಣಿಗೆ : ನಗರದ ವಿವಿಧ ಭಾಗಗಳಿಂದ ಮೆರವಣಿಗೆ ಮುಖಾಂತರ ಬಂದ ಕಾರ್ಮಿಕ ಸಂಘಟನೆಗಳು ಸಿದ್ದೇಶ್ವರ ಗುಡಿಯ ಮುಂದೆ ಕೂಡಿಕೊಂಡು ನಾಲ್ಕು ಸಾವಿರಕ್ಕೂ ಹೆಚ್ಚು ಜನರ ಮೆರವಣಿಗೆ ಹೊರಡಿಸಲಾಯಿತು. ಮಹಾತ್ಮಾಗಾಂಧಿ ವೃತ್ತ, ಬಸವೇಶ್ವರ ವೃತ್ತ ಹಾಯ್ದು ಜಿಲ್ಲಾಧಿಕಾರಿ ಕಛೇರಿಗೆ ತೆರಳಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಬಹಿರಂಗ ಸಭೆಯಲ್ಲಿ ಕಾರ್ಮಿಕ ಸಂಘಟನೆಗಳ ಸಂಯುಕ್ತ ಸಮಿತಿ ಮುಖಂಡ ವಿ.ಎಮ್.ಕಾಳೆ ಕರ್ನಾಟಕ ಪ್ರಾಂತ ರೈತ ಸಂಘದ ಭೀಮಸಿ ಕಲಾದಗಿ ಸಿಐಟಿಯು ಮುಖಂಡ ವಿ.ಎಮ್.ಸೊನ್ನದ, ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಯೂನಿಯನ್‌ನ ಡಿ.ಹೆಚ್. ಮುಲ್ಲಾ ರಾಜೇಂದ್ರ ಕಾವಿ, ಜಿ.ಜಿ.ಗಾಂಧಿ, ವಿ.ಎಸ್.ಹೂಸೂರ, ಉತ್ತಮ ಕಾಂಬ್ಳೆ, ಸಂಜಯ ಮುದ್ದೆ ಬಿಹಾಳ, ಅಶೋಕ ಚಂಚಲಕರ್, ಎಸ್.ಆರ್.ಮಠ್, ಅಣ್ಣಾರಾಯ, ಈಳಗೇರ ಸಲೀಮ ನಧಾಫ್, ಸುರೇಖಾ ರಜಪೂತ್, ಲಕ್ಷ್ಮಿ ಮೈಲಾರಿ ಮುಂತ್ತಾದವರು ಮಾತನಾಡಿದರು.

ನಂತರ ಜಿಲ್ಲಾಧಿಕಾರಿಗಳ ಮುಖಾಂತರ ರಾಷ್ಟ್ರಪತಿಯವರಿಗೆ ಮನವಿ ಪತ್ರ ಅರ್ಪಿಸಲಾಯಿತು.

ಈ ರಾಷ್ಟ್ರೀಯ ಮುಷ್ಕರದಲ್ಲಿ ಜಿಲ್ಲೆಯ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ, ಬಿಜಾಪುರ ಗ್ರಾಮೀಣ ಬ್ಯಾಂಕ್ ನೌಕರರ ಹಾಗೂ ಅಧಿಕಾರಿಗಳ ಸಂಘಟನೆಗಳ ಕ್ರಿಯಾ ಸಮಿತಿ. ಜಿಲ್ಲಾ ಮಾಧ್ಯಮಿಕ ಶಾಲೆಗಳ ಹಾಗೂ ಪದವಿ ಪೂರ್ವ ಮಹಾ ವಿದ್ಯಾಲಯಗಳ ಮಹಾಮಂಡಳಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ. ವಿಜಾಪುರ ಜಿಲ್ಲಾ ಬ್ಯಾಂಕ್ ನೌಕರರ ಸಂಯುಕ್ತ ವೇದಿಕೆ, ಎಲ್‌ಐಸಿ., ಟೆಲಿಫೋನ್ ನೌಕರರು, ಲಾರಿ ಹಮಾಲರು, ಗ್ರಾಮ ಪಂಚಾಯತ್ ನೌಕರರ ಸಂಘ, ಜನವಾದಿ ಮಹಿಳಾ ಸಂಘ, ಕರ್ನಾಟಕ ಪ್ರಾಂತ ರೈತ ಸಂಘ, ಡಿವೈಎಫ್‌ಐ., ಕರ್ನಾಟಕ ರಾಜ್ಯ ರೈತ ಸಂಘ ಪ್ರೊ.ನಂಜುಂಡ ಸ್ವಾಮಿ, ಫೆಡಿನಾ ಸ್ತ್ರೀ ಶಕ್ತಿ ಮಹಿಳಾ ಸಂಘಟನೆಗಳು, ಕೃಷಿ ಕೂಲಿಕಾರರ ಸಂಘ, ಬಿಎಲ್‌ಡಿ ನೌಕರರ ಸಂಘ, ಹಮಾಲರ ಸಂಘ, ಮುನ್ಸಿಪಾಲ್ ಕಾಮಗಾರಿ ಯೂನಿಯನ್ ಮುಂತಾದ ಸಂಘಟನೆಗಳು ಭಾಗವಹಿಸಿದ್ದವು.

ನಭಿಸಾಬ ಢವಳಗಿ, ಪರುತಂಖ್ಯ ಹಿರೆಮಠ, ಬಸವಲಿಂಗಪ್ಪಾ ಕಪಾಲಿ, ಸಂಗಮೇಶ ಏಳಗಿ(ವಕೀಲರು), ಸುರೇಶ್, ಪ್ರಭುಗೌಡ ಮುಂತಾದ ಮುಖಂಡರು ಭಾಗವಹಿಸಿದ್ದರು.

ಮಾಧ್ಯಮ ಮಂಥನ

ಈ ಹಿಂದೆ ನಮ್ಮ ದೇಶದಲ್ಲಿ ಸರಕಾರಿ ಪತ್ರೋಟಿಯ ಮಾಧ್ಯಮದ ದುರುಪಯೋಗ ನಡೆದಿರಲಿಲ್ಲವೆಂದಲ್ಲ. ಆದರೆ ವಾಜಪೇಯಿ ಸರ್ಕಾರ ಅವೆಲ್ಲವನ್ನೂ ಮೀರಿಸಿದೆ. ಲೋಕಸಭೆಯನ್ನು ವಿಸರ್ಜಿಸಿ ಚುನಾವಣೆಗಳು ಖಚಿತವೆಂದಾದ ಮೇಲೆ ಸರ್ಕಾರಿ ಪ್ರಚಾರದ ಜಾಹೀರಾತುಗಳನ್ನು ನಿಲ್ಲಿಸಬೇಕು ಎಂದು ಚುನಾವಣಾ ಆಯೋಗ ಟಿಪ್ಪಣಿ ಮಾಡಿದ್ದರೂ ವಾಜಪೇಯಿ ಸರ್ಕಾರ ನಾಚಿಕೆಯಿಲ್ಲದೆ 'ಭಾರತ ಪ್ರಕಾಶಿಸುತ್ತಿದೆ' ಎಂಬ ಜಾಹೀರಾತುಗಳನ್ನು ಮುಂದುವರೆಸುತ್ತಿದೆ.

ಸರಕಾರಿ ಇಲಾಖೆಗಳಷ್ಟೇ ಅಲ್ಲ ಸಾರ್ವಜನಿಕ ವಲಯದ ಉದ್ದಿಮೆಗಳ ಮೇಲೂ ಈ ಪ್ರಚಾರದಲ್ಲಿ ಭಾಗವಹಿಸುವಂತೆ ಒತ್ತಡ ಹಾಕಲಾಗುತ್ತಿದೆ. "ಎಲ್ಲಾ ಪ್ರಮುಖ ಮಂತ್ರಾಲಯಗಳು ತಮ್ಮ ಜಕಾತ್ ಕಾಣಿಕೆ ನೀಡುತ್ತಿವೆ, ತಲೆಬಾಗಿ ವಾಜಪೇಯಿಯವರ ಢೋಲು ಬಾರಿಸುತ್ತಿವೆ. ವ್ಯಾಪಾರ ಜಗತ್ತಿನೊಡನೆ ಕೈ ಮಿಲಾಯಿಸಿರುವುದು ಸಾಕಷ್ಟು ಎದ್ದು ಕಾಣುತ್ತಿದೆ. ಈ ಹೆಚ್ಚಿನ ಜಾಹಿರಾತುಗಳು 'ಉದ್ಯೋಗನಿರ್ಮಾಣ' ಮತ್ತು ಸಂಬಂಧಪಟ್ಟ ಗುರಿ ಸಾಧನೆಯ ಹೆಸರಿನಲ್ಲಿ ಖಾಸಗಿ ವಲಯಕ್ಕೆ ನೀಡುತ್ತಿರುವ ಭಾರಿ ಆಮಿಷಗಳು ಸಹಜ ಎಂದು ಜನತೆ ಒಪ್ಪಿಕೊಳ್ಳುವಂತೆ ಅವರನ್ನು ಸಿದ್ಧಗೊಳಿಸುವ ಪ್ರಯತ್ನಗಳು... ನಿಜ ಸಂಗತಿ ಅರಿಯಲಾರದವರ ಕಣ್ಣುಗಳನ್ನು ಈಗಲಾದರೂ ಈ ಪ್ರಚಾರ ತೆರೆಸಬೇಕು" ಎಂದು ಪ್ರಖ್ಯಾತ ಅರ್ಥಶಾಸ್ತ್ರಜ್ಞರಾದ ಜೀನ್ ಡ್ರೆಝ್ ಮತ್ತು ರೀತಿಕಾ ಖೇರಾ ಇತ್ತೀಚಿನ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ಈ ಸರ್ಕಾರಿ ಪ್ರಚಾರ ಹಾಗೂ [illegible]ಕೆಗಳಲ್ಲಿನ [illegible] ಪ್ರಚಾರ ಜಾಹೀರಾತುಗಳಲ್ಲಿ ಭಾರತೀಯ ಜನತೆ ಬೆವರು ಸುರಿಸಿ ಗಳಿಸಿಕೊಟ್ಟ ಸಾವಿರಾರು ಕೋಟಿ ರೂ.ಗಳು ಚರಂಡಿಗೆ ಹರಿದು ಹೋಗುತ್ತಿವೆ - ಕೇವಲ ಒಂದು ಪಕ್ಷದ ಹಿತಾಸಕ್ತಿಗಾಗಿ!

ಎರಡು ಅಂಶಗಳು

ಒಟ್ಟಾರೆಯಾಗಿ ಹೇಳುವುದಾದರೆ ಈ ಅಬ್ಬರದ ಪ್ರಚಾರದಲ್ಲಿ ಎರಡು ಅಂಶಗಳಿವೆ. ಮೊದಲನೆಯದಾಗಿ, ಕಳೆದ ಐದು ವರ್ಷಗಳಲ್ಲಿ ಸರ್ಕಾರದ 'ಸಾಧನೆ'ಗಳನ್ನು ಇತ್ತೀಚೆಗೆ ವಿವಿಧ ವಿಭಾಗಗಳಿಗೆ ನೀಡಿದ ಆಮಿಷಗಳನ್ನು ಬಿಂಬಿಸುವ ಪ್ರಯತ್ನವನ್ನು ಇವು ನಡೆಸಿವೆ. ಆದರೆ ವಾಸ್ತವವಾಗಿ ಭಾರತದ ಕೇವಲ ಕೆಲವೇ ಉಳ್ಳವರು ಪ್ರಕಾಶಿಸುತ್ತಿದ್ದಾರೆ. ಉಳಿದವರೆಲ್ಲಾ ಬಡತನ, ದಾರಿದ್ರ್ಯದಲ್ಲಿ ಬದುಕು ಸವೆಸುವ ಶಾಪಕ್ಕೊಳಗಾಗಿಯೇ ಉಳಿದಿದ್ದಾರೆ.

ಇದನ್ನು ನಾವಷ್ಟೇ ಹೇಳುತ್ತಿಲ್ಲ. ಪತ್ರಿಕೆಗಳಲ್ಲಿ ಬರುತ್ತಿರುವ ಲೇಖನಗಳು, ವರದಿಗಳು, ವಿಶ್ಲೇಷಣೆಗಳೂ ಕೂಡಾ ಇದನ್ನೇ ಹೇಳುತ್ತಿವೆ. ಇವರಲ್ಲಿ ಎಲ್ಲರೂ ಸರ್ಕಾರದ ವಿರೋಧಿಗಳೇನಲ್ಲ.

ಬಡತನ ಮತ್ತು ನಿರುದ್ಯೋಗದ ಪ್ರಮಾಣ ಒಂದು ದೇಶದ ಆರ್ಥಿಕ ಆರೋಗ್ಯದ ನಿಜವಾದ ಸೂಚ್ಯಂಕಗಳಾಗಿದ್ದರೆ ಈ ಸರ್ಕಾರ ಈ ರಂಗಗಳಲ್ಲಿ ಶೋಚನೀಯವಾಗಿ ಸೋತಿದೆ, ಜನಗಳ ಸಂಕಟಗಳನ್ನು ಪರಿಹರಿಸುವಲ್ಲಿ ವಿಫಲವಾಗಿದೆ ಎಂಬುದು ಸ್ವಯಂವೇದ್ಯ.

ಈ ಅಬ್ಬರದ ಪ್ರಚಾರದ ಇನ್ನೊಂದು ಅಂಶವೂ ಒಂದು ರೀತಿಯಲ್ಲಿ ಇದಕ್ಕೆ ಸಂಬಂಧಪಟ್ಟದ್ದೇ ಎನ್ನಬಹುದು. ಅದೆಂದರೆ ಪ್ರಧಾನಮಂತ್ರಿಗಳ ವೈಯುಕ್ತಿಕ ಪ್ರತಿಷ್ಠೆಯನ್ನು ನಿರ್ಮಿಸುವುದು. ಅವರ ಸಾರಥ್ಯದಲ್ಲಿ ದೇಶ ಹಿಂದೆಂದೂ ಕಾಣದ ಪ್ರಗತಿ ಸಾಧಿಸಿದೆಯಂತೆ. ಕೆಲವು ಭಟ್ಟಂಗಿಗಳಂತೂ ಅವರನ್ನು ನೆಹರೂರವರೊಂದಿಗೆ ಹೋಲಿಸುವ ಮಟ್ಟಕ್ಕೂ ಹೋಗಿದ್ದಾರೆ. ದೇಶದಲ್ಲಿ ಪ್ರತಿದಿನ 3 ಕೋಟಿ ಜನ ಅರೆಹೊಟ್ಟೆಯಲ್ಲೇ ಮಲಗಬೇಕಾಗುತ್ತದೆ, ರೈಲ್ವೇ ಇಲಾಖೆಯ 3ನೇ, 4ನೇ ದರ್ಜೆಯ 3800 ಹುದ್ದೆಗಳಿಗೆ 75 ಲಕ್ಷ ಅರ್ಜಿಗಳು ಬಂದವು ಎಂಬಿತ್ಯಾದಿ ಸಂಗತಿಗಳು ಈ ಸುಳ್ಳು ಬೊಗಳೆಗಳನ್ನು ಬಯಲಿಗೆಳೆಯುತ್ತವೆ.

ರಸ್ತೆ ನಿರ್ಮಾಣದ ಪ್ರಚಾರವನ್ನೇ ತಗೊಳ್ಳಿ. ಹಾಡುಹಗಲೇ ರಾಷ್ಟ್ರೀಯ ಹೆದ್ದಾರಿ ಕಾರ್ಪೊರೇಷನ್ ಇಂಜಿನಿಯರ್ ಸತ್ಯೇಂದ್ರ ದುಬೆಯ ಕೊಲೆ ವಾಸ್ತವ ಸಂಗತಿಯೇನೆಂಬುದನ್ನು ಸ್ಪಷ್ಟಗೊಳಿಸಿದೆ. ರಸ್ತೆ ನಿರ್ಮಾಣದ ಹೆಸರಿನಲ್ಲಿ ಖರ್ಚು ಮಾಡುತ್ತಿರುವ ಬಹುಪಾಲು ಹಣ ಮಾಫಿಯಾ ಗುಂಪುಗಳ ಖಜಾನೆಗಳನ್ನು ಸೇರುತ್ತಿವೆ ಎಂದು ಈ ಸಮರ್ಪಿತ, ನೇರನುಡಿಯ ಇಂಜಿನಿಯರ್ ಪ್ರಧಾನಮಂತ್ರಿಗಳ ಕಛೇರಿಗೆ ಒಂದು ತುರ್ತು ಸಂದೇಶ ಕಳಿಸಿದ. ಆದರೆ ಸಂಗತಿಯನ್ನು ತಿಳಿಸಿದ್ದು ಯಾರು ಎಂದು

ಉತ್ಪ್ರೇಕ್ಷೆಯ ಭರಾಟೆ

ಇಲ್ಲಿ ಪ್ರಕಾಶಿಸುತ್ತಿರುವುದು ಸಾಧನೆಗಳಲ್ಲ ಬರೀ ಬೂಟಾಟಿಕೆ

ತಿಳಿಯಪಡಿಸಬಾರದು ಎಂದು ನಿರ್ದಿಷ್ಟವಾಗಿ ಆತ ಮನವಿ ಮಾಡಿಕೊಂಡಿದ್ದರೂ ಪ್ರಧಾನಮಂತ್ರಿಯ ಕಚೇರಿಯಿಂದಲೇ ಆತನ ಹೆಸರು ಸಾರ್ವಜನಿಕಾಯಿತು. ಆದರೆ ಪ್ರಧಾನಮಂತ್ರಿಗಳು ಇದುವರೆಗೂ ತನ್ನ ಹೊಣೆಗಾರಿಕೆಯನ್ನು ಒಪ್ಪಿಕೊಂಡಿಲ್ಲ.

ಹೀಗಿದೆ ಈ ಅಪ್ರತಿಮ ನೇತಾರನ ಸಾರಥ್ಯ?

ಇಲ್ಲಿ ಇನ್ನೊಂದು ಸರಳ ಪ್ರಶ್ನೆಯೂ ಇದೆ. ಕಳೆದ ಐದು ವರ್ಷಗಳಲ್ಲಿ ಏನೇ ಅಲ್ಪಸ್ವಲ್ಪ ಬೆಳವಣಿಗೆಯಾಗಿದ್ದರೂ ಹಿಂದಿನ 51 ವರ್ಷಗಳಲ್ಲಿ ನಿರ್ಮಿಸಿದ ಮೂಲರಚನೆಗಳಿಲ್ಲದೆ ಇದು ಸಾಧ್ಯವಾಗುತ್ತಿತ್ತೇ? ಕಳೆದ 51 ವರ್ಷಗಳಲ್ಲಿ ನಡೆದ ಬೆಳವಣಿಗೆಗಳ ತಳಪಾಯದ ಮೇಲೆ ಇನ್ನೂ ಬಹಳಷ್ಟನ್ನು ಸಾಧಿಸಬಹುದಿತ್ತು. ಈ ಸರಳ ಸತ್ಯವನ್ನು ಅರಿಯಲು ಹೋಗದ ಈ ಆಡಳಿತ ಎಲ್ಲವನ್ನು ತಾನೇ ಮಾಡಿದ್ದು ಎಂದು ಹೇಳುತ್ತಾ ಸತ್ಯಕ್ಕೆ ವಂಚನೆ ಬಗೆಯುತ್ತಿದೆ.

ಹತಾಶೆಯ ಲಕ್ಷಣ

ಪ್ರಧಾನಮಂತ್ರಿಗಳನ್ನು ಬಿಂಬಿಸುವ ಕಸರತ್ತಿನಲ್ಲಿ ಸತ್ಯವೇನೂ ಇಲ್ಲದಿದ್ದರೂ ಬಿಜೆಪಿ ಹಾಗೂ ಅವರ



ಎನ್‌ಡಿಎ ಬಾಲಂಗೋಚಿಗಳು ಏಕೆ ಇದನ್ನು ಮಾಡಬೇಕಾಗಿ ಬಂದಿದೆ ಎಂಬುದನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬಹುದು. ಹೇಳಿಕೊಳ್ಳಲು ಯಾವುದೇ ಘನ ಸಾಧನೆಯಿಲ್ಲದ ಅವರು ಚುನಾವಣಾ ವೈತರಣಿಯನ್ನು ದಾಟಲು ವಾಜಪೇಯಿಯವರ ಹೆಸರು ನೆರವಾಗಬಹುದೆಂದು ನಂಬಿದ್ದಾರೆ. ಅವರದ್ದು ನಿಜವಾಗಿಯೂ ಅತ್ಯಂತ ಶೋಚನೀಯ ಪರಿಸ್ಥಿತಿ.

ಮತ್ತಷ್ಟು ದುರಂತದ ಸಂಗತಿಯೆಂದರೆ ಅವರ ಅತಿದೊಡ್ಡ ಮತ-ಆಕರ್ಷಕರಾಗಿದ್ದ ವಾಜಪೇಯಿಯವರ ಆಕರ್ಷಣೆಯೂ ಕಡಿಮೆಯಾಗುತ್ತಾ ಬಂದಿದೆ. ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದದ್ದು ಸುಮಾರಾಗಿ ನಕಾರಾತ್ಮಕ ಮತದಾನದ ಮೇಲೆ ಎಂಬುದು ಸರಳ ಸತ್ಯ. ಆದ್ದರಿಂದ ಈ ನಕಾರಾತ್ಮಕ ಮತದಾನ ಈಗ ತನ್ನ ವಿರುದ್ಧವೇ ತಿರುಗಬಹುದೆಂಬ ಭಯ ಅದಕ್ಕಿದೆ. ಆದ್ದರಿಂದ ಅಧಿಕಾರಕ್ಕೆ ಮರಳಲು ಎಲ್ಲಾ ಮಾರ್ಗಗಳನ್ನು, ಬಹುಪಾಲು ಹೊಲಸು ಮಾರ್ಗಗಳನ್ನೇ ಅವರು ಬಳಸಿಕೊಳ್ಳುತ್ತಿದ್ದಾರೆ. ಈ ಹತಾಶೆಯಿಂದಾಗಿಯೇ ಅವರು ವಾಜಪೇಯಿಯವರ ಪ್ರತಿಷ್ಠೆಯ ನಿರ್ಮಾಣದ ಕೆಲಸಕ್ಕೆ ಇಳಿದಿದ್ದಾರೆ.

ಅವರ ಹತಾಶೆ ಕೆಲವು ಸರಳ ಸಂಗತಿಗಳಿಂದ ಸ್ಪಷ್ಟವಾಗುತ್ತದೆ. ಉದಾಹರಣೆಗೆ, ಕಳೆದ ಬಾರಿಯಂತೆ ಅವರು ವಾಜಪೇಯಿಯವರನ್ನು ಸ್ವಾತಂತ್ರ್ಯ ಹೋರಾಟಗಾರ ಎಂದು ಬಿಂಬಿಸುತ್ತಿಲ್ಲ. 1999 ರಲ್ಲಿ ಈ ಪ್ರಯತ್ನ ನಡೆಸಿದಾಗ ಆತ ಸ್ವಾತಂತ್ರ್ಯ ಹೋರಾಟಗಾರನಲ್ಲ, ಅಷ್ಟೇ ಅಲ್ಲ, ತದ್ವಿರುದ್ಧ ಕೂಡಾ ಎಂಬುದು ಬೆಳಕಿಗೆ ಬಂತು. 1942 ರಲ್ಲಿ ಬ್ರಿಟಿಶ್ ಪೋಲೀಸರು ಅವರ ವಿಚಾರಣೆ ನಡೆಸಿದಾಗ ಅವರು ತನ್ನ ಗೆಳೆಯರಿಗೇ ವಿಶ್ವಾಸಘಾತ ಬಗೆದು ಅವರ ಹೆಸರುಗಳನ್ನು ಒಂದೊಂದಾಗಿ ಪೋಲೀಸರಿಗೆ ತಿಳಿಸಿದರಂತೆ. ಈ ವಂಚನೆಯಿಂದಾಗಿ ಬಂಧನಕ್ಕೊಳಗಾದವರಲ್ಲಿ ಅವರ ಸ್ನೇಹಿತ ಲೀಲಾಧರ ವಾಜಪೇಯಿ ಅಲಿಯಾಸ್ ಕಕುವಾ ಕೂಡಾ ಇದ್ದು, ಅವರ ಆಪಾದನೆಯನ್ನು ನಿರಾಕರಿಸುವುದು ಶ್ರೀಮಾನ್ ಅಟಲ್ ಬಿಹಾರಿ ವಾಜಪೇಯಿಯವರಿಗೆ ಇನ್ನೂ ಸಾಧ್ಯವಾಗಿಲ್ಲ. ಅಷ್ಟೇ ಅಲ್ಲ, ಜೈಲು ಸೇರಿದಾಗ ಅಲ್ಲಿನ ಕಷ್ಟಗಳನ್ನು ಕೆಲವು ದಿನವೂ ಸಹಿಸಲಾಗದೆ ಕ್ಷಮಾಯಾಚನೆ ಬರೆದುಕೊಟ್ಟು ಹೊರಬಂದರು. 1942 ರಲ್ಲಿ ತಮ್ಮ ನೇತಾರನ ಪಾತ್ರದ ಬಗ್ಗೆ ಬಿಜೆಪಿ ಮೌನವಾಗಿದೆ. ಆದರೆ ಇದರಲ್ಲಿ ಆಶ್ಚರ್ಯವೇನಿದೆ? ಬಿಜೆಪಿ ಹುಟ್ಟಿದ್ದು 1980 ರಲ್ಲಿ. ಅದರ ಪೂರ್ವಜ ಜನಸಂಘ ಹುಟ್ಟಿದ್ದು 1951 ರಲ್ಲಿ. ಆದರೆ ಇವರೆಡರ ರಿಮೋಟ್ ಕಂಟ್ರೋಲ್ ಆಗಿರುವ ಆರ್‌ಎಸ್‌ಎಸ್‌ನ ಮುಖಂಡರಲ್ಲಿ ಒಬ್ಬನಾದರೂ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಉದಾಹರಣೆಯಿದೆಯೇ? ಇಂತಹ ಒಂದಾದರೂ ಹೆಸರಿದ್ದರೆ ಹೇಳಲಿ ಎಂದು ನಾವು ಸವಾಲು ಹಾಕುತ್ತೇವೆ. ಏನಿದ್ದರೂ ಅವರು ಬ್ರಿಟಿಷರ ಮತ್ತು ಅವರ ಪರಾಕು ಹೇಳುವ ರಾಜರುಗಳ ಪಕ್ಷ ವಹಿಸಿದ್ದರು. 1947-48 ರಲ್ಲಿ ಕಾಶ್ಮೀರ ಸಂಸ್ಥಾನದಲ್ಲಿ ಅವರ ಪಾತ್ರ ಇದಕ್ಕೊಂದು ಉದಾಹರಣೆ. ಕಾಶ್ಮೀರವನ್ನು ಭಾರತಕ್ಕೆ ಸೇರಿಸಬೇಕು ಎಂಬುದನ್ನು ಪ್ರತಿರೋಧಿಸುತ್ತಿದ್ದ ಮಹಾರಾಜನ ಪಕ್ಷ ವಹಿಸಿದ್ದ ಈ ಮಂದಿ ಕಾಶ್ಮೀರದ ಬಹುಪಾಲು ಜನತೆ ಬಯಸುತ್ತಿದ್ದಂತೆ ಅದನ್ನು ಧರ್ಮನಿರಪೇಕ್ಷ ಭಾರತದೊಂದಿಗೆ ವಿಲೀನಗೊಳಿಸಬೇಕು ಎಂದು ಹೋರಾಡುತ್ತಿದ್ದವರನ್ನೇ ಕೊಲ್ಲುವುದರಲ್ಲಿ ಮಗ್ನವಾಗಿತ್ತು.

ಆರ್‌ಎಸ್‌ಎಸ್ ನ ಈ ರೀತಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದಿರುವ ಸಂಗತಿಯೇ ಅದರ ಈಗಿನ ಕೋಮುವಾದಿ ಸ್ವರೂಪದ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳಲು ಸಾಕಷ್ಟು ಸಾಮಗ್ರಿ ಒದಗಿಸುತ್ತದೆ. ಏಕೆಂದರೆ ನಮ್ಮ ಭಾರತೀಯ ಜನಗಳನ್ನು ಒಟ್ಟಾಗಿ ಬೆಸೆದದ್ದು, ನಮ್ಮ ರಾಷ್ಟ್ರೀಯ ಐಕ್ಯತೆಯನ್ನು ಗಟ್ಟಿಗೊಳಿಸಿದ್ದು ಹಾಗೂ ಒಂದು ಧರ್ಮನಿರಪೇಕ್ಷ ಭಾರತದ ವಿಚಾರವನ್ನು ಸಾಕಾರಗೊಳಿಸಿದ್ದು ಆ ಸ್ವಾತಂತ್ರ್ಯದ ಹೋರಾಟವೇ ತಾನೇ. ಎಷ್ಟೆಂದರೆ 1947 ರ ಕೋಮು ಪ್ರಳಯಕ್ಕೂ ಕೂಡಾ ನಮ್ಮ ದೇಶವನ್ನು ಧರ್ಮನಿರಪೇಕ್ಷ ದಾರಿಯಲ್ಲಿ ಕಟ್ಟುವ ನಮ್ಮ ಜನತೆಯ ಸಂಕಲ್ಪವನ್ನು ಮುರಿಯಲಾಗಲಿಲ್ಲ. ನಮ್ಮ ಸಂವಿಧಾನದಲ್ಲಿ ಇದು ಚೆನ್ನಾಗಿ ಪಡಿಮೂಡಿದೆ.

ಆದ್ದರಿಂದ ಕೋಮುವಾದಿ ಫ್ಯಾಸಿಸ್ಟ್ ಮಾದರಿಯ ಆರ್‌ಎಸ್‌ಎಸ್ ಅದರ ರಾಜಕೀಯ ಮುಖವಾಡದ ಬಿಜೆಪಿ ನಮ್ಮ ಧರ್ಮನಿರಪೇಕ್ಷ ಪರಂಪರೆ ಮತ್ತು ಬಹುಮುಖೀ ಸಂಸ್ಕೃತಿಯ ಹಗೆಗಳಾಗಿದ್ದರೆ ಅದನ್ನು ಅರ್ಥಮಾಡಿಕೊಳ್ಳಬಹುದು. ಏಕೆಂದರೆ ಅವರು ಎಂದೂ ಸ್ವಾತಂತ್ರ್ಯ ಹೋರಾಟದ ಅಗ್ನಿಯಲ್ಲಿ ಪುಟಗೊಂಡವರಲ್ಲ.

ಬರೀ ಬೂಟಾಟಿಕೆಗಳೇ

ಇದು ವಾಜಪೇಯಿಯವರೂ ಸೇರಿದಂತೆ ಬಿಜೆಪಿ ಮುಖಂಡರ ವರ್ತನೆಗಳಲ್ಲೂ ಕಾಣಬರುತ್ತದೆ. ತಾನು ಮೊದಲು ಸ್ವಯಂಸೇವಕ, ಆಮೇಲಷ್ಟೇ ಪ್ರಧಾನಮಂತ್ರಿ ಎಂದು ವಾಜಪೇಯಿಯವರು ಹೇಳಿದ್ದಾರೆ. ಅದನ್ನು ಅರ್ಥಮಾಡಿಕೊಳ್ಳಬಹುದು. ಒಂದು ಸಂಘಟನೆಯ ಸದಸ್ಯನಾಗಿ ಅದರ ಸಿದ್ಧಾಂತದ ಬಗ್ಗೆ ಹೇಳಿಕೊಳ್ಳಲು ಅವರಿಗೆ ಹಕ್ಕಿದೆ. ಆದರೆ ಅವರು ಪ್ರಧಾನಮಂತ್ರಿಯಾಗುವವರೆಗೆ ಸಂವಿಧಾನದ ಪ್ರಕಾರ ಅವರು ಜನತೆಯ ಹಿತಾಸಕ್ತಿಗಳಿಗೆ, ದೇಶದ ಐಕ್ಯತೆಗೆ, ನಮ್ಮ ಕೋಮುಸೌಹಾರ್ದತೆಗೆ ಮತ್ತು ನಮ್ಮ ರಾಜಕೀಯ ವ್ಯವಸ್ಥೆಯ ಧರ್ಮನಿರಪೇಕ್ಷ ಹಾಗೂ ಒಕ್ಕೂಟ ಸ್ವರೂಪಕ್ಕೆ ಅವರು ಕರ್ತವ್ಯಬದ್ಧರಾಗಿರಬೇಕಾಗುತ್ತದೆ. ಆದರೆ ಇಲ್ಲಿಯೇ ಅವರು ತದ್ವಿರುದ್ಧವಾಗಿ ವರ್ತಿಸುತ್ತಿದ್ದಾರೆ. ಒಂದು ಉನ್ಮತ್ತ ಜನಜಂಗುಳಿ ಒಬ್ಬ ಕ್ರೈಸ್ತ ಪಾದ್ರಿಯನ್ನು, ಆತನ ಪುಟ್ಟ ಮಕ್ಕಳನ್ನು ಜೀವಂತ ಸುಟ್ಟರೆ, ವಾಜಪೇಯಿಯವರು ಧರ್ಮಪರಿವರ್ತನೆಯ ಬಗ್ಗೆ ರಾಷ್ಟ್ರೀಯ ಚರ್ಚೆ ನಡೆಯಬೇಕು ಎಂದು ಉಪದೇಶ ನೀಡುತ್ತಾರೆ! ಇದು ಕೋಮುಸೌಹಾರ್ದವನ್ನು ಕಾಪಾಡುವ ರೀತಿಯೇನು? ಗುಜರಾತಿನಲ್ಲಿ ಸಾವಿರಾರು ಮುಸ್ಲಿಮರನ್ನು ಅಮಾನುಷವಾಗಿ ಕೊಂದಿದ್ದಾರೆ, ನಮ್ಮ ಪ್ರಧಾನಮಂತ್ರಿಗಳು ಆ ರಾಜ್ಯದ ಮುಖ್ಯಮಂತ್ರಿ ನರೇಂದ್ರಮೋದಿಯ ಪ್ರತಿಜ್ಞಾ ಸ್ವೀಕಾರ ಸಮಾರಂಭದಲ್ಲಿ ಆತನ 'ಸಾಧನೆ'ಗಳನ್ನು ಹಾಡಿಹೊಗಳುತ್ತಾರೆ!. ರಾಷ್ಟ್ರೀಯ ಐಕ್ಯತೆಯನ್ನು ಗಟ್ಟಿಗೊಳಿಸುವ ವಿಧಾನ ಇದೇ ಏನು? ಗೋವಾದಿಂದ ಒಂದು ಸಾರಾಸಗಟು ಹೇಳಿಕೆ ಕೊಡುತ್ತಾರೆ - ಮುಸ್ಲಿಮರು ಸ್ವಭಾವತಃ ಇತರ ಕೋಮುವಾದಿಗಳೊಂದಿಗೆ ಶಾಂತಿಯಿಂದ ಇರಲಾರರು ಎಂದು. ನಮ್ಮ ರಾಜಕೀಯ ವ್ಯವಸ್ಥೆಯ ಧರ್ಮನಿರಪೇಕ್ಷ ಸ್ವರೂಪವನ್ನು ರಕ್ಷಿಸುವ ವಿಧಾನ ಇದೇ ಏನು?

ನಿಜವಾಗಿಯೂ ನಮ್ಮ 'ಸೌಮ್ಯವಾದಿ' ಪ್ರಧಾನಮಂತ್ರಿಗಳ ಬೂಟಾಟಿಕೆಗೆ ಮೇರೆಯೇ ಇಲ್ಲ!

ಈ ಬೂಟಾಟಿಕೆ ಕೇವಲ ವಾಜಪೇಯಿಯವರದ್ದೇ ಅಲ್ಲ. ಇಡೀ ಸಂಘಪರಿವಾರದ ಲಕ್ಷಣ ಇದು, ಅವರ ಘಟಾನುಘಟಿಗಳು ಸಂಸತ್ತಿನಲ್ಲಿ ಧರ್ಮನಿರಪೇಕ್ಷತೆಯ ಪ್ರತಿಜ್ಞೆ ಮಾಡುತ್ತಾರೆ. ಹೊರಗೆ ತದ್ವಿರುದ್ಧವಾದುದನ್ನೇ ಮಾಡುತ್ತಾರೆ.

ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ದೇವಸ್ಥಾನದ ಪ್ರಶ್ನೆಯನ್ನು ಪುನರುಜ್ಜೀವನಗಳಿಸುವ ಪ್ರಯತ್ನದ ರೀತಿ. ಮೂರು ತಿಂಗಳ ಹಿಂದೆಯಷ್ಟೇ ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್ ಗಢದ ವಿಧಾನಸಭಾ ಚುನಾವಣೆಗಳ ವೇಳೆ ತಾವು ಅಭಿವೃದ್ಧಿಯ ಪ್ರಶ್ನೆಯ ಮೇಲೆ ಚುನಾವಣೆ ಹೋರಾಟ ನಡೆಸಿದ್ದೇವೆ. ಅದನ್ನೇ ಮುಂದುವರಿಸುತ್ತೇವೆ ಎಂದು ಬೊಬ್ಬೆ ಹೊಡೆದದ್ದೇ ಹೊಡೆದದ್ದು. ಹಾಗಿದ್ದರೆ ಇದ್ದಕ್ಕಿದ್ದಂತೆ ದೇವಸ್ಥಾನದ ಪ್ರಶ್ನೆಯನ್ನು ಮತ್ತೆ ಎತ್ತಿದ್ದೇಕೆ? ಅಭಿವೃದ್ಧಿಯ ಪ್ರಶ್ನೆಯಿಂದ ಉಪಯೋಗವಾಗಲಿಕ್ಕಿಲ್ಲ ಎಂಬ ಅರಿವು ಮೂಡಿದ್ದರಿಂದ ಇರಬಹುದೇ?

ಇದು ಇನ್ನೊಂದು ಇತ್ತೀಚಿನ ಗೋಸುಂಬೆತನವನ್ನು ನೆನಪಿಸುತ್ತದೆ. ಒಂದೊಮ್ಮೆ ಬಿಜೆಪಿಯ ಘಟಾನುಘಟಿ ಮುಖಂಡನಾಗಿದ್ದ, ಮಧ್ಯೆ ಮರೆಯಾದಾತ, ಈಗ ಮತ್ತೆ ಹಾಲಿಯಾದ ಘಟಾನುಘಟಿ ಮುಖಂಡನೊಬ್ಬನ ಗೋಸುಂಬೆತನ. ಅಂದರೆ ಶ್ರೀಮಾನ್ ಕಲ್ಯಾಣ್ ಸಿಂಗ್ ಬಗ್ಗೆ. ಆತ ಉತ್ತರ ಪ್ರದೇಶದ ಮುಖ್ಯಮಂತ್ರಿಯಾಗಿದ್ದಾಗ ಆತನ ಸರ್ಕಾರದ ಮೌನ ಸಹಕಾರದಿಂದ ಬಾಬ್ರಿ ಮಸೀದಿಯ ಧ್ವಂಸ ಕ್ರಿಯೆ ನಡೆದಿತ್ತು. ಆಗ ಆತ ದೇವಸ್ಥಾನದ ಪ್ರಶ್ನೆಯ ಬಗ್ಗೆಯೇ ಮಾತನಾಡುತ್ತಿದ್ದರು. ಆ ಮಸೀದಿ ಧ್ವಂಸವಾಯಿತು ಎಂದು ಹೆಮ್ಮೆ ಪಡುತ್ತಿದ್ದರು. ಆದರೆ ವಾಜಪೇಯಿಯವರ ಕುಟಿಲತೆಯಿಂದ ಬಿಜೆಪಿಯಿಂದ ಉಚ್ಚಾಟನೆಗೊಂಡ ಮೇಲೆ ಮಸೀದಿಯ ಧ್ವಂಸವಾದದ್ದು ಬಿಜೆಪಿಯ ಉನ್ನತ ಮುಖಂಡರ ಪಿತೂರಿಯಿಂದ, ತನಗೆ ಆ ಬಗ್ಗೆ ಏನೂ ಹೇಳಿರಲಿಲ್ಲ, ತಾನು ಮುಗ್ಧ ಎಂಬುದು ಅವರ ರಾಗವಾಯಿತು. ಈಗ ಮತ್ತೆ ಬಿಜೆಪಿ ಸೇರಿ ರಾಜ್ಯದಲ್ಲಿ ಚುನಾವಣಾ ಪ್ರಚಾರ ನೇತೃತ್ವ ಸಿಕ್ಕಿದ ಮೇಲೆ ಮತ್ತೆ ದೇವಸ್ಥಾನ ನಿರ್ಮಾಣ ತನ್ನ ಪ್ರಥಮ ಆದ್ಯತೆಯೆನ್ನುತ್ತಿದ್ದಾರೆ. ಆದರೆ ಇದರಲ್ಲಿಯೂ ಆಶ್ಚರ್ಯವೇನಿಲ್ಲ. ಒಬ್ಬ ಹಿಂಬಾಲಕ ಆತನ ಮುಖಂಡನಿಗಿಂತ ಭಿನ್ನವಾಗಿರಲು ಸಾಧ್ಯವೇ?

ಹಿಗೆ ಆರ್‌ಎಸ್‌ಎಸ್, ಬಿಜೆಪಿ ಮತ್ತು ಅವರ ಪರಿವಾರದ ಇತರ ಸಂಘಟನೆಗಳು ಕಪಟ ಮಾರ್ಗಗಳನ್ನೇ ಅನುಸರಿಸಿಕೊಂಡು ಬಂದಿವೆ. ಅವನ್ನೇ ಮುಂದುವರೆಸುತ್ತವೆ ಎಂಬುದು ಸ್ವಯಂವೇಧ್ಯ. ಅದರಿಂದ ನಮ್ಮ ರಾಷ್ಟ್ರೀಯ ಐಕ್ಯತೆಗೆ, ಧರ್ಮನಿರಪೇಕ್ಷ ರಾಜಕೀಯ ವ್ಯವಸ್ಥೆಗೆ ಮತ್ತು ಬಹುಮುಖೀ ಸಂಸ್ಕೃತಿಗೆ ಗಂಭೀರ ಬೆದರಿಕೆ ಬಂದರೂ ಅದರ ಪರಿವೆ ಅವರಿಗಿಲ್ಲ. ಇದು ಅವರ ಆಟದ ಭಾಗವೇ. ನಿಜವೆಂದರೆ ಒಂದು ಫ್ಯಾಸಿಸ್ಟ್ ಮಾದರಿಯ ಸಂಘಟನೆ ಇಂತಹ ಆಟ ಆಡದಿದ್ದರೆ ಅದೇ ಆಶ್ಚರ್ಯದ ಸಂಗತಿ. ಆದರೆ ಮುಖ್ಯ ಪ್ರಶ್ನೆಯೆಂದರೆ ಜನತೆ ಇಂತಹ ದುಷ್ಟ ಆಟಗಳು ಯಶಸ್ವಿಯಾಗಲು ಬಿಡುತ್ತಾರೆಯೇ ಎಂಬುದು. ಬಹುಶಃ ಮುಂಬರುವ ದಿನಗಳಲ್ಲಿ ಈ ಮಹಾನ್ ದೇಶದ ರಾಜಕೀಯವಾಗಿ ಪ್ರೌಢ, ದೇಶಪ್ರೇಮಿ ಜನತೆ ಬಿಜೆಪಿಯನ್ನು ರಾಜಕೀಯದ ಅಂಚಿಗೆ ತಳ್ಳುತ್ತಾರೆ. ಏಕೆಂದರೆ ಅದೇ ಅವರಿಗೆ ಯೋಗ್ಯವಾದ ಸ್ಥಾನ.



ಜಿ.ಎಸ್.ಮಣಿ

ಯಾವ ಭಾರತ ಪ್ರಕಾಶಿಸುತ್ತಿದೆ

ಭಾರತ ಪ್ರಕಾಶಿಸುತ್ತಿದೆ ಎಂದು ಎನ್‌ಡಿಎಗಳು ಬೊಬ್ಬಿಡುತ್ತಿದ್ದಾರೆ. ಹೌದು ಭಾರತ ಪ್ರಕಾಶಿಸುತ್ತಿದೆ. ಯಾವ ಭಾರತ? ಲಂಚಕೋರತನ ದಿನನಿತ್ಯದ ಹಾಡಾಗಿರುವ ಭಾರತ ಪ್ರಕಾಶಿಸುತ್ತಿದೆ. ಕೊಲೆಗಡುಕರು ರಾಜಕೀಯ ವೇದಿಕೆಯನ್ನು ಹಿಡಿದುಕೊಂಡಿರುವ ಭಾರತ, ಹಗರಣಗಳು ದಿನನಿತ್ಯವಾಗಿರುವ ಭಾರತ, ಪ್ರಾಮಾಣಿಕ ಎಂಜಿನಿಯರ್ ಸತ್ಯೇಂದ್ರ ದುಬೆಯಂತಹವರು ಭ್ರಷ್ಟಾಚಾರ ಬಯಲು ಮಾಡಹೊರಟಿದ್ದಕ್ಕೆ ಕೊಲೆಗೀಡಾಗುವ ಭಾರತ ಪ್ರಕಾಶಿಸುತ್ತಿದೆ.

ಭಾರತ ಪ್ರಕಾಶಿಸಲು ವಾಜಪೇಯಿ ಸರ್ಕಾರ ಕಡಿದದ್ದು

(ಅವರ ಆಡಳಿತಾವಧಿಯಲ್ಲಿ ಒಟ್ಟುತ್ಪಾದನೆಯ ಬೆಳವಣಿಗೆಯ ದರ)

ರಾಜೀವ್ ಗಾಂಧಿ	ಶೇ 5.48
ವಿ.ಪಿ.ಸಿಂಗ್	ಶೇ. 6.15
ಪಿ.ವಿ.ನರಸಿಂಹರಾವ್	ಶೇ. 6.40
ಹೆಚ್.ಡಿ.ದೇವೇಗೌಡ	ಶೇ 6.30
ಎ.ಬಿ.ವಾಜಪೇಯಿ	ಶೇ 5.62

ನಿಜವೇನೆಂದರೆ ಒಂದು ನೂರು ಕೋಟಿ ಜನರಿರುವ ಈ ದೇಶದಲ್ಲಿ 43 ಕೋಟಿ ಗೂ ಹೆಚ್ಚಿನ ಜನ ಬಡತನದಲ್ಲಿ ಬದುಕುತ್ತಿದ್ದಾರೆ. ನಲವತ್ತು ಕೋಟಿ ಜನರಿಗೆ ಓದು ಬರಹ ಬರುವುದಿಲ್ಲ. ಸಾವಿರ ಶಿಶುಗಳು ಜನಿಸಿದರೆ ಅದರಲ್ಲಿ 95 ರಷ್ಟು ಐದು ವರ್ಷಗಳಿಗೆ ಮುನ್ನವೇ ಸಾಯುತ್ತವೆ. ಶಾಲೆಗೆ ಹೋಗಬೇಕಾದ ವಯಸ್ಸಿನ 20 ಕೋಟಿ ಮಕ್ಕಳಲ್ಲಿ ಮೂರನೇ ಒಂದು ಭಾಗ ಶಾಲೆಗೆ ಹೋಗುವುದಿಲ್ಲ.

ದೇಶದ ಅರ್ಧದಷ್ಟು ಜನರಿಗೆ ವಿದ್ಯುತ್ ಸಂಪರ್ಕ ಇಲ್ಲ. ಹಳ್ಳಿಗಾಡಿನ ಶೇ 63 ರಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕ ಇಲ್ಲ. ವಿದ್ಯುತ್ ಇರುವಲ್ಲೂ ಅದು ಎಲ್ಲಾ ಕಾಲ ಇರುವುದಿಲ್ಲ.

ಭಾರತದ ಶೇ 89 ಜನರಿಗೆ ಕುಡಿವ ನೀರು ಲಭ್ಯವಿದೆ ಎನ್ನುತ್ತದೆ ಸರ್ಕಾರ. ಇದರ ಅರ್ಥವೇನು ಗೊತ್ತೆ? ಪ್ರತಿ ಇನ್ನೂರೈವತ್ತು ಜನರಿಗೆ ಒಂದೇ ಒಂದು ಕೈಪಂಪು ಅಥವಾ ನಲ್ಲಿ ಅದು ಒಂದು ಮೈಲಿಗೂ ದೂರದಲ್ಲಿರಬಹುದು!! ಇಂತಹ ನಿಯಮದಡಿ ವರ್ಷ ಪೂರ್ತಿ ನೀರು ಸಿಗುತ್ತದೆಯೇ? ಇಲ್ಲ.

ವಿಶ್ವಬ್ಯಾಂಕ್ ಹೇಳುವುದನ್ನೇ ಓದಿ "..... ಗ್ರಾಮೀಣ ಭಾರತದಲ್ಲಿನ ಕುಡಿವ ನೀರಿನ ಸರಬರಾಜು ಕೆಲಸ ಮಾಡುವುದಿಲ್ಲ. ಯಾಕೆಂದರೆ ಅವು ಸುಸ್ಥಿತಿಯಲ್ಲಿರುವುದಿಲ್ಲ. ಅಲ್ಲದೆ ನಮಗೆ ತಜ್ಞರೇ ಹೇಳುತ್ತಿದ್ದಾರೆ - ಕುಡಿವ ನೀರಿನಲ್ಲಿ ಕೀಟನಾಶಕಗಳಿವೆ, ಗ್ರಾಮೀಣ ಜನತೆ ಇಂತಹ ನೀರನ್ನೇ ಕುಡಿಯುತ್ತಿದ್ದಾರೆ, ಇದರಿಂದಾಗಿಯೇ ಹಲವು ರೋಗ ರುಜಿನಗಳು ಬರುತ್ತಿವೆ. ಹುಟ್ಟುವ ಮಕ್ಕಳಲ್ಲಿ ಅಂಗ ವೈಕಲ್ಯ, ಊನತೆಗಳು ಕಾಣಿಸಿಕೊಳ್ಳುತ್ತಿವೆ......

ಭಾರತ ಪ್ರಕಾಶಿಸುತ್ತಿದೆ. ಆದರೆ ಯಾರ ಭಾರತ?

(ವರ್ಕಿಂಗ್ ಕ್ಲಾಸ್ ನಿಂದ)

★

ಐಎಂಎಫ್ ನ ಸಮಸ್ಯೆ

.... ಐಎಂಎಫ್‌ನೊಂದಿಗೆ ನನ್ನ ಸಮಸ್ಯೆ ಏನೆಂದರೆ ಮಾರುಕಟ್ಟೆಗಳಲ್ಲಿನ ಅದರ ನಂಬಿಕೆ ಸೈದ್ಧಾಂತಿಕವಾದುದೇ ಹೊರತು ವಾಸ್ತವವಾದ್ದಲ್ಲ. ಉದಾರೀಕರಣದ ಅದರನೀತಿಗಳು ಅಮೆರಿಕದ ಖಜಾನೆ ಮತ್ತು ವಿಶ್ವಬ್ಯಾಂಕ್‌ನ ನಡುವಿನ ಒಮ್ಮತದಿಂದಾಗಿ ಹೊರಹೊಮ್ಮಿದವು. ಇದರಲ್ಲಿ ಇದು ಯಾವುದೇ ಆರ್ಥಿಕ ಪ್ರತಿಪಾದನೆಯ ತಳಹದಿಯ ಮೇಲೂ ಆದುದಲ್ಲ. ಅದು ಅಭಿವೃದ್ಧಿಶೀಲ ದೇಶಗಳಲ್ಲಿನ ಮಾರುಕಟ್ಟೆಗಾಗಿ ನೀಡಿದ ಒತ್ತಡ. ಮಾರುಕಟ್ಟೆಗಳ ಮಿತಿಗಳ ಬಗೆಗೆ ಅವರದು ಜಾಣ ಕುರುಡು.

ಅಂತಾರಾಷ್ಟ್ರೀಯ ವ್ಯಾಪಾರ ಒಪ್ಪಂದಗಳು ನ್ಯಾಯಪರವಾದವಲ್ಲ. ಅಭಿವೃದ್ಧಿ ಹೊಂದಿದ ದೇಶಗಳು ವ್ಯಾಪಾರಕ್ಕಿರುವ ತಡೆಗಳನ್ನು ಇತರ ದೇಶಗಳು ತೊಡೆದು ಹಾಕಬೇಕೆನ್ನುತ್ತವೆ. ಆದರೆ ತಮ್ಮಲ್ಲಿನ ತಡೆಗಳನ್ನು ಅವು ತೊಡೆದುಹಾಕುವುದಿಲ್ಲ. ಇಲ್ಲಿ ವ್ಯಾಪಾರ ಮಾತುಕತೆ, ಚೌಕಾಸಿ ಪೂರ್ತಿ ಅವರ ಪರವಾಗೇ ಇದೆ. ಪರಿಣಾಮಗಳೂ ಸಹ.

ಜಮೈಕಾದಲ್ಲಿ ಅವರು ಕೃಷಿ ವ್ಯಾಪಾರಕ್ಕಿರುವ ತಡೆಗಳನ್ನು ತೊಡೆದು ಹಾಕಿದರು. ಅಮೆರಿಕದ ಸಹಾಯಧನ ಪಡೆದ ಕೃಷಿ ಜಮೈಕವನ್ನು ಮುಳುಗಿಸಿಬಿಟ್ಟಿತು. ಐಎಂಎಫ್ ಬಡ್ಡಿ ದರಗಳನ್ನು ಹೆಚ್ಚಿಸಿದಾಗ ಜಮೈಕದ ಯಾವುದೇ ಉದ್ದಿಮೆಗಳು ಉದ್ಧಾರವಾಗದ ಸ್ಥಿತಿ ಉಂಟಾಯಿತು.

ಮೂಲಭೂತವಾಗಿ ರಾಜಕೀಯ ಮತ್ತು ಆರ್ಥಿಕ ಜಾಗತೀಕರಣದಲ್ಲಿ ವೈರುಧ್ಯವಿದೆ. ಹೆಚ್ಚು ಹೆಚ್ಚು ದೇಶಗಳು ಜಾಗತೀಕರಣ ಮಾಡಹೊರಟರೆ ಜಾಗತಿಕವಾಗಿ ಇದನ್ನು ಪ್ರಜಾಸತ್ತಾತ್ಮಕವಾಗಿ ಮಾಡುವ ವ್ಯವಸ್ಥೆ ಇಲ್ಲ. ಅಮೆರಿಕದ ಇಂದಿನ ಆಡಳಿತ ಅಂತಾರಾಷ್ಟ್ರೀಯವಾಗಿ ಪ್ರಜಾಸತ್ತಾತ್ಮಕವಾಗಿ ವಿಚಾರಮಾಡುವುದಿಲ್ಲ. ಅದು ಪ್ರಜಾಸತ್ತಾತ್ಮಕತೆ ಬಗ್ಗೆ ಮಾತನಾಡುತ್ತದೆ. ಆದರೆ ತನಗೆ ಬೇಕಾದದ್ದನ್ನೇ ಮಾಡುತ್ತದೆ.

ಐಎಂಎಫ್ ಸ್ಪರ್ಧೆಯ ಬಗ್ಗೆ ಮಾತನಾಡುತ್ತದೆ. ಆದರೆ ತನಗೆ ಇಂತಹ ಸ್ಪರ್ಧೆಗಳು ಬೇಡವೆನ್ನುತ್ತದೆ.

ಜೋಸೆಫ್ ಸ್ಟಿಗ್ಲಿಡ್ಜ್,

ನೋಬೆಲ್ ಪ್ರಶಸ್ತಿ ವಿಜೇತ ಆರ್ಥಿಕ ತಜ್ಞ

★

ಹೆಸರು ದೇಶದ್ದು ಲಾಭ ಬಂಡವಾಳಿಗರದ್ದು

ಸಾರ್ವಜನಿಕ ವಲಯದ ಕಂಪನಿಗಳ ಮಾರಾಟ ಕೇಂದ್ರದ ಎನ್‌ಡಿಎ ಸರ್ಕಾರದ ಅತಿ ಪ್ರೀತಿಯ ಕೆಲಸ. ಯಾಕೆಂದರೆ ಇದು ದೇಶದ ಲಾಭದ ಹೆಸರಿನಲ್ಲಿ ಬಂಡವಾಳಿಗರಿಗೆ ಲಾಭ ಮಾಡಿಕೊಡುವ ಕೆಲಸ. ಮನೆ ಮುರುಕ ಕೆಲಸಗಳಲ್ಲಿ ಅತ್ಯಂತ ಖುಷಿ ಕಾಣುವ ಈ ಸರ್ಕಾರ ಈಗ ಲಾಭದಾಯಕ ಕಂಪನಿಗಳ ಶೇರುಗಳನ್ನು ಮೂರು ಕಾಸಿಗೆ ಮಾರತೊಡಗಿದೆ. ಬಂಡವಾಳಿಗರೂ ತಮ್ಮ ಆಟಗಳನ್ನು ಆಡತೊಡಗಿದ್ದಾರೆ.

ಐಪಿಸಿಎಲ್ ನ ಶೇರುಗಳನ್ನು 170 ರೂ.ಗಳಿಗೆ ಮಾರಲಾಗುತ್ತಿದೆ. ಚಿಲ್ಲರೆ ಹೂಡಿಕೆದಾರರಿಗೆ ಶೇ 5 ರಷ್ಟು ಸೋಡಿ ಕೊಡುತ್ತೇವೆಂದು ಬೇರೆ ಹೇಳಿಕೊಳ್ಳುತ್ತಿದೆ. ಈಗಾಗಲೇ ಬಹುತೇಕ ಶೇರುಗಳನ್ನು ರಿಲೈನ್ಸ್ ಎಂಬ ಖಾಸಗಿ ಕಂಪನಿಗೆ ಮಾರಿಬಿಟ್ಟಿರುವ ಸರ್ಕಾರ ಉಳಿಕೆ ಶೇ 29 ರಷ್ಟು ಶೇರುಗಳನ್ನು ಈಗ ಮಾರುಕಟ್ಟೆಯಲ್ಲಿ ಮಾರುತ್ತಿದೆ.

ಇದಲ್ಲದೆ ಐಬಿಪಿ ಮತ್ತು ಸಿಎಂಸಿ ಎಂಬ ಸರ್ಕಾರಿ ಕಂಪನಿಗಳ ಶೇರುಗಳನ್ನು ಸರ್ಕಾರ ಮಾರುತ್ತಿದೆ. ಈ ಎರಡೂ ಕಂಪನಿಗಳ ಶೇರುಗಳಿಗೆ ಕನಿಷ್ಠ ಬೆಲೆಯನ್ನು ಅದು ನಿರ್ದಿಷ್ಟಪಡಿಸಿದೆ. ಈ ಬೆಲೆಗಳು ಮಾರುಕಟ್ಟೆಯ ಬೆಲೆಗೆ ಸಮೀಪವಿದೆ ಎಂಬುದು ಸರ್ಕಾರದ ಹೇಳಿಕೆ. ಆದರೆ ಈ ಮಾರುಕಟ್ಟೆ ಬೆಲೆಗಳನ್ನು ಬಂಡವಾಳಿಗ ದಲ್ಲಾಳಿಗಳು ನಿರ್ಧರಿಸುತ್ತಾರೆಂಬುದು ಎಲ್ಲರಿಗೂ ಗೊತ್ತಿರುವ ವಿಷಯ.

ಕೇಂದ್ರದ ಶೇರು ಮಾರಾಟದ ಮಂತ್ರಿ ಅರುಣ್‌ಶೌರಿಯವರು ಈ ದಲ್ಲಾಳಿಗಳು ಶೇರುಗಳ ಬೆಲೆಗಳು ಏರುವಂತೆ / ಕುಸಿಯುವಂತೆ ತಮ್ಮ ಅನುಕೂಲಕ್ಕೆ ತಕ್ಕಂತೆ ಮಾಡುತ್ತಿದ್ದಾರೆ ಎಂಬ ಕೂಗನ್ನು ಹಾಕುತ್ತಿದ್ದಾರೆ. ಆದರೆ ಇದನ್ನು ತಡೆಯುವ ಯಾವುದೇ ಕೆಲಸವನ್ನು ಅವರು ಮಾಡುತ್ತಿಲ್ಲ.

ಹೇಗಿದೆ ಈ ಶೇರು ಮಾರಾಟದ ಕೆಲಸ?



ಇನ್ನೊಂದು ಹೊಸ ಪಕ್ಷ - ಫೀಲ್ ಗುಡ್ ಪಾರ್ಟಿ!

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ 500 ಕೋಟಿ ರೂ. (ಎಲ್ಲವೂ ಚೆನ್ನಾಗಿದೆ ಅನ್ನುವ ಅನಿಸಿಕೆ) 'ಫೀಲ್ ಗುಡ್' ಜಾಹಿರಾತಿನ ಪರಿಣಾಮ ಎಷ್ಟರ ಮಟ್ಟಿಗೆ ಆಗಿದೆ ಎಂದರೆ 'ಫೀಲ್ ಗುಡ್ ಪಾರ್ಟಿ' ಎಂಬ ಹೊಸ ಪಕ್ಷವೇ ಸ್ಥಾಪನೆಯಾಗಿದೆ. 'ಎಲ್ಲವೂ ಚೆನ್ನಾಗಿದೆ ಎಂದೆನಿಸುವ' ಯಾರು ಬೇಕಾದರೂ ಪಕ್ಷಕ್ಕೆ ಸದಸ್ಯರಾಗಬಹುದಂತೆ.


ಇದನ್ನು ಹುಟ್ಟಿ ಹಾಕಿದವರು ಹೆಸರಾಂತ ಚಲನಚಿತ್ರ ಹಾಸ್ಯನಟ ಹಾಗೂ ನಿರ್ದೇಶಕ ಜಸ್‌ಪಾಲ್ ಭಟ್ಟಿ. ಈ ಪಕ್ಷಕ್ಕೆ ಎರಡು ಚಿಹ್ನೆ ಒಂದು ನಗುತ್ತಿರುವ ನಾಯಿ, ಇನ್ನೊಂದು ನಗುತ್ತಿರುವ ಬೆಕ್ಕು. ಯಾಕೆಂದರ ಒಂದು ವೇಳೆ ಪಕ್ಷ ವಿಭಜನೆಗೊಂಡರೆ ಎರಡರಲ್ಲಿ ಒಂದು ಚಿಹ್ನೆಯನ್ನಾದರೂ ಉಳಿಸಿಕೊಳ್ಳಬಹುದಂತೆ! ಈ ಪಕ್ಷದಲ್ಲಿ ವಿದೇಶಿಯರೂ ಸದಸ್ಯರಾಗಬಹುದು, ಆದರೆ ಒಂದು ಶರತ್ತಿನ ಮೇಲೆ ಅವರು ವಿದೇಶಿ ಮೂಲದವರಾದರೆ ಅಷ್ಟೇ ಸಾಲದು, ವಿದೇಶಿ ನೋಟುಗಳನ್ನೂ ತರಬೇಕು.

'ನೀವು ಯಾರೊಂದಿಗೆ ಮೈತ್ರಿ ಮಾಡಿಕೊಳ್ಳುತ್ತೀರಿ' ಎಂದು ಪತ್ರಕರ್ತರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಜಸ್‌ಪಾಲ್ ಭಟ್ಟಿಯವರು 'ನಮಗೆ ಕಾಂಗ್ರೆಸ್ ಅಥವಾ ಬಿಜೆಪಿ ಎರಡೂ ಒಂದೇ. ಆವೆರಡೂ ಪಕ್ಷಗಳೊಂದಿಗೆ ಹೊಂದಾಣಿಕೆ ಮಾಡಿಕೊಳ್ಳಬಹುದು. ಏಕೆಂದರೆ ಹೇಗಾದರೂ ಮಾಡಿ ಅಧಿಕಾರ ಹಿಡಿಯುವುದು ನಮ್ಮ ಉದ್ದೇಶ. ಕಾಂಗ್ರೆಸ್ ಮತ್ತು ಬಿಜೆಪಿಯವರದ್ದೂ ಅದೇ ಉದ್ದೇಶ" ಎಂದು ಹೇಳಿದರು.

ಅಧಿಕಾರಕ್ಕೆ ಬಂದ ನಂತರ ಸರ್ಕಾರದ ಹಣದಿಂದ 'ಫೀಲ್ ಗುಡ್' ಸಂದೇಶವನ್ನು ಎಲ್ಲಾ ಟಿ.ವಿ. ಮತ್ತು ಪತ್ರಿಕೆಗಳ ಮೂಲಕ ನೀಡಲಾಗುವುದೆಂದು ಹೇಳಿದ ಭಟ್ಟಿಯವರು ಎಲ್ಲಾ ಬಡಜನರಿಗೆ "ನೀವು ಆರಾಮ ಆಗಿ ಇದ್ದೀರಿ' ಎಂದು ಸರ್ಟಿಫಿಕೇಟು ಬೇರೆ ಕೊಡುತ್ತಾರಂತೆ! ಶೇರು ಸೂಚ್ಯಂಕವನ್ನು (Sensex) ಮೇಲೇರಿಸುವುದೇ ಎಲ್ಲಾ ಬಡ ಜನರ ಘೋಷಣೆಯಾಗಬೇಕು ಎಂಬುದು ಫೀಲ್ ಗುಡ್ ಪಾರ್ಟಿಯ ಅಪೇಕ್ಷೆ! ವಾಹ್ ಎಲ್ಲೆಲ್ಲೂ ಫೀಲ್ ಗುಡ್.

ನಮ್ಮ ಆರೋಗ್ಯ ನಮ್ಮ ಕೈಯಲ್ಲಿ





2) ದುಬಾರಿ ಕಬ್ಬಿಣದ ಘಟಕಗಳು

ವಿಶ್ವ ಆರೋಗ್ಯ ಸಂಸ್ಥೆಯು ಫೇರಸ್ ಸಲ್ಫೇಟ್ ಎಂಬ ಕಬ್ಬಿಣದ ಘಟಕವನ್ನು ಉಪಯೋಗಿಸಲು ಸೂಚಿಸುತ್ತದೆ.

ಈ ಕಬ್ಬಿಣದ ಘಟಕವುಳ್ಳ ರಕ್ತ ವೃದ್ಧಿಸುವ ಮಾತ್ರೆಗಳನ್ನು ತಯಾರಿಸಿ, ಲಾಭವನ್ನು ಸೇರಿಸಿಕೊಂಡು 10 ರಿಂದ 20 ಪೈಸೆಗೆ ಮಾರಲು ಸಾಧ್ಯ. ಆದರೆ ಮಾರುಕಟ್ಟೆಯಲ್ಲಿ ದೊರಕುವ ಕಬ್ಬಿಣದ ಮಾತ್ರೆಗಳ ಬೆಲೆ 1 ರೂ.ಯಿಂದ 5 ರೂ.ಗಳವರೆಗೆ, ಅಂದರೆ 25 ಪಟ್ಟು ದುಬಾರಿ.

ದುಬಾರಿ ಬೆಲೆಯನ್ನು ಸಮರ್ಥಿಸಿಕೊಳ್ಳಲು ಫೆರಸ್ ಸಲ್ಫೇಟ್ ಬದಲು ಬೇರೆ ಬೇರೆ ಕಬ್ಬಿಣದ ಘಟಕಗಳನ್ನು ಬಳಸಲಾಗುತ್ತದೆ ಹಾಗೂ ಹೀಗೆ ಉಪಯೋಗಿಸಿದ ಘಟಕ ಹೆಚ್ಚು ಪರಿಣಾಮಕಾರಿಯೆಂದು ಪ್ರತಿಪಾದಿಸುತ್ತವೆ. ಔಷಧಿ ಶಾಸ್ತ್ರದ ಬೈಬಲ್ ಎಂದೇ ಕರೆಯಲ್ಪಡುವ ಗುಡ್‌ಮನ್ ಗಿಲ್‌ಮನ್ ಎಂಬ ಔಷದಿ ಶಾಸ್ತ್ರದ ಪುಸ್ತಕ ಕಬ್ಬಿಣದ ಘಟಕದ ಬಗ್ಗೆ ಹೀಗೆ ಹೇಳುತ್ತದೆ. "ಫೆರಸ್ ಖನಿಜದ ಬದಲಾವಣೆಯಿಂದಾಗಿ, ಔಷಧಿ ಹೀರುವಿಕೆ, ಔಷಧಿಯು ಜೀವಕ್ಕೆ ದಕ್ಕುವಿಕೆ ಬದಲಾವಣೆಯಾಗುವುದಿಲ್ಲ. ಸಲ್ಫೇಟ್ ಫ್ಯಾಮರೇಟ್, ಸಕ್ಸಿನೇಟ್, ಗ್ಲೂಕೊನೇಟ್ ಹಾಗೂ ಇತರೇ ಕಬ್ಬಿಣದ ಖನಿಜಗಳು ಒಂದೇ ಪ್ರಮಾಣದಲ್ಲಿ ದೇಹದಿಂದ ಹೀರಲ್ಪಡುತ್ತದೆ. ಇಂದು ಮಾರುಕಟ್ಟೆಯಲ್ಲಿ ಬೇರೆ ಬೇರೆ ತರಹದ ಕಬ್ಬಿಣದ ಖನಿಜಗಳು ದೊರಕುತ್ತಿದ್ದು, ಫೆರಸ್ ಸಲ್ಫೇಟ್‌ಗಿಂತ ಹೆಚ್ಚು ಪ್ರಯೋಜಕ ಎಂಬ ಮಾತಿಗೆ ಅರ್ಥವಿಲ್ಲ".

ಹೀಮಪ್ ಚ್ಯೂ ಮಾತ್ರೆಗಳಲ್ಲಿ ಐರನ್ ಮಾಲ್ಟೋಸ್ ಎಂಬ ಜಾತಿ ಸೂಚಕ ಔಶಧಿ ಇದೆ.

ಫೆಕಾಂಟಿನ್ ಎಫ್ ಮಾತ್ರೆಗಳಲ್ಲಿ ಫೆರಸ್‌ಗ್ಲೈಸೀನ್ ಸಲ್ಫೇಟ್ ಎಂಬ ಜಾತಿಸೂಚಕ ಔಷಧಿ ಇದೆ.

ಆಸ್ಟಿಫರ್ ಝುಡ್ ಮಾತ್ರೆಗಳಲ್ಲಿ ಫೆರಸ್ ಫ್ಯೂಮರೇಟ್ ಜಾತಿಸೂಚಕ ಔಷಧಿ ಇದೆ.

ಟೆಲ್‌ಫೆರಾನ್ ಮಾತ್ರೆಗಳಲ್ಲಿ ಫೆರಸ್ ಅಮೈನೋವೇಟ್ ಜಾತಿಸೂಚಕ ಔಷಧಿ ಇದೆ.

ಸಿಪಾನ್ ಮಾತ್ರೆಗಳಲ್ಲಿ ಐರನ್ ಹೈಡ್ರಾಕ್ಸಿಪಾಲಿಮಲ್ಟೋಸ್ ಜಾತಿಸೂಚಕ ಔಷಧಿ ಇದೆ.

ಫೀಪಾಲ್ ಮಾತ್ರೆಗಳಲ್ಲಿ ಫೆರಸ್ ಸಲ್ಫೇಟ್ ಜಾತಿಸೂಚಕ ಔಷಧಿ ಇದೆ.

ಡೆಕ್ಸಾರೇಂಜ್ ಮಾತ್ರೆಗಳಲ್ಲಿ ಫೆರಿಕ್ ಅಮೋನಿಯಂ ಸಿಟ್ರೇಟ್ ಜಾತಿಸೂಚಕ ಔಷಧಿ ಇದೆ.

ಐರೆಕ್ಸ್ 12 ಮಾತ್ರೆಗಳಲ್ಲಿ ಐರನ್ ಕೋಲೀನ್ ಸಿಟ್ರೇಟ್ ಜಾತಿಸೂಚಕ ಔಷಧಿ ಇದೆ.

ಜಗತ್ತಿನೊಂದು ಸುತ್ತು

ಶರತ್ ಚಂದ್ರ

ಇರಾಕ್ ಅತಿಕ್ರಮಣ ಮಾಡಿ ಆಳುತ್ತಿರುವ ಅಮೆರಿಕದ ವಿರುದ್ಧದ ಪ್ರತಿರೋಧ ಹೊಸ ಹಂತ ತಲುಪಿದೆ. ಈಗ ಇರಾಕಿ ಗೆರಿಲ್ಲಾ ದಾಳಿಗೆ ತುತ್ತಾಗುತ್ತಿರುವವರು ಅಮೆರಿಕನ್ ಸೈನಿಕರಲ್ಲ. ಅಮೆರಿಕನ್ ಕೈಗೊಂಬೆ ಸರ್ಕಾರದ ಸಿಬ್ಬಂದಿ, ಅಮೆರಿಕನ್ ಸೈನ್ಯ ತರಬೇತು ಮಾಡಿದ ಪೋಲೀಸರು. ಜೂನ್ ಹೊತ್ತಿಗೆ ಇರಾಕ್‌ನಲ್ಲಿ ಇರಾಕಿಯರೇ ಇರುವ ಸರ್ಕಾರ ರಚಿಸಿ ರಾಜಕೀಯವಾಗಿ ಕಾಲ್ತೆಗೆಯುವ ನಾಟಕಕ್ಕೂ ತೊಡಕಾಗಿದೆ. ಶಿಯಾ ಮುಸ್ಲಿಂ ಗುಂಪುಗಳು ಚುನಾವಣೆ ನಡೆಸಿ, ಚುನಾಯಿತ ಸರ್ಕಾರ ರಚಿಸಬೇಕು ಎಂದು ವ್ಯಾಪಕ ಚಳುವಳಿ ಹೂಡಿದ್ದಾರೆ. ಇವೆಲ್ಲಾ ಸೇರಿ 'ವಿಯೆಟ್ನಾಮ್'ಗಿಂತ ಭೀಕರ ಭವಿಷ್ಯ ಕಾದಿದೆ ಅಮೆರಿಕಕ್ಕೆ ಇರಾಕ್‌ನಲ್ಲಿ.



ಇರಾಕ್ ಪ್ರತಿರೋಧದಲ್ಲಿ ಹೊಸ ಹಂತ

ಅಮೆರಿಕಕ್ಕೆ ಕಾದಿದೆ ಭೀಕರ ಭವಿಷ್ಯ!

ಇರಾಕ್‌ನಲ್ಲಿ ಈಗ ಗೆರಿಲ್ಲಾ ದಾಳಿಗೆ ತುತ್ತಾಗುತ್ತಿರುವವರು ಇರಾಕಿ ಸರ್ಕಾರದ ಸಿಬ್ಬಂದಿ. ಪೋಲೀಸರು ಮುಖ್ಯವಾಗಿ ಕಳೆದ ಕೆಲವು ವಾರಗಳಿಂದ ಬಲಿಯಾಗುತ್ತಿದ್ದಾರೆ. ಅಮೆರಿಕನ್ ಸೈನ್ಯ ಪಟ್ಟಣಗಳಲ್ಲಿ 'ಕಾನೂನು-ವ್ಯವಸ್ಥೆ' ಕಾಪಾಡುವ ಕೆಲಸದಿಂದ ದೂರ ಸರಿದು, ಇರಾಕಿಗಳೇ ಇರುವ ಪೋಲೀಸರು ಈ ಕರ್ತವ್ಯ ನಿರ್ವಹಿಸಲು ಆರಂಭವಾಗುತ್ತಿದ್ದಂತೆ, ಗೆರಿಲ್ಲಾಗಳು ತಮ್ಮ ತಂತ್ರ ಬದಲಾಯಿಸಿದ್ದಾರೆ. ಇತ್ತೀಚೆಗೆ ಇರಾಕಿ ಪೋಲೀಸರು ಉತ್ತರ ಇರಾಕಿನ ಮೋಸುಲ್ ಪಟ್ಟಣದ ತಮ್ಮ ತಿಂಗಳ ಸಂಬಳ ಪಡೆಯಲು ಕ್ಯೂ ನಿಂತಿದ್ದಾಗ ಇಬ್ಬರು 'ಆತ್ಮಹತ್ಯಾ ಗೆರಿಲ್ಲಾ'ಗಳು ಬಾಂಬ್ ಸಿಡಿಸಿ ಭಾರಿ ಸಾವು-ನೋವುಗಳನ್ನು ಉಂಟು ಮಾಡಿದ್ದಾರೆ. ಇಂತಹ ದಾಳಿಗಳು ದಿನೇ ದಿನೇ ಇರಾಕಿನ ಹಲವು ಭಾಗಗಳಿಂದ ವರದಿಯಾಗಿದೆ. 4-5 ಜನರಿಂದ 150 ಜನರನ್ನು ಬಲಿತೆಗೆದುಕೊಂಡ ದೊಡ್ಡ 'ಆತ್ಮಹತ್ಯಾದಾಳಿ'ಗಳು ವರದಿಯಾಗಿವೆ.

ಕುರ್ದಿಶ್ ಗೆರಿಲ್ಲಾಗಳು

ಉತ್ತರ ಇರಾಕ್‌ನಲ್ಲಿ ಅಮೆರಿಕನ್ ಸೈನ್ಯಕ್ಕೆ ಮತ್ತು ಅದರ ಇರಾಕಿ ಕೈಗೊಂಬೆ ಸರ್ಕಾರಕ್ಕೆ ಹೆಚ್ಚಿನ ನಿಯಂತ್ರಣವಿತ್ತು. ಏಕೆಂದರೆ ಉತ್ತರ ಇರಾಕ್‌ನ ಹೆಚ್ಚಿನ ಭಾಗಗಳು, ಕುರ್ದಿಶ್ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಜಾಗ. ಸದ್ದಾಂ ಸರ್ಕಾರದಿಂದ ಕುರ್ದಿಶ್ ಅಲ್ಪಸಂಖ್ಯಾತರ ಸತತ ದಮನದಿಂದಾಗಿ, ಪ್ರಮುಖ ಕುರ್ದಿಶ್ ಗೆರಿಲ್ಲಾ ಪಡೆಗಳು, ರಾಜಕೀಯ ಸಂಘಟನೆಗಳು ಅಮೆರಿಕಾದ ಇರಾಕಿ ಅತಿಕ್ರಮಣಕ್ಕೆ ಬೆಂಬಲ ನೀಡಿದ್ದವು. ಅಮೆರಿಕನ್ ಕೈಗೊಂಬೆ ಸರ್ಕಾರದಲ್ಲಿ ಭಾಗವಹಿಸಿದವು. ಉತ್ತರ ಭಾಗದಲ್ಲಿ 'ಇರಾಕಿ' ಸರ್ಕಾರದ ಸಿಬ್ಬಂದಿ ಈ ಪಕ್ಷಗಳಿಗೆ ಸೇರಿದವರೇ ಹೆಚ್ಚು. ಅಮೆರಿಕದ ಜತೆ ಸಹಕರಿಸುತ್ತಿರುವ ಈ ಪಕ್ಷಗಳಿಗೆ ಸಾಕಷ್ಟು ಕುರ್ದಿಶ್ ಜನಾಂಗದ ಬೆಂಬಲವಿರುವುದರಿಂದ ಈ ಭಾಗದಲ್ಲಿ ಇಂತಹ ಘಟನೆಗಳು ನಡೆಯಲಾರವು ಎಂಬ ಭರವಸೆಯೂ ಅಮೆರಿಕಕ್ಕೆ ಇಲ್ಲ. 150 ಜನ ಸತ್ತ ಇತ್ತೀಚಿನ ದೊಡ್ಡ 'ಆತ್ಮಹತ್ಯಾ ಧಾಳಿ' ಈ ಪ್ರದೇಶದ ಇರ್ಬಿಲ್‌ನಲ್ಲಿ ನಡೆದಿದ್ದು. ಈ ಧಾಳಿಯಲ್ಲಿ ಪೋಲೀಸರಲ್ಲದೆ ಇರ್ಬಿಲ್‌ನ ಗವರ್ನರ್, ಎರಡು ಕುರ್ದಿಶ್ ರಾಜಕೀಯ ಪಕ್ಷಗಳ ರಾಜಕೀಯ ಪಕ್ಷಗಳ ಉನ್ನತ ನಾಯಕರು ಮಡಿದರು. 'ಹರ್ಕತ್-ಉಲ್-ಅನ್ಸಾರ್' ಎಂಬ ಕುರ್ದಿಶ್ ಗೆರಿಲ್ಲಾ ಗುಂಪು ಈ ದಾಳಿ ನಡೆಸಿತು ಎನ್ನಲಾಗಿದೆ.

ತಲೆ ಕೆಳಗು

ಬೇರೆಡೆಯ ಗೆರಿಲ್ಲಾ ಗುಂಪುಗಳು ಅಮೆರಿಕನ್ನರ ಜತೆ ಶಾಮೀಲಾಗಿರುವ ಇರಾಕಿಗಳನ್ನು ಮುಖ್ಯ ಗುರಿಯಾಗಿಸಿರುವುದು ರಾಜಕೀಯ ವೀಕ್ಷಕರಿಗೆ ಆಶ್ಚರ್ಯ ತಂದಿದೆ. ಸಾಮಾನ್ಯವಾಗಿ ರಾಷ್ಟ್ರೀಯ ವಿಮೋಚನಾ ಗೆರಿಲ್ಲಾ ಪಡೆಗಳು ವಿದೇಶಿ ಪಡೆಗಳ ಮೇಲೆ ಗುರಿ ಇಡುತ್ತಾರೆ. ಮೊದಲ ಹಂತದಲ್ಲಿ ಇರಾಕಿ ಪಡೆಗಳೂ ಅದೇ ಮಾಡಿದ್ದವು. ಇರಾಕಿಗಳು ದಾಳಿಗೆ ಗುರಿಯಾಗದಂತೆ ಜಾಗ್ರತೆ ವಹಿಸುತ್ತಿದ್ದವು.

ಇರಾಕಿ ಗೆರಿಲ್ಲಾಗಳ ಹೊಸ ತಂತ್ರದಿಂದ ಜನಬೆಂಬಲ ಕಳೆದುಕೊಳ್ಳಬಹುದೆಂಬ ಶಂಕೆ ಹಲವರಿಗಿತ್ತು. ಆದರೆ ಅಮೆರಿಕದ ಜತೆ ಶಾಮೀಲಾಗಿರುವ ಇರಾಕಿಗಳ ಮೇಲೆ ದಾಳಿಗೆ ಜನತೆಯಿಂದ ಬೆಂಬಲ ಸಿಕ್ಕಿದೆ ಎಂದು ಅಮೆರಿಕನ್ ಸುದ್ದಿ ಮಾಧ್ಯಮಗಳೇ ವರದಿ ಮಾಡಿವೆ. ಅಮೆರಿಕನ್ ಕೈಗೊಂಬೆ ಸರ್ಕಾರ, ಅಮೆರಿಕನ್ ಸೈನ್ಯದ ಅತಿಕ್ರಮಣ ಅಷ್ಟು ಜನತೆಯ ಕೋಪಕ್ಕೆ ತುತ್ತಾಗಿದೆ - ಎಂಬುದು ಇದರ ಅರ್ಥ. ಇದು ಖಂಡಿತ ಅಮೆರಿಕನ್ ಸರ್ಕಾರಕ್ಕೆ ಒಳ್ಳೆಯ ಸುದ್ದಿ ಅಲ್ಲ. ಈವರೆಗೆ ಸುಮಾರು 300 ಇರಾಕಿ ಪೋಲೀಸರು ಇಂತಹ ದಾಳಿಗಳಲ್ಲಿ ಸತ್ತಿದ್ದು, ಅಮೆರಿಕನ್ನರ ರಾಜಕೀಯ ಯೋಜನೆಯೆಲ್ಲಾ ತಲೆಕೆಳಗಾಗುತ್ತಿದೆ. ಮೊದಲ ಹಂತದಲ್ಲಿ ಅಮೆರಿಕನ್ ಸೈನಿಕರನ್ನು ಜನನಿಬಿಡ ಪಟ್ಟಣಗಳ ಕಾನೂನು-ವ್ಯವಸ್ಥೆ ಕಾಪಾಡುವ ಕರ್ತವ್ಯದಿಂದ ಮುಕ್ತಗೊಳಿಸುವುದು. ಈ ಕೆಲಸದಲ್ಲಿ ಅಮೆರಿಕದ ಸೈನ್ಯದ ವಿಫಲತೆ ಎಲ್ಲರಿಗೂ ಗೊತ್ತಿರುವಂತಹದೇ. ಅದಕ್ಕಾಗಿ ಅಮೆರಿಕನ್ ಸೈನ್ಯ ತರಬೇತಿ ನೀಡಿದ ಪೋಲೀಸರ ಪಡೆ ತಯಾರಿಸುವುದು. ಇರಾಕಿ ಪೋಲೀಸರು ಜನತೆಗೆ ಹೆಚ್ಚು ಸ್ವೀಕರಾರ್ಹರಾಗಿರುತ್ತಾರೆ. ಅಷ್ಟರಮಟ್ಟಿಗೆ ಸರ್ಕಾರದ ಮೇಲೆ ಇರಾಕಿ ಜನತೆ ಕೋಪ ತಣ್ಣಗಾಗಬಹುದು. ಅಲ್ಲದೆ ಕಾನೂನು-ವ್ಯವಸ್ಥೆ ಕಾಪಾಡುವುದರಲ್ಲಿ ವಿಫಲತೆ ಅಮೆರಿಕನ್ ಸೈನ್ಯದ ತಲೆ ಮೇಲೆ ಬರುವುದಿಲ್ಲ ಎಂಬುದು ಅಮೆರಿಕನ್ ಲೆಕ್ಕಾಚಾರ. ಅಮೆರಿಕನ್ ಸೈನ್ಯ ನಗರಗಳ ಆಚೆ ಇರಾಕ್ ಮೇಲೆ ರಾಜಕೀಯ ನಿಯಂತ್ರಣ ಕೈತಪ್ಪಿ ಹೋಗದಂತೆ, ಮುಂದಿನ ಯಾವುದೇ ಸರ್ಕಾರ ಅಮೆರಿಕನ್-ವಿರೋಧಿ ಕಾರ್ಯಾಚರಣೆ ಕೈಗೊಳ್ಳದಂತೆ ಬೆದರಿಕೆಯನ್ನು ಮಾತ್ರ ಬಳಸಬಹುದು. ಎರಡನೇ ಹಂತದಲ್ಲಿ (ಚುನಾವಣೆ ಇಲ್ಲದೆ) ನೇಮಕವಾದ ಪಾರ್ಲಿಮೆಂಟು, 'ಪ್ರಜಾಪ್ರಭುತ್ವ' ಇರಾಕಿ ಸರ್ಕಾರ ರಚಿಸುವುದು, ಜೂನ್ ಹೊತ್ತಿಗೆ ಎರಡು ಹಂತಗಳಲ್ಲಿ ಈ ಯೋಜನೆ ಕಾರ್ಯಗತ ಮಾಡುವುದು. ಇದರಿಂದ ಮುಂಬರುವ ಅಧ್ಯಕ್ಷೀಯ ಚುನಾವಣೆಯಲ್ಲೂ ಅನುಕೂಲವಾಗ ಬಹುದು ಎಂದು ಬುಶ್ ಲೆಕ್ಕಾಚಾರ. ಇರಾಕ್‌ನಲ್ಲಿ ಶಾಂತಿ ನೆಲೆಸಿದೆ. ಪ್ರಜಾಪ್ರಭುತ್ವ ನೆಲೆಸಿದೆ. ಇರಾಕಿಯರೇ ಇರಾಕನ್ನು ಆಳುತ್ತಿದ್ದಾರೆ ಎನ್ನಬಹುದು ಎಂಬ ಲೆಕ್ಕಾಚಾರ.

ಆದರೆ ಇರಾಕಿ ಗೆರಿಲ್ಲಾಗಳ ಹೊಸ ತಂತ್ರ ಅಮೆರಿಕನ್ ಲೆಕ್ಕಾಚಾರಗಳನ್ನು ತಲೆ ಕೆಳಗು ಮಾಡಿದೆ. ಸಾಲದೆಂಬಂತೆ ಅಮೆರಿಕ ತನ್ನ ಬೆಂಬಲಕ್ಕೆ ಇರುತ್ತಾರೆ ಎಂದುಕೊಂಡ ಶಿಯಾ ಅಲ್ಪಸಂಖ್ಯಾತ ಜನಾಂಗದಿಂದಲೂ ಏಟು ತಿನ್ನುತ್ತಿದ್ದಾರೆ. ಸದ್ದಾಂ ಹುಸೇನ್ ಆಡಳಿತದಲ್ಲಿ ರಾಜಕೀಯ ಅಧಿಕಾರದಲ್ಲಿ ವಂಚಿತರಾಗಿದ್ದ ಶಿಯಾಗಳು ಅಮೆರಿಕ ಅತಿಕ್ರಮಣ ಪರವಾಗಿರದಿದ್ದರೂ ಸದ್ದಾಂ ಹುಸೇನ್ ಆಡಳಿತ ಬಿದ್ದು ಹೋಗಿದ್ದು 'ಒಳ್ಳೆಯದೇ ಆಯಿತು' ಎನ್ನುವಂತಹ ತಟಸ್ಥ ಧೋರಣೆ ಕಂಡಿತ್ತು. ಅದು ತೀವ್ರವಾಗಿ ಬದಲಾಗಲು ಆರಂಭಿಸಿದೆ. ಶಿಯಾದ ಉನ್ನತ ಧಾರ್ಮಿಕ ನಾಯಕ ಸಾರ್ವತ್ರಿಕ ಚುನಾವಣೆ ಮೂಲಕವೇ ಮುಂದಿನ ಇರಾಕಿ ಸರ್ಕಾರ ರಚಿತವಾಗಬೇಕು. ಈ ಬೇಡಿಕೆಗೆ ಒತ್ತಾಯ ತರುವ ಹಲವ ಭಾರಿ ಪ್ರದರ್ಶನಗಳನ್ನು ನಡೆಸಿದ್ದು, ಅಮೆರಿಕದ ಯೋಜನೆಯನ್ನು ತಲೆಕೆಳಗು ಮಾಡಿದೆ. ಶಿಯಾಗಳು ತಮ್ಮದೇ ಗೆರಿಲ್ಲಾ ಪಡೆಗಳನ್ನು ರಚಿಸಿದ್ದಾರೆ ಎಂದೂ ವರದಿಯಾಗಿದೆ. ಅತ್ಯಂತ ವೈವಿಧ್ಯಮಯ ರಾಜಕೀಯ ಧೋರಣೆಗಳನ್ನು ಹೊಂದಿದ್ದರೂ, ಗೆರಿಲ್ಲಾ ಪಡೆಗಳು ಅತ್ಯಂತ ಸಂಯೋಜಿತವಾಗಿ ಕೆಲಸ ಮಾಡುತ್ತಿದ್ದಾರೆ ಎಂಬುದು ಅಮೆರಿಕಕ್ಕೆ ಇನ್ನೊಂದು ಅನಿರೀಕ್ಷಿತ ಆಘಾತ.



ದಾಳಿ ನಿಂತಿಲ್ಲ

ಗೆರಿಲ್ಲಾ ಪಡೆಗಳು ಈಗ ಅಮೆರಿಕನ್ನರ ಜತೆ ಶಾಮೀಲಾಗಿರುವ ಇರಾಕಿಗಳ ಮೇಲೆ ದಾಳಿ ನಿಂತಿಲ್ಲ. ಕಡಿಮೆಯಾಗಿದೆ ಅಷ್ಟೆ. ನವೆಂಬರ್‌ನಲ್ಲಿ 94 ಅಮೆರಿಕನ್ ಸೈನಿಕರು ದಾಳಿಯಲ್ಲಿ ಮಡಿದರೆ, ಜನವರಿಯಲ್ಲಿ 30 ಕ್ಕೆ ಇಳಿದಿದೆ. ಆದರೆ 'ದಿನಕ್ಕೊಂದು ಅಮೆರಿಕನ್ ಸೈನಿಕನ ಬಲಿ'ಯ ಸ್ಕೋರು ಅಮೆರಿಕನ್ನರ ಮೇಲೆ ಇನ್ನೂ ಸಾಕಷ್ಟು ರಾಜಕೀಯ ಒತ್ತಡ ಹೇರಿದೆ. ಒಟ್ಟಾರೆಯಾಗಿ ಅಮೆರಿಕ 'ವಿಯೆಟ್ನಾಮ್'ಗಿಂತಲೂ ಹೆಚ್ಚು ಅವಮಾನಕಾರಿಯಾದ ರೀತಿಯಲ್ಲಿ, ಇರಾಕ್‌ನಿಂದ ಸೈನ್ಯ ವಾಪಸು ಪಡೆಯುವ ಪರಿಸ್ಥಿತಿ ಬರಬಹುದು ಎಂದು ಹಲವು ರಾಜಕೀಯ ವೀಕ್ಷಕರ ಅಭಿಪ್ರಾಯ. ಅದೇ ಸಮಯದಲ್ಲಿ, ಇರಾಕ್‌ನಲ್ಲಿ ಪೂರ್ಣ ಅರಾಜಕತೆ, ಆಂತರಿಕ ಯುದ್ಧ ಹರಡಬಹುದು ಎಂಬ ಕರಾಳ ಭವಿಷ್ಯ ಎಲ್ಲರನ್ನು ಕಾಡುತ್ತಿದೆ.

"ಇರಾಕ್‌ನಲ್ಲಿ ಸಾಮೂಹಿಕ ವಿನಾಶದ ಅಸ್ತ್ರಗಳು ಎಲ್ಲಿ?"

ಇರಾಕ್‌ನಲ್ಲಿ ಕಾನೂನು-ವ್ಯವಸ್ಥೆ-ಶಾಂತಿ ಕಾಪಾಡಲು ಸಾಧ್ಯವಾಗಿರುವುದು, ಕೈಗೊಂಬೆ ಸರ್ಕಾರದ ಮೇಲೆ ಜನ ರೊಚ್ಚಿಗೆದ್ದಿರುವುದು ಮಾತ್ರವಲ್ಲ, ಇರಾಕಿ ಯುದ್ಧ ಮತ್ತು ಅತಿಕ್ರಮಣ ರೂವಾರಿಗಳಾದ ಬುಶ್-ಬ್ಲೇರ್‌ದ್ವಯರು, ಆಂತರಿಕವಾಗಿ ರಾಜಕೀಯವಾಗಿ ತೀವ್ರ ಪರಿಣಾಮ ಎದುರಿಸಬೇಕಾಗಿದೆ. ಎರಡೂ ದೇಶಗಳಲ್ಲಿ ಇರಾಕಿ-ಯುದ್ಧಕ್ಕೆ ನೆಪವಾದ ಸದ್ದಾಂ ಹುಸೇನರ 'ಸಾಮೂಹಿಕ ವಿನಾಶದ ಅಸ್ತ್ರಗಳು' ಎಲ್ಲಿ? ಎಂಬ ಪ್ರಶ್ನೆ ವ್ಯಾಪಕವಾಗಿ ಮುಂದೆ ಬಂದಿದೆ. ಈ ಎರಡೂ ನಾಯಕರು ಇರಾಕ್ ಅತಿಕ್ರಮಣದ ಯುದ್ಧಕ್ಕೆ ನೆಪವಾಗಿ ಇರಾಕಿನಲ್ಲಿರುವ 'ಸಾಮೂಹಿಕ ವಿನಾಶದ ಅಸ್ತ್ರಗಳ ನಾಶದ' ಗುರಿಯನ್ನು ಬಳಸಿದ್ದರು. ಇದುವರೆಗೆ ಇರಾಕ್‌ನಲ್ಲಿ ಇಂತಹ ಯಾವುದೇ ಅಸ್ತ್ರಗಳು ಪತ್ತೆಯಾಗಿಲ್ಲ. ಸಾಲದ್ದಕ್ಕೆ ಶಸ್ತ್ರಾಸ್ತ್ರ ಪರೀಕ್ಷಣಾ ತಂಡದ ಅಮೆರಿಕದ ಸದಸ್ಯ ಇರಾಕ್‌ನಲ್ಲಿ ಅಂತಹ ಅಸ್ತ್ರಗಳು ಇರಲಿಲ್ಲ. ಈಗಲೂ ಅಲ್ಲ ಎಂದು ಹೇಳಿದ್ದು ಈ ಯುದ್ಧ-ಕೋರ ಅವಳಿಗಳಿಗೆ ಇನ್ನಷ್ಟು ತಲೆನೋವು ಉಂಟು ಮಾಡಿದೆ. ಇತ್ತೀಚೆಗೆ ಬ್ಲೇರ್ ಇರಾಕ್‌ನಲ್ಲಿ ಇತ್ತೀಚೆಗೆ ಇಂತಹ ಅಸ್ತ್ರಗಳು ಪತ್ತೆಯಾಗಿವೆ ಎಂಬ ಹೇಳಿಕೆ ನೀಡಿದ್ದು, ಅಮೆರಿಕನ್ ಅಧಿಕಾರಿಗಳು ಆ ಸುದ್ದಿಯನ್ನು ಅಲ್ಲಗಳೆದಿದ್ದು ಇನ್ನಷ್ಟು 'ರಾಜಕೀಯ ಅವಮಾನ'ಕ್ಕೆ ಕಾರಣವಾಗಿವೆ.


ಗೂಢಚಾರ ಇಲಾಖೆ ಮೇಲೆ ಗೂಬೆ ಕೂರಿಸುವ ಯತ್ನ

ಇವರಿಬ್ಬರ ರಾಜಕೀಯ ವಿರೋಧಿಗಳು ಅವರ ಪಕ್ಷದ ಒಳಗೂ, ಹೊರಗೂ ಮತ್ತು ವ್ಯಾಪಕ ಶಾಂತಿ ಚಳುವಳಿ, ಸಾಮಾನ್ಯ ಜತೆ "ನೀವು ನಮಗೆ ಹಸಿಹಸಿ ಸುಳ್ಳು ಹೇಳಿದಿರಾ?" ಎಂದು ಕೇಳಲಾರಂಭಿಸಿದ್ದಾರೆ. ಈ ಒತ್ತಡದಿಂದ ಮೊದಲು ಬುಶ್, ಆಮೇಲೆ ಬ್ಲೇರ್ ಸಹ ಈ ಬಗ್ಗೆ ತನಿಖೆಗೆ ಆಜ್ಞೆ ಮಾಡಬೇಕಾಗಿದೆ. ಗೂಢಚಾರ ಪಡೆಗಳ ರಹಸ್ಯ ವರದಿ ತಪ್ಪಾಗಿರಬಹುದು ಎಂದು ಈ ರಾಜಕೀಯ ನಿರ್ಧಾರಕ್ಕೆ, ಗೂಢಚಾರ ಇಲಾಖೆ ಮೇಲೆ ಗೂಬೆ ಕೂರಿಸುವ ಪ್ರಯತ್ನ ಇಬ್ಬರೂ ನಡೆಸಿದ್ದಾರೆ. ಬ್ರಿಟನ್‌ನಲ್ಲಿ ಗೂಢಚಾರ ವರದಿಗೆ 'ಬಣ್ಣ ಬಳಿದು' ಸರ್ಕಾರ ಪಾರ್ಲಿಮೆಂಟು ಮುಂದೆ ಮಂಡಿಸಿತು ಎಂಬ ರಕ್ಷಣಾ ಇಲಾಖೆ ಅಧಿಕಾರಿಯನ್ನು ಉದ್ಧರಿಸಿ ಬಿಬಿಸಿ ವರದಿ ದೊಡ್ಡ ಹಗರಣವೇ ಸೃಷ್ಟಿ ಮಾಡಿದೆ. ಆ ಅಧಿಕಾರಿ ಆತ್ಮಹತ್ಯೆ, ಈ ಬಗ್ಗೆ ತನಿಖಾ ಸಮಿತಿ ಬಿಬಿಸಿ 'ತಪ್ಪಿತಸ್ಥ' ಎಂದಿದ್ದು, ಅದರ ತೀರ್ಪಿನ ಬಗ್ಗೆ ವ್ಯಾಪಕ ತಿರಸ್ಕಾರ ಬ್ಲೇರ್‌ಗೆ ಇನ್ನಷ್ಟು ರಾಜಕೀಯ ಸಂಕಟ ತಂದಿದೆ. ಈ ಇಬ್ಬರು ಯುದ್ಧ-ಕೋರರನ್ನು 'ಇರಾಕ್ ದಾಳಿಯ ಭೂತ' ವಿಪರೀತವಾಗಿ ಕಾಡತೊಡಗಿದೆ.

ಈ ಬಾರಿಯ ದ್ವಿ-ವಾರ್ಷಿಕ ಡಾಕ್ಯುಮೆಂಟರಿ ಫಿಲಂಗಳ ಅಂತ್ರರಾಷ್ಟ್ರೀಯ ಉತ್ಸವಕ್ಕೂ ಕೇಸರೀಕರಣದ ಭೂತ ಬಡಿಯಿತು. ಗುಜರಾತ್ ಹತ್ಯಾಕಾಂಡ ಮತ್ತಿತರ ರಾಜಕೀಯವಾಗಿ ಆಳುವ ಪಕ್ಷಗಳಿಗೆ 'ಸಂಕಟ' ತರುವ ಮೂವತ್ತು ಫಿಲಂಗಳನ್ನು ಉತ್ಸವದಲ್ಲಿ ಸರ್ಕಾರದ ಒತ್ತಡದಿಂದ ಕೈಬಿಡಲಾಯಿತು. ಇದರ ವಿರುದ್ಧ ವ್ಯಾಪಕ ಪ್ರತಿಭಟನೆ, ಮುಂಬಯಿಯಲ್ಲೇ ಬದಲಿ ಫಿಲಂ ಉತ್ಸವ 'ವಿಕಲ್ಪ' ದಲ್ಲಿ ಆ 30 ಫಿಲಂಗಳನ್ನು ತೋರಿಸುವ ಮೂಲಕ ಯಶಸ್ವಿಯಾಗಿದೆ. ಫಿಲಂ ಜ್ಯೂರಿ ಮುಖ್ಯಸ್ಥ ಗಿರೀಶ್ ಕಾರ್ನಾಡ್‌ರ ರಾಜೀನಾಮೆ ಸಹ ಪ್ರತಿಭಟನೆಯ ಭಾಗವಾಗಿತ್ತು. ಎಲ್ಲಾ ಕಲಾವಿಭಾಗಗಳಲ್ಲೂ ಕೇಸರೀಕರಣದ ವಿರುದ್ಧ ಹೋರಾಟದ ಪ್ರಮುಖ ಭಾಗವಿದು. ಈ 'ವಿಕಲ್ಪ' ಉತ್ಸವ ಮುಂಬಯಿಯ ಭೂಪೇಶ್ ಗುಪ್ತ ಭವನ (ಸಿಪಿಐ ಯ ಮಹಾರಾಷ್ಟ್ರ ಸಮಿತಿ ಕಛೇರಿ)ಯಲ್ಲಿ ನಡೆಯಿತು ಎನ್ನುವುದೂ ಆಸಕ್ತಿಕಾರಕ.

'ಫಿಲಂ ಉತ್ಸವ'ಕ್ಕೂ ಬಡಿದ ಕೇಸರೀಕರಣದ ಭೂತ ಬದಲಿ ಡಾಕ್ಯುಮೆಂಟರಿ ಫಿಲಂ ಉತ್ಸವ-'ವಿಕಲ್ಪ'

1990 ರಿಂದ ಕೇಂದ್ರ ಸರ್ಕಾರದ ಫಿಲಂ ಡಿವಿಜನ್ ಒಂದು ವಿಶಿಷ್ಟ ಕಾರ್ಯಕ್ರಮ ಹಮ್ಮಿಕೊಂಡಿತ್ತು. ದ್ವಿ-ವಾರ್ಷಿಕ ಡಾಕ್ಯುಮೆಂಟರಿ ಫಿಲಂಗಳ ಅಂತರ್ರಾಷ್ಟ್ರೀಯ ಉತ್ಸವವೇ ಅದು. MIFF(ಮುಂಬಯಿ ಅಂತರ್ರಾಷ್ಟ್ರೀಯ ಫಿಲಂ ಉತ್ಸವ) ಅದರ ಹೆಸರು. ಬರಬರುತ್ತಾ ಅದು ಜನಪ್ರಿಯವಾಗಿ, ಅಂತರ್ರಾಷ್ಟ್ರೀಯವಾಗಿಯೂ ಹೆಸರು ಗಳಿಸಿತು. 90ರ ದಶಕದಲ್ಲಿ ಕಲಾತ್ಮಕವಾದ ಸಾಮಾಜಿಕವಾಗಿ ಅರ್ಥಪೂರ್ಣ ಡಾಕ್ಯುಮೆಂಟರಿ ಫಿಲಂ ಕಲಾವಿದರಿಗೆ ಉತ್ತಮ ವೇದಿಕೆಯಾಗಿ ಅದು ಹೊಮ್ಮಿತು. ಅದೇ ಸಮಯದಲ್ಲಿ ಕೇಸರೀಕರಣದ ವಿಷ ದೇಶದ ರಾಜಕೀಯ-ಸಮಾಜದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಏರುತ್ತಿದ್ದರೂ, 'ಮಿಫ್' ಮೇಲೆ ಹೆಚ್ಚು ಪರಿಣಾಮ ಬೀರಲಿಲ್ಲ. ಆದರೆ 2002ರ 'ಮಿಫ್' ಉತ್ಸವ ಕೇಸರಿ ಪಡೆಗಳ ನಿದ್ದೆ



ಕೆಡಿಸಿತು. ಅವರೆಗೆ 'ಮಿಫ್' ಅಪಾಯಕಾರಿ ಆದ ತಮ್ಮ ಯೋಜನೆಗಳಿಗೆ ತೊಂದರೆ ಮಾಡಲಾರರು ಎಂದಿದ್ದ ಕೇಸರಿ ಪಡೆಗಳು ಆರಾಮವಾಗಿದ್ದರೂ ಆನಂದ ಪಟವರ್ಧನರ 'ವಾರ್ ಅಂಡ್ ಪೀಸ್' ಸಂಘ ಪರಿವಾರದ ಯುದ್ಧಕೋರತನಕ್ಕೆ 'ಶಾಕ್' ಕೊಟ್ಟಿತು. ಆ ಫಿಲಂ ಸೆನ್ಸಾರ್ ತೊಂದರೆಗೆ ಸಿಕ್ಕಿ ನಮ್ಮ ದೇಶದಲ್ಲೇ ಬಿಡುಗಡೆಯಾಗದಿದ್ದರೂ, 2002 ರ'ಮಿಫ್' ನಲ್ಲಿ ಆ ಫಿಲಂ ಉನ್ನತ ಪ್ರಶಸ್ತಿ ಗಳಿಸಿತು. ಆಮೇಲೂ ಅದರ ಮೇಲೆ ಸೆನ್ಸಾರ್ ಬೋರ್ಡ್ ಕತ್ತರಿ ಪ್ರಯೋಗಿಸಲು ಪ್ರಯತ್ನಿಸಿತು. ನಿರ್ದೇಶಕ ಕೋರ್ಟಿಗೆ ಹೋರಾಟ ಒಯ್ದರು. ಫಿಲಂಗೆ ಯಾವುದೇ ಕತ್ತರಿ ಪ್ರಯೋಗ ಮಾಡಬಾರದು ಮತ್ತು ಸರ್ಕಾರದ ನೀತಿಗೆ ಹಾಕಿದ ಛೀಮಾರಿ-ಸಂಘ ಪರವಾರ, ಸರ್ಕಾರದ ಕಣ್ಣು ಕೆಂಪಗೆ ಮಾಡಿತು.

ಗುಜರಾತ್ ಹತ್ಯಾಕಾಂಡ ಮತ್ತು ಸಂಘ ಪರಿವಾರದ ಇತರ ಹುನ್ನಾರಗಳ ಬಗ್ಗೆ ನಿರ್ಭೀತ ಕಲಾವಿದರು ಡಾಕ್ಯುಮೆಂಟರಿಗಳೂ ರಚಿಸಿದ್ದಾರೆ. ಇವು 2004 ರ 'ಮಿಫ್' ಉತ್ಸವದಲ್ಲಿ ಪ್ರದರ್ಶಿತವಾಗಿ ಅಂತರ್ರಾಷ್ಟ್ರೀಯ ಸುದ್ದಿ ಮಾಡುತ್ತಿವೆ. ಸಂಘ ಪರಿವಾರ ಮತ್ತು ಬಿಜೆಪಿಗೆ ರಾಜಕೀಯವಾಗಿ 'ಅವಮಾನಕಾರಿ' ಯಾಗಿರುತ್ತದೆ ಎಂಬ ಬಗ್ಗೆ ಅವರಿಗೆ ಯಾವುದೇ ಅನುಮಾನವಿರಲಿಲ್ಲ. ಇದು ಆಗದಂತೆ ತಡೆಯಲು ಹುನ್ನಾರಗಳನ್ನು ಆರಂಭಿಸಿದರು. 2004 ರ 'ಮಿಫ್' ನಲ್ಲಿ ಭಾಗವಹಿಸುವ ಇಂಡಿಯಾದ ಫಿಲಂಗಳು ಸೆನ್ಸಾರ್ ಬೋರ್ಡ್ ಮಂಜೂರು ಮಾಡಿದವು ಆಗಿರಬೇಕು ಎಂದು ಮೊದಲು ವಿಧಿಸಲಾಯಿತು. ಇದಕ್ಕೆ ವ್ಯಾಪಕ ವಿರೋಧ ವ್ಯಕ್ತವಾಯಿತು. 275 ಕ್ಕೂ ಹೆಚ್ಚು ಫಿಲಂ ಕಲಾವಿದರು ನಡೆಸಿದ ಪ್ರಚಾರ-ಪ್ರಕ್ಷೋಭೆ ಈ ಹುನ್ನಾರವನ್ನು ವಿಫಲಗೊಳಿಸಿತು. ಸರ್ಕಾರ 'ಸೆನ್ಸಾರ್' ಬಗ್ಗೆ ಒತ್ತಾಯ ಮುಂದುವರಿಸಿದರೆ 'ಮಿಫ್' ಉತ್ಸವವನ್ನು ಬಹಿಷ್ಕರಿಸಲಾಗುವುದು ಎಂಬ ಬೆದರಿಕೆ ಕೆಲಸ ಮಾಡಿತು. ಆದರೆ ಸರ್ಕಾರ ಇನ್ನೊಂದು ಹುನ್ನಾರ ನಡೆಸಿತು. 'ಮಿಫ್' ಉತ್ಸವದಲ್ಲಿ ಇಂಡಿಯಾದ ಫಿಲಂಗಳ ಆಯ್ಕೆಯಲ್ಲಿ ಕೈಯಾಡಿಸಿತು. ಗುಜರಾತ್ ಹತ್ಯಾಕಾಂಡ ಸೇರಿದಂತೆ ಸಂಘ ಪರಿವಾರಕ್ಕೆ ತಳಮಳ ತರುವ ಸುಮಾರು 30 ಫಿಲಂಗಳನ್ನು ಉತ್ಸವದಿಂದ ಕೈಬಿಡಲಾಯಿತು. ಇದಕ್ಕೂ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಫಿಲಂ ಕಲಾವಿದರು 'ಮಿಫ್' ನ್ನು ಬಹಿಷ್ಕರಿಸುವ ಬದಲು, 'ತಿರಸ್ಕರಿಸಲಾದ' ಉತ್ತಮ ಫಿಲಂಗಳ ಬದಲಿ ಫಿಲಂ ಉತ್ಸವ ನಡೆಸುವುದಾಗಿ ಘೋಷಿಸಿತು. ಇವುಗಳಲ್ಲಿ ಹಲವು ಈಗಾಗಲೇ ಅಂತರ್ರಾಷ್ಟ್ರೀಯ ಪ್ರಶಸ್ತಿ ಗಳಿಸಿದವು. ಈ ಪ್ರತಿಭಟನೆ ಗರಿಗೆದರಿಕೊಂಡು, 'ಮಿಫ್' ಗೆ ಆಯ್ಕೆಯಾದ 14 ಫಿಲಂಗಳ ನಿರ್ದೇಶಕರು ತಮ್ಮ ಫಿಲಂಗಳನ್ನು ಪ್ರತಿಭಟನೆಯಾಗಿ ಹಿಂತೆಗೆದುಕೊಂಡರು. 'ಮಿಫ್' ಉತ್ಸವದ ಪ್ರಶಸ್ತಿ ಸಮಿತಿ (ಜ್ಯೂರಿ)ಯ ಮುಖ್ಯಸ್ಥರಾಗಿದ್ದ ಗಿರೀಶ್ ಕಾರ್ನಾಡ್ ಫಿಲಂ ಕಲಾವಿದರ ಪ್ರತಿಭಟನೆಗೆ ಸಹಾನುಭೂತಿ ತೋರಿಸಿ ರಾಜಿನಾಮೆ ಇತ್ತರು.

ಫಿಲಂ ಕಲಾವಿದರಿಗೆ ಮತ್ತು ಜನತೆಗೆ ಉತ್ತಮ ವೇದಿಕೆಯ 'ಮಿಫ್' ನ್ನು ಆಗಗೊಡದರ ಬದಲು, 'ವಿಕಲ್ಪ' ಎಂಬ ಬದಲಿ ಫಿಲಂ ಉತ್ಸವ ನಡೆಸಲು ನಿರ್ಧರಿಸಲಾಯಿತು. 'ಮಿಫ್' ಉತ್ಸವಕ್ಕೆ ಪೂರಕವಾಗಿ ನಡೆಸಲು ಫಿಲಂ ಕಲಾವಿದರು ಹತ್ತಿರದಲ್ಲೇ ಜಾಗಕ್ಕೆ ಹುಡುಕಾಟ ನಡೆಸಿದರು. ಹತ್ತಿರದಲ್ಲೇ ಇದ್ದ ಸಿಪಿಐ ಯ ಮಹಾರಾಷ್ಟ್ರ ಘಟಕದ ಕಟ್ಟಡ 'ಭೂಪೇಶ್ ಗುಪ್ತ ಭವನ' ಉಚಿತವಾಗಿ ಸಿಪಿಐ ಕೊಟ್ಟಿತು.



ಫಿಲಂ ಪ್ರದರ್ಶನಕ್ಕೆ ಯೋಗ್ಯವಲ್ಲದಿದ್ದರೂ ಉತ್ಸಾಹಿ ಕಲಾವಿದರು, ಸ್ವಯಂ ಸೇವಕರು ತಾತ್ಕಾಲಿಕ ವ್ಯಾಪಾರ್ಡು ಮಾಡಿ ಪ್ರದರ್ಶನಕ್ಕೆ ತಕ್ಕುದಾಗಿ ಮಾಡಿದರು. 'ವಿಕಲ್ಪ' ಕ್ಕೆ ಉತ್ಸಾಹದ ಪ್ರತಿಸ್ಪಂದನ ದೊರಕಿತು. ಪ್ರತಿ ಫಿಲಂ ಪ್ರದರ್ಶನ ತುಂಬಿ ತುಳುಕುತ್ತಿತ್ತು.

'ವಿಕಲ್ಪ' ಮಹತ್ವದ ಬೆಳವಣಿಗೆ. ಅದು 'ಭೂಪೇಶ ಗುಪ್ತಾ ಭವನ' ದಲ್ಲಿ ನಡೆದ್ದದು ಇನ್ನಷ್ಟು ಮಹತ್ವದ್ದು. ಕೇಸರೀಕರಣಕ್ಕೆ ಎಲ್ಲಾ ಕ್ಷೇತ್ರಗಳಲ್ಲಿ ಪ್ರತಿರೋಧ ಬರುತ್ತದೆ ಎಂಬುದೇ ಆಶಾದಾಯಕ. ಆದರೆ ಕಲಾ ಅಭಿವ್ಯಕ್ತಿ ಮೇಲೆ ಧಾಳಿ, ಕಲಾಕ್ಷೇತ್ರದ ಕೇಸರೀಕರಣದ ವಿರುದ್ಧ ಹೋರಾಟ ಮುಂದೆ ಸಾಗಬೇಕಾಗಿದೆ.

ರಾಜಕೀಯ ಪ್ರಾಮಾಣಿಕತೆಗೆ ಬಿಜೆಪಿಯಲ್ಲಿ ಸ್ಥಾನವಿದೆಯೇ?

ಪುಟ 5 ರಿಂದ

ಆಳರಸರ ರಾಜಕೀಯದಿಂದ ಸಾಕುಸಾಕೆನಿಸಿದಾಗ ಬಿಜೆಪಿ ತಾನು 'ಭಿನ್ನ ರೀತಿಯ ಪಕ್ಷ' ಎಂದು ಹೇಳಿಕೊಂಡಿತು. ಒಮ್ಮೆ ಅಧಿಕಾರಕ್ಕೆ ಬಂದವೆಂದರೆ ಜನಗಳ ಬದುಕಿನಲ್ಲಿ ಅಪಾರ ಬದಲಾವಣೆ ತರುತ್ತೇವೆ ಎಂದು ಅವರು ಜನರನ್ನು ನಂಬಿಸಿದರು. ಇದಕ್ಕೆ ಅವರಿಗೆ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ಹತೋಟಿಯ ಮಾಧ್ಯಮಗಳೂ ನೆರವಾದವು. ಅದಕ್ಕೆ ತಮ್ಮ ಸ್ವಾರ್ಥ ಸಾಧನೆಯೂ ಆಗಬೇಕಿತ್ತು. ಯಾರೂ ಬರಿ ಹೊಟ್ಟೆಯಲ್ಲಿ ಮಲಗಬೇಕಿಲ್ಲ, ಜಾತಿ, ಕೋಮು ಗಲಭೆಗಳ ಭಯಬೇಡ, ಭ್ರಷ್ಟಾಚಾರವನ್ನು ನಿರ್ಮೂಲ ಮಾಡಲಾಗುತ್ತದೆ, ಯಾರೂ ಅಶಿಕ್ಷಿತರಾಗಿ, ನಿರುದ್ಯೋಗಿಗಳಾಗಿ ಉಳಿಯುವುದಿಲ್ಲ ಇತ್ಯಾದಿ ಏನೇನೋ ಭರವಸೆ ನೀಡಲಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ, ಜರ್ಮನಿಯಲ್ಲಿ 1933 ರಲ್ಲಿ ಹಿಟ್ಲರ್ ಎಲ್ಲ ರೀತಿಯ ಭರವಸೆಗಳನ್ನು ನೀಡಿದಂತೆ ಬಿಜೆಪಿ ಜನಸಮೂಹಗಳನ್ನು ಭೂಸ್ವರ್ಗದ ಕನಸು ನೀಡಿ ಆಕರ್ಷಿಸಿತು.

ಆದರೆ ಇವರು ಈ ಭರವಸೆಗಳನ್ನೆಲ್ಲಾ ನಿರ್ದಯವಾಗಿ ಮುಂದೆ ಹಾಕಲಾಗಿದೆ. ಮೋಸಗಾರರ ಗುಂಪೊಂದು ತಮ್ಮನ್ನು ವಂಚಿಸಿದ ದುರಂತವನ್ನು ಜನ ಕಾಣುತ್ತಿದ್ದಾರೆ.

ಮುಂದೇನು ಎಂಬುದೀಗ ಹಿಂದೆಂದಿಗಿಂತಲೂ ಅತ್ಯಂತ ಸ್ಪಷ್ಟವಾಗಿದೆ. ಬಿಜೆಪಿಗೂ ಇದು ಚೆನ್ನಾಗಿ ಗೊತ್ತಿದೆ. ಈ ಇಕ್ಕಟ್ಟಿನಿಂದಾಗಿಯೇ ಬಿಜೆಪಿ ಮುಂದಿನ ಚುನಾವಣೆಗಳಲ್ಲಿ ಭಾರಿ ಪರಾಭವವನ್ನು ತಪ್ಪಿಸಲು ಎಲ್ಲಾ ಹೊಲಸು ಮಾರ್ಗಗಳನ್ನು ಅನುಸರಿಸುತ್ತಿದೆ. ಡಿ.ಪಿ.ಯಾದವ್ ಪ್ರಕರಣ ಇದನ್ನೇ ಎತ್ತಿ ತೋರಿದೆ. ಹಿಂದೂಸ್ತಾನ್ ಟೈಮ್ಸ್ ಪ್ರಕಾರ ಉತ್ತರ ಪ್ರದೇಶದ ಪಶ್ಚಿಮ ಭಾಗದಲ್ಲಿ ಸಮಾಜವಾದಿ ಪಕ್ಷ ಮತ್ತು ಇತರ ಪಕ್ಷಗಳ ಭುಜಬಲವನ್ನು ಈತನಿಂದ ಮಾತ್ರ ಎದುರಿಸಲು ಸಾಧ್ಯ ಎಂದು ಅವರ ನಂಬಿಕೆ. 1998 ರಲ್ಲಿ ಆತ ಸಮಾಜವಾದಿ ಪಕ್ಷದ ವಿರುದ್ಧ ಬಿಜೆಪಿ ಅಭ್ಯರ್ಥಿ ಆಗಿದ್ದ. ಕಳೆದ ಬಾರಿ ಎನ್‌ಡಿಎ ದ ಭಾಗವಾಗಿದ್ದ ಅಜಿತ್ ಸಿಂಗರ ರಾಷ್ಟ್ರೀಯ ಲೋಕದಳದ ಪ್ರಭಾವವನ್ನು ಬಳಸಿ ಈ ಭಾಗದಲ್ಲಿ ಹಲವು ಸೀಟುಗಳನ್ನು ಗೆಲ್ಲಲಾಗಿತ್ತು. ಈಗ ಅವರು ಎನ್‌ಡಿಎಯನ್ನು ಒದ್ದು ಹೊರಬಂದಿದ್ದಾರೆ. ಹೀಗಿರುವಾಗ ಬಿಜೆಪಿಯ ಆತಂಕವನ್ನು ಅರ್ಥಮಾಡಿಕೊಳ್ಳಬೇಕು. ಏಕೆಂದರೆ ಪೂರ್ವ ಯುಪಿಯಲ್ಲಿ ಅದು ಈಗಾಗಲೇ ಹಲವು ಕ್ಷೇತ್ರಗಳನ್ನು ಕಳಕೊಂಡಿದೆ.

ರಾಜಕೀಯ ಕಳ್ಳ ಸಾಗಾಣಿಕೆದಾರರು!

ಇನ್ನು, ಎನ್‌ಡಿಎ ನ್ನು ಒದ್ದು ಹೊರಬಂದವರು ಅಜಿತ್‌ಸಿಂಗರ ಪಕ್ಷ ಮಾತ್ರವಲ್ಲ, ನ್ಯಾಶನಲ್ ಕಾನ್ಫರೆನ್ಸ್ (ಜಮ್ಮು-ಕಾಶ್ಮೀರ), ಹಿಮಾಚಲ್ ವಿಕಾಸ್ ಪಾರ್ಟಿ(ಹಿಮಾಚಲ ಪ್ರದೇಶ), ಹರ್ಯಾಣ ವಿಕಾಸ್ ಪಾರ್ಟಿ ಮತ್ತು ಇಂಡಿಯನ್ ನ್ಯಾಶನಲ್ ಲೋಕದಳ (ಹರ್ಯಾಣ) ಲೋಕ ಜನ ಶಕ್ತಿ(ಮುಖ್ಯವಾಗಿ ಬಿಹಾರ), ಡಿಎಂಕೆ, ಪಿಎಂಕೆ ಮತ್ತು ಎಂಡಿಎಂಕೆ (ಎಲ್ಲವೂ ತಮಿಳುನಾಡು), ಎಂಜಿಪಿ(ಗೋವಾ) ಮತ್ತು ಕೆಲವರು ಈಗಾಗಲೇ ಒಂದೊಂದಾಗಿ ಎನ್‌ಡಿಎದಿಂದ ದೂರ ಹೋಗಿದ್ದಾರೆ. ಅದೇ ವೇಳೆಗೆ ಬಿಜೆಪಿಯ ಮಿತ್ರರಾದ ಬಿಜೆಡಿ(ಒರಿಸ್ಸಾ), ಸಮತಾ ಪಾರ್ಟಿ(ಮುಖ್ಯವಾಗಿ ಬಿಹಾರ), ಮತ್ತು ಟಿಎಂಸಿ(ಪಶ್ಚಿಮಬಂಗಾಳ) ಈಗಾಗಲೇ ಒಡೆದು, ಈಗಲೂ ಆಂತರಿಕ ಭಿನ್ನಾಭಿಪ್ರಾಯಗಳಿಂದ ನರಳುತ್ತಿವೆ. ಅಸ್ಸಾಂನ ಎಜಿಸಿ ಕಳೆದ ಬಾರಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡು ಸ್ಪರ್ಧಿಸಿ ಒಂದೂ ಸ್ಥಾನ ಪಡೆದಿರಲಿಲ್ಲ. ಈ ಬಾರಿ ಅದು ಏಕಾಂಗಿಯಾಗಿ ಸ್ಪರ್ಧಿಸುವುದಾಗಿ ಪ್ರಕಟಿಸಿದೆ.

ಇಂತಹ ಒಂದು ಸಂದರ್ಭದಲ್ಲಿ ಇಂದಿನ ಆಳುವ ಪಕ್ಷ ಚುನಾವಣಾ ಚೆಕ್‌ಪೋಸ್ಟ್ ದಾಟಲು ದೇವಸ್ಥಾನದ ಪ್ರಶ್ನೆಯಿಂದ ಡಿ.ಪಿ.ಯಾದವ್ ರಂತಹವರ ಬಳಕೆಯವರೆಗೆ ಸಾಧ್ಯವಾದ ಪ್ರತಿಯೊಂದು ಸಾಧನವನ್ನು ಬಳಸಲು ಪ್ರಯತ್ನಿಸುತ್ತಿದೆ. ಈ ವಿಷಯದಲ್ಲಿ ಅದರ ಪರಿಸ್ಥಿತಿ ಎಲ್ಲಾ ಗಡಿ ಚೆಕ್‌ಪೋಸ್ಟ್‌ಗಳನ್ನು ಹೇಗಾದರೂ ದಾಟಲು ಕಾತುರರಾಗಿರುವ ಕಳ್ಳಸಾಗಾಣಿಕೆ ದಾರರಂತಿದೆ. ಆದರೆ ಈ ರಾಜಕೀಯ ಕಳ್ಳ ಸಾಗಾಣಿಕೆದಾರರು ಬಳಸುವ ಹೊಲಸು ತಂತ್ರಗಳ ಬಗ್ಗೆ ಈಗ ದೇಶದ ಕೋಟ್ಯಾಂತರ ರಕ್ಷಕರಿಗೆ ಚೆನ್ನಾಗಿ ಗೊತ್ತಾಗಿದೆ ಎಂಬುದು ಬೇರೆ ಮಾತು. ಅವರು ಈ ಕಳ್ಳಸಾಗಾಣಿಕೆದಾರರನ್ನು ಒಂದೇ ಬೆಲೆಯಲ್ಲಿ ಹಿಡಿಯಲು ದೃಢ ನಿರ್ಧಾರ ಮಾಡಿದ್ದಾರೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee, Editor: S.Y. GURU...